بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّى عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 05

ಸಂಚಿಕೆ: 01–02

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

04, 11 ಜನವರಿ 2024, 04, 11 ಸುಲಹ್ 1403 ಹಿಜರಿ ಶಮ್ಸಿ,
21, 28 ಜಮಾದಿಲುಸ್ ಸಾನಿ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوا اسْتَجِيْبُوْا لِلّٰهِ وَلِلرَّسُوْلِ اِذَا دَعَاكُمْ لِمَا يُحْيِيْكُمْ (سورة الانفال:25)

(ಅಲ್ ಅನ್‌ಫಾಲ್: 25)

ಅಂದರೆ: ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಮತ್ತು ಸಂದೇಶವಾಹಕನಿಗೆ ಅವರು ನಿಮ್ಮನ್ನು ಬದುಕಿಸಲಿಕ್ಕಾಗಿ ಕರೆಯುವಾಗ ಓಗೊಡಿರಿ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಸುಳ್ಳು ಸಾಕ್ಷಿಯ ಮೂಲಕ ಇನ್ನೊಬ್ಬರ ಆಸ್ತಿಯನ್ನು ಪಡೆದುಕೊಳ್ಳುವ ವ್ಯಕ್ತಿಯು ಅಲ್ಲಾಹನನ್ನು ಎಂತಹ ಸ್ಥಿತಿಯಲ್ಲಿ ಭೇಟಿಯಾಗುತ್ತಾನೆ ಅಂದರೆ ಅಲ್ಲಾಹನು ಆತನಿಂದ ಬೇಸರಗೊಂಡಿರುವನು

**(2416–17)** ಹಝ್‌ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ ಹಝ್‌ರತ್ ಪೈಗಂಬರ್(ಸ) ಅವರು ಹೇಳಿದರು: "ಯಾರು ಪ್ರಮಾಣ ವಚನ ಸ್ವೀಕರಿಸುತ್ತಾರೋ ಅವರು ಅದರಲ್ಲಿ ಸುಳ್ಳುಗನಾಗಿದ್ದರೆ, ಮತ್ತು ಇದರ ಮೂಲಕ ( ಪ್ರಮಾಣ) ಓರ್ವ ಮುಸಲ್ಮಾನನ ಆಸ್ತಿಯು ಪಡೆದುಕೊಂಡರೆ. ಆತನು ಅಲ್ಲಾಹನನ್ನು ಆತನ ಮೇಲೆ ಕೋಪಗೊಂಡಿದುವ ಸ್ಥಿತಿಯಲ್ಲಿ ಭೇಟಿಯಾಗುತ್ತಾನೆ. ಹಝ್‌ರತ್ ಅಶ್‌ಅಸ್(ರ) ಹೇಳುತ್ತಿದ್ದರು: ಅಲ್ಲಹನ ಆಣೆ!! ಈ ಮಾತನ್ನು ಹಝ್‌ರತ್ ಪೈಗಂಬರ್(ಸ) ರವರು ನನ್ನ ಬಗ್ಗೆಯೇ ಹೇಳಿರುವರು. (ಘಟನೆ ಹೀಗಿತ್ತು) ನನ್ನ ಮತ್ತು ಓರ್ವ ಯಹೂದಿಯ ಒಮದು ಭೂಮಿ ಇತ್ತು ಆತನು (ಯಹೂದಿ) ನನ್ನನ್ನು ಆ ಭೂಮಿಯಲ್ಲಿ ಹಖ್ಖಿಲ್ಲ ಎಂದು ನಿರಾಕರಿಸಿದನು. ಆದ್ದರಿಂದ ನಾನು ಹಝ್‌ರತ್ ಪೈಗಂಬರ್(ಸ) ರವರ ಬಳಿ ಹೋದಾರ ರಸೂಲುಲ್ಲಾಹ್(ಸ) ರವರು ನನಗೆ ಕೇಳಿದರು: ನಿಮ್ಮ ಬಳಿ ಏನಾದರೂ ಪುರಾವೆಗಳಿವೆಯೇ? ಅದಕ್ಕೆ ನಾನು ಹೇಳಿದೆ: ಇಲ್ಲ (ಹಝ್‌ರತ್ ಅಶ್‌ಅಸ್) ಹೇಳುತ್ತಿದ್ದರು: ನೀವು(ಸ) ಆ ಯಹೂದಿಗೆ ಪ್ರಮಾಣ ಮಾಡಿ ಹೇಳಲು ಹೇಳಿದರು. ಅದಕ್ಕೆ (ಹಝ್‌ರತ್ ಅಶ್‌ಅಸ್) ಹೇಳುತ್ತಾರೆ: ಯಾ ರಸೂಲಲ್ಲಾಹ್! ಅವನು ಪ್ರಮಾಣ ಮಾಡುತ್ತಾನೆ ಮತ್ತು ನನ್ನ ಸಂಪತ್ತು ಹೋಗುತ್ತದೆ, ಆಗ ಸರ್ವಶಕ್ತನಾದ ಅಲ್ಲಾಹನು ಈ ವಚನವನ್ನು ಅವತರಿಸಿದನು: ಅಲ್ಲಾಹನ ಒಪ್ಪಂದ ಮತ್ತು ಅವರ ಪ್ರಮಾಣಗಳಿಗೆ ಪ್ರತಿಯಾಗಿ ಸಣ್ಣ ಮೊತ್ತವನ್ನು ತೆಗೆದುಕೊಳ್ಳುವವರು. **(ಸಹೀಹ್ ಬುಖಾರಿ, ಸಂಪುಟ 4, ಕಿತಾಬ್ ಅಲ್–ಖುಸುಮಾತ್, 2008 ಖಾದಿಯಾನ್ ಪ್ರಕಟಿತ)**

ಯಾರಾದರು ಮೋಕ್ಷಗಳಿಸಲು ಬಯಸಿದರೆ ಮತ್ತು ಪರಿಶುದ್ಧ ಜೀವನ ಅಥವಾ ಶಾಶ್ವತ ಜೀವನ ಬಯಸಿದಲ್ಲಿ ಅವರು ತಮ್ಮ ಜೀವನವನ್ನು ಅಲ್ಲಾಹನಿಗೆ ಸಮರ್ಪಿಸಬೇಕು ಮತ್ತು ಪ್ರತಿಯೊಬ್ಬರೂ ಈ ಶ್ರೇಣಿ ಮತ್ತು ಸ್ಥಾನಮಾನವನ್ನು ಸಾಧಿಸಲು ಪ್ರಯತ್ನಿಸಬೇಕು ಮತ್ತು ಚಿಂತಿಸಬೇಕು.

ಎಲ್ಲಿಯವರೆಗೆ ಒಬ್ಬ ವ್ಯಕ್ತಿಯು ದೇವರಲ್ಲಿ ತಲ್ಲೀನಾಗದ ಹೊರತು, ದೇವರಲ್ಲಿ ಇದ್ದು ಸಾಯುವುದಿಲ್ಲವೊ ಅವನು ಹೊಸ ಜೀವನವನ್ನು ಕಂಡುಕೊಳ್ಳಲು ಸಾಧ್ಯವಿಲ್ಲ

ಒಬ್ಬ ವ್ಯಕ್ತಿಯು ತನ್ನ ಜೀವನವನ್ನು ಅಲ್ಲಾಹನಿಗೆ ಮುಡಿಪಾಗಿಡದಿದ್ದರೆ, ಅಂತಹ ಜನರಿಗೆ ಅಲ್ಲಾಹನು ನರಕವನ್ನು ಸೃಷ್ಟಿಸಿದ್ದಾನೆ ಎಂಬುದನ್ನು ಅವನು ನೆನಪಿಸಿಕೊಳ್ಳಬೇಕು

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಸ್ವತಃ ನಾನೇ ಈ ಮಾರ್ಗದಲ್ಲಿ ಸಂಪೂರ್ಣ ಅನುಭವವನ್ನು ಹೊಂದಿದ್ದೇನೆ ಮತ್ತು ಸರ್ವಶಕ್ತನಾದ ಅಲ್ಲಾಹನ ಕೃಪೆ ಮತ್ತು ಅನುಗ್ರಹದಿಂದ ಮಾತ್ರ ನಾನು ಈ ಸೌಕರ್ಯ ಮತ್ತು ಆನಂದವನ್ನು ಅನುಭವಿಸಿದ್ದೇನೆ, ನಾನು ಬಯಸುವುದೇನೆಂದರೆ ಅಲ್ಲಾಹನ ಮಾರ್ಗದಲ್ಲಿ ಜೀವನವನ್ನು ಮುಡುಪಾಗಿಡಲು ಮರಣ ಹೊಂದಿ ಜೀವಿತವಾದರೆ ಮತ್ತೆ ಮರಣ ಹೊಂದಿ ಪುನಃ ಜೀವಿತವಾದರೆ ಪ್ರತಿಯೊಂದು ಬಾರಿ ನನ್ನ ಉತ್ಸಾಹವು ಸಂತೋಷದಿಂದ ಹೆಚ್ಚಾಗುತ್ತದೆ.

ಆದುದರಿಂದ, ನಾನೇ ಸ್ವತಃ ಅನುಭವಿಯಾಗಿದ್ದೇನೆ ಮತ್ತು ಅನುಭವಿಸಿದವನಾಗಿದ್ದೇನೆ ಮತ್ತು ಅಲ್ಲಾಹನು ನನಗೆ ಈ ವಕ್ಫ್‌ನ ಉತ್ಸಾಹವನ್ನು ನೀಡಿದ್ದಾನೆ, ಈ ವಕ್ಫ್‌ನಲ್ಲಿ ಯಾವುದೇ ಪ್ರತಿಫಲ ಅಥವಾ ಪ್ರಯೋಜನವಿಲ್ಲ ಬದಲಿಗೆ ನೋವು ಮತ್ತು ದುಃಖ ಮಾತ್ರವಿದೆ ಎಂದು ಹೇಳಿದರೂ, ನಾನು ಇಸ್ಲಾಂ ಧರ್ಮದ ಸೇವೆಯನ್ನು ನಿಲ್ಲಿಸಲು ಸಾಧ್ಯವಿಲ್ಲ, ಆದ್ದರಿಂದ ನಾನು ನನ್ನ ಜಮಾಅತ್ತಿಗೆ ಸಲಹೆ ನೀಡುವುದು ಮತ್ತು ಈ ಸಂದೇಶವನ್ನು ನೀಡುವುದು ನನ್ನ ಕರ್ತವ್ಯವೆಂದು ಪರಿಗಣಿಸುತ್ತೇನೆ. ಅದನ್ನು ಕೇಳುವುದು ಅಥವಾ ಕೇಳದಿರುವುದು ಅವರಿಗೆ ಬಿಟ್ಟದ್ದು! ಯಾರಾದರೂ ಮೋಕ್ಷವನ್ನು ಬಯಸಿ ಪರಿಶುದ್ಧ ಜೀವನ ಅಥವಾ ಶಾಶ್ವತ ಜೀವನವನ್ನು ಬಯಸುತ್ತಿದ್ದರೆ, ಅವನು ತನ್ನ ಜೀವನವನ್ನು ಅಲ್ಲಾಹನಿಗೆ ಮುಡಿಪಾಗಿಡಬೇಕು ಮತ್ತು ಅವನು ನನ್ನ ಜೀವನ, ನನ್ನ ಮರಣ, ನನ್ನು ಬಲಿದಾನ, ನನ್ನ ನಮಾಝ್ ಅಲ್ಲಾಹನಿಗೆ ಮಾತ್ರವಿದೆ ಎಂದು ಹೇಳುವ ಮಟ್ಟ ಮತ್ತು ಸ್ಥಾನಮಾನವನ್ನು ಪಡೆಯಬೇಕೆಂದು ಎಲ್ಲರೂ ಪ್ರಯತ್ನಿಸಬೇಕು ಮತ್ತು ಚಿಂತಿಸಬೇಕು. ಮತ್ತು ಹಝ್‌ರತ್ ಇಬ್ರಾಹೀಮ್‌ನಂತೆ ಅವನ ಆತ್ಮವು **ಅಸ್ಲಮ್‌ತು ಲಿರಬ್ಬಿಲ್ ಆಲಮೀನ್** (ಅಲ್‌ಬಖರ:132) ಅಂದರೆ ಸರ್ವಲೋಕಗಳ ಪರಿಪಾಲಕನಾದ ಒಡೆಯನಿಗೆ ನಾನು ಶರಣಾಗಿದ್ದೇನೆ ಎಂದು ಹೇಲಬೇಕು. ಎಲ್ಲಿಯ ವರೆಗೆ ಮನುಷ್ಯನು ದೇವರಲ್ಲಿ ತಲ್ಲೀನ ಆಗದ ಹೊರತು, ದೇವನಲ್ಲಿ ಸಾಯುವುದಿಲ್ಲವೊ ಅವನು ಹೊಸ ಜೀವನವನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ.

ಆದ್ದರಿಂದ ನನ್ನೊಂದಿಗೆ ಸಂಬಂಧ ಹೊಂದಿರುವ ನೀವು, ದೇವರಿಗಾಗಿ ಜೀವನವನ್ನು ಸಮರ್ಪಿಸುವುದು ನನ್ನ ಜೀವನದ ಮುಖ್ಯ ಉದ್ದೇಶವೆಂದು ನಾನು ಪರಿಗಣಿಸುತ್ತೇನೆ ಎಂದು ನೀವು ನೋಡುತ್ತೀರಿ. ಹಾಗಾದರೆ ನೀವು ನಿಮ್ಮಲ್ಲಿ ಎಷ್ಟು ಜನ ನನ್ನ ಈ ಕಾರ್ಯವನ್ನು ನಿಮಗಾಗಿ ಪ್ರೀತಿಸುತ್ತೀರಿ ಮತ್ತು ನಿಮ್ಮ ಜೀವನವನ್ನು ದೇವರಿಗೆ ಅರ್ಪಿಸುವುದನ್ನು ಪಾಲಿಸುತ್ತೀರಿ ಎಂದು ಪರಿಶೀಲಿಸಿಕೊಳ್ಳಿ.

ಒಬ್ಬ ವ್ಯಕ್ತಿಯು ತನ್ನ ಜೀವನವನ್ನು ಅಲ್ಲಾಹನಿಗೆ ಮುಡಿಪಾಗಿಡದಿದ್ದರೆ, ಅಂತಹ ಜನರಿಗೆ ಅಲ್ಲಾಹನು ನರಕವನ್ನು ಸೃಷ್ಟಿಸಿದ್ದಾನೆ ಎಂಬುದನ್ನು ಅವನು ನೆನಪಿಸಿಕೊಳ್ಳಬೇಕು. ಕೆಲವಿ ಮೂರ್ಖರು ಮತ್ತು ಅಜ್ಞಾನಿಗಳು ಪ್ರತಿಯೊಬ್ಬ ವ್ಯಕ್ತಿಯು ನರಕಕ್ಕೆ ಹೋಗಲೇಬೇಕು ಎಂದು ಅರ್ಥಮಾಡಿಕೊಂಡಿದ್ದಾರೆ ಅದು ಅವರ ತಪ್ಪು ಗ್ರಹಿಕೆಯಾಗಿದೆ ಎಂದು ಈ ಆಯತ್ ಸ್ಪಷ್ಟವಾಗಿ ತಿಳಿಯುತ್ತದೆ. ಹೌದು, ನರಕದ ಶಿಕ್ಷೆಯಿಂದ ಸಂಪೂರ್ಣವಾಗಿ ಸುರಕ್ಷಿತರಾಗಿರುವವರು ಕಡಿಮೆ ಪ್ರಮಾಣದಲ್ಲಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ ಮತ್ತು ಇದು ಆಶ್ಚರ್ಯವೇನಿಲ್ಲ. ಅಲ್ಲಾಹನು ಹೇಳುತ್ತಾನೆ: **ಖಲೀಲುಮ್ಮಿನ್ ಇಬಾದಿ ಯಶ್ಶಕೂರು** (ಸಬಾ: 14) ನನ್ನ ಆರಾಧಕರಲ್ಲಿ ಕೃತಜ್ಞರು ಬಹಳ ವಿರಳರಾಗಿದ್ದಾರೆ.

**(ಮಲ್‌ಫೂಝಾತ್, ಸಂಪುಟ–1, ಪುಟ–501, ಪ್ರಕಟಿತ 2018, ಖಾದಿಯಾನ್)**

### ದಿವ್ಯದೂತರು (ಮಲಾಯಿಕ)

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾವ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

### ಅಂತಿಮ ವಿಜಯ

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು. **(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**

# ಖುತ್‌ಬ ಜುಮುಅ

ವಲಸೆಯ ನಂತರ ಮುಸ್ಲಿಮರು ಮತ್ತು ಯಹೂದಿಗಳ ನಡುವಿನ ಒಪ್ಪಂದದ ಪ್ರಕಾರ, ಹಝ್ರತ್ ಪೈಗಂಬರ್ (ಸ) ಅವರಿಗೆ ಸಾಮಾನ್ಯ ನಾಗರಿಕನ ಸ್ಥಾನಮಾನ ಇರಲಿಲ್ಲ ಬದಲಿಗೆ ಅವರು(ಸ) ಈ ಪ್ರಜಾಪ್ರಭುತ್ವ ರಾಷ್ಟ್ರದ ಅಧ್ಯಕ್ಷರಾಗಿದ್ದರು ಮತ್ತು ಹಝ್ರತ್ ಪೈಗಂಬರ್(ಸ) ಅವರನ್ನು ಎಲ್ಲ ಜಗಳಗಳಲ್ಲಿ ಮತ್ತು ರಾಜಕೀಯ ವಿಷಯಗಳಲ್ಲಿ ಸಮಂಜಸವೆಂದು ತೋರುವ ತೀರ್ಪನ್ನು ಹೊರಡಿಸಲು ಹಝ್ರತ್ ಪೈಗಂಬರ್(ಸ)ರಿಗೆ ಅಧಿಕಾರ ನೀಡಲಾಗಿತ್ತು.

ದೇಶದಲ್ಲಿ ಶಾಂತಿ ನೆಲೆಸಲಿಕ್ಕಾಗಿ ಕಅ್‌ಬ್‌ನ ಪಿತೂರಿಯ ಕಾರಣದಿಂದ ಆತನನ್ನು ವಧೆಶಿಕ್ಷೆಗೆ ಅರ್ಹನೆಂದು ಹಝ್ರತ್ ಪೈಗಂಬರ್(ಸ) ವಿಧಿಸಿದರೆ, ಹಝ್ರತ್ ಪೈಗಂಬರ್(ಸ)ರ ತೀರ್ಪಿನ ಮೇಲೆ ನ್ಯಾಯಾಲಯದಲ್ಲಿ ಅಪೀಲು ಮಾಡಲು ಯಾರಿಗಾದರೂ ಹಕ್ಕು ಇರಲು ಹೇಗೆ ಸಾಧ್ಯ? ವಿಶೇಷವಾಗಿ ಕಅ್‌ಬ್‌ಗೆ ವಿಧಿಸಲಾದ ಈ ಶಿಕ್ಷೆಯನ್ನು ಆತನ ಅಪರಾಧಗಳ ಬೆಳಕಿನಲ್ಲಿ ಸರಿಯೆಂದು ಮನವರಿಕೆ ಮಾಡಿಕೊಂಡು ಯಹೂದಿಯರು ಸುಮ್ಮನಿದ್ದರು ಮತ್ತು ಅದರ ಬಗ್ಗೆ ಯಾವುದೇ ಆಕ್ಷೇಪ ಎತ್ತಲಿಲ್ಲ.

**ಫರಾತ್ ಬಿನ್ ಹಯಾನ್‌ನ ಇಸ್ಲಾಮ್ ಸ್ವೀಕಾರದ ವಿವರಣೆ, ಕಅ್‌ಬ್ ಬಿನ್ ಅಶ್ರಫ್‌ನ ವಧೆಯ ಘಟನೆ, ಅದರ ಹಿನ್ನೆಲೆ ಹಾಗೂ ಅದರ ಬಗ್ಗೆ ಉದ್ಭವವಾಗುವ ಆಕ್ಷೇಪಗಳ ವಿವರಾತ್ಮಕ ಉತ್ತರಗಳು**

**ಉಮ್ಮುಲ್ ಮುಮಿನೀನ್ ಹಝ್ರತ್ ಹಫ್ಸಾ ಬಿನ್ತ್ ಉಮರ್(ರ) ರವರ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ವಿವಾಹ ಮತ್ತು ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮಾ(ರ)ರವರ ಪುತ್ರ ಹಝ್ರತ್ ಇಮಾಮ್ ಹಸನ್(ರ)ರವರ ಜನನದ ಪ್ರಸ್ತಾವನೆ.**

ಪೆಲಸ್ತೀನಿನ ಮುಸ್ಲಿಮರಿಗಾಗಿ ದುಆ ಮಾಡಲು ಪುನಃ ಮನವಿ

ಈಗಂತು ದೌರ್ಜನ್ಯ ಮಿತಿಯನ್ನು ಮೀರುತ್ತಿದೆ. ಹಮಾಸಿನೊಂದಿಗೆ ಯುದ್ಧದ ಹೆಸರಲ್ಲಿ ಮುಗ್ಧ ಮಕ್ಕಳನ್ನು, ಮಹಿಳೆಯರನ್ನು, ವೃದ್ಧರನ್ನು ಮತ್ತು ರೋಗಿಗಳನ್ನು ಕೊಲ್ಲಲಾಗುತ್ತಿದೆ. ಯುದ್ಧದ ಎಲ್ಲ ವಿಧ ಮಾನದಂಡಗಳನ್ನು ಮತ್ತು ನಿಬಂಧನೆಗಳನ್ನು ಈ ನಾಮಧಾರಿ ನಾಗರಿಕ ಮತ್ತು ಸುಸಂಸ್ಕೃತ ಲೋಕವು ಕಡೆಗಣಿಸಿದೆ. ಅಲ್ಲಾಹನು ಮುಸ್ಲಿಂ ದೇಶಗಳಿಗೂ ವಿವೇಕವನ್ನು ನೀಡಲಿ. ಮುಸ್ಲಿಮರು ಒಂದಾಗಬೇಕೆಂದು 72, 73 ವರ್ಷಗಳ ಹಿಂದೆ ಹಝ್ರತ್ ಮುಸ್ಲಿಹ್ ಮೌಊದ್(ರ) ಎಚ್ಚರಿಸಿದ್ದರು. ಒಗ್ಗಟ್ಟಾಗಿ ಇರದೇ ಇದ್ದು ಒಂದೊಂದಾಗಿ ನಾಶವಾಗಬೇಕೇ ಅಥವಾ ಒಂದು ಅಸ್ತಿತ್ವವಾಗಿ ಇದ್ದು ಬಾಕಿಯುಳಿಯಬೇಕೇ ಎಂಬುದಾಗಿ ಸ್ವತಃ ತೀರ್ಮಾನಿಸಿರಿ ಎಂದು ಅವರು ಹೇಳಿದ್ದರು.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **17–11–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಕಳೆದ ಖುತ್ಬದ ಕೊನೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಜೀವನ ಚರಿತ್ರೆಗೆ ಸಂಬಂಧಿಸಿ ಪ್ರಸ್ತಾಪಿಸಲಾಗಿದ್ದ ಭಾಗದಲ್ಲಿ ಫರಾತ್ ಬಿನ್ ಹಯಾನ್ ಮುಸ್ಲಿಮ್ ಆದ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಅದರ ಹೆಚ್ಚಿನ ವಿವರಣೆ ಹೀಗಿದೆ: ಅವರು ಬಂಧಿಯಾಗಿ ಕೈದಿಗಳಲ್ಲಿ ಇದ್ದರು. ಬದ್ರ್ ಯುದ್ಧದಂದು ಕೂಡ ಅವರು ಗಾಯಾಳು ಆಗಿದ್ದರು. ಆದರೆ ಹೇಗೋ ಅವರು ಬಂಧನದಿಂದ ಪರಾರಿಯಾಗಿದ್ದರು. ಅವರನ್ನು ನೋಡುತ್ತಲೇ ಹಝ್ರತ್ ಅಬೂಬಕರ್(ರ) ಹೇಳಿದರು: ಈಗಲಾದರೂ ನಿನ್ನ ವರ್ತನೆಯನ್ನು ಬದಲಾಯಿಸು ಮತ್ತು ಮುಸ್ಲಿಮನಾಗು. ಅದಕ್ಕೆ ಫರಾತ್ ಹೇಳಿದನು ಈ ಬಾರಿ ನಾನು ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರಿಂದ ತಪ್ಪಿಸಿಕೊಂಡರೆ ಮತ್ತೆ ಎಂದಿಗೂ ಅವರ ನಿಯಂತ್ರಣಕ್ಕೆ ಬರುವುದಿಲ್ಲ ಅದಕ್ಕೆ ಹಝ್ರತ್ ಅಬೂಬಕರ್(ರ) ಹೇಳಿದರು ಹಾಗಾದರೆ ನೀನು ಇಸ್ಲಾಮ್ ಸ್ವೀಕರಿಸಿಕೊ. ನೀನು ತಪ್ಪಿಕೊಳ್ಳಬೇಕಾದರೆ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿಕೊ ಇದೇ ಒಂದು ಮಾರ್ಗವಿದೆ. ಆದಾಗ್ಯೂ, ಫರಾತ್ ಬಿನ್ ಹಯಾನ್ ಹಝ್ರತ್ ಅಬೂಬಕರ್(ರ) ಅವರ ಈ ಮಾತನ್ನು ಆಲಿಸಿ ಹಝ್ರತ್ ಪೈಗಂಬರ್(ಸ) ರ ಬಳಿ ಹೋದರು. ತನ್ನ ಅನ್ಸಾರಿ ಸ್ನೇಹಿತರೊಬ್ಬರನ್ನು ಹಾದುಹೋಗುತ್ತಾ, 'ನಾನು ಮುಸ್ಲಿಂ' ಎಂದು ಹೇಳಿದರು. ಅನ್ಸಾರಿ ಸಹಾಬಿ ಹಝ್ರತ್ ಪೈಗಂಬರ್(ಸ) ಅವರ ಸೇವೆಗೆ ಬಂದು ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದಾರೆಂದು ಹೇಳಿದರು. ಅದಕ್ಕೆ ಹಝ್ರತ್ ಪೈಗಂಬರ್(ಸ)ರವರು ಆತನ ವಿಷಯವನ್ನು ಅಲ್ಲಾಹನಿಗೆ ಒಪ್ಪಿಸುತ್ತಾ ಹೇಳಿದರು **ಇನ್ನ ಮಿನ್‌ಕುಮ್ ರಿಜಾಲನ್ ನಕಿಲುಹುಮ್ ಇಲಾ ಈಮಾನಿಹಿಮ್** ಅಂದರೆ ನಿಸ್ಸಂದೇಹವಾಗಿಯೂ ನಿಮ್ಮಲ್ಲಿ ಕೆಲವರನ್ನು ನಾವು ಅವರ ವಿಶ್ವಾಸಕ್ಕೆ ಒಪ್ಪಿಸುತ್ತೇವೆ. ಆತ ಇಸ್ಲಾಂ ಸ್ವೀಕಾರ ಮಾಡಿದ್ದಾನೆ ಎಂದು ಹೇಳುತ್ತಿರುವನಾದರೆ ಅದು ಆತನ ಮತ್ತು ಅಲ್ಲಾಹನ ನಡುವಿನ ವಿಷಯವಾಗಿದೆ. ಈ ಕಾರಣದಿಂದ ಹಝ್ರತ್ ಪೈಗಂಬರ್(ಸ) ಅವರನ್ನು ಬಿಡುಗಡೆಗೊಳಿಸಿದರು. (ದಾಂಯೆರಾ ಮಾರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾ(ಸ), ಸಂಪುಟ–6, ಪುಟ–398, ಮಕ್ತಬ ದಾರುಲ್ ಮಆರಿಫ್ ಲಾಹೋರ್) (ಅಲ್–ಅಸಾಬ, ಸಂಪುಟ–5, ಪುಟ–273, ದಾರುಲ್ ಕುತುಬ್ ಇಲ್‌ಮಿಯ ಬೈರುತ್ 1995)

ಘಟನೆಗಳಲ್ಲಿ ಹಝ್ರತ್ ಝೈದ್ ಬಿನ್ ಹಾರಿಸರ ಕಾರ್ಯಾಚರಣೆಯ ಬಗ್ಗೆ ಒಂದು ಪ್ರಸ್ತಾಪವಿದೆ. ಆ ಸೈನ್ಯವನ್ನು ಹಿಜರೀ 3, ಜಮಾದಿಯುಲ್ ಆಖಿರ್‌ನಲ್ಲಿ ಖರದ ಎಂಬ ಪ್ರದೇಶಕ್ಕೆ ಕಳುಹಿಸಲಾಗಿತ್ತು. ಈ ಘಟನೆಯನ್ನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಬರೆದಿರುವರು: ಬನೂ ಸುಲೈಂ ಮತ್ತು ಬನೂ ಗ಼ತ್‌ಫಾನ್‌ರ ದಾಳಿಗಳಿಂದ ಸ್ವಲ್ಪ ಬಿಡುವು ಸಿಕ್ಕಿದಾಗ ಮತ್ತೊಂದು ಅಪಾಯವನ್ನು ತಡೆಯಲಿಕ್ಕಾಗಿ ಮುಸ್ಲಿಮರಿಗೆ ಸ್ವದೇಶದಿಂದ ಹೊರಡಬೇಕಾಗಿ ಬಂತು. ಅಲ್ಲಿಯ ವರೆಗೂ ಖುರೈಶಿಯರು ತಮ್ಮ ವ್ಯಾಪಾರಕ್ಕಾಗಿ ಹಿಜಾಝಿನ ತೀರ ಪ್ರದೇಶದ ಮಾರ್ಗದಿಂದ ಸಿರಿಯದ ಕಡೆಗೆ ಹೋಗುತ್ತಿದ್ದರು. ಆದರೆ ಅವರು ಈ ಮಾರ್ಗವನ್ನು ಉಪೇಕ್ಷಿಸಿದರು. ಏಕೆಂದರೆ ಆ ಪ್ರದೇಶದ ಗೋತ್ರಗಳು ಮುಸ್ಲಿಮರ ಮಿತ್ರರಾಗಿ ಬಿಟ್ಟಿದ್ದರು ಮತ್ತು ಖುರೈಷಿಗಳಿಗೆ ಕಿಡಿಗೇಡಿತನದ ಸಾಧ್ಯತೆ ಕಡಿಮೆಯಾಗಿತ್ತು ಬದಲಿಗೆ ಅವರು ಈ ಕರಾವಳಿ ಮಾರ್ಗವನ್ನು ತಮಗೆ ಅಪಾಯವೆಂದು ಪರಿಗಣಿಸಿದರು. ಮುಸಲ್ಮಾನರಿಂದ ಬೆದರಿಕೆ ಇರುವುದು ಇದೊಂದೇ ಕಾರಣವಲ್ಲ, ಬದಲಿಗೆ ಅವರೇ ಮಾಡಲು ಬಯಸಿದ ಕಾರ್ಯಗಳಾಗಿದ್ದವು, ಈಗ ಅವರು ಈ ಗೋತ್ರಗಳ ಮುಸ್ಲಿಮರೊಂದಿಗೆ ಒಪ್ಪಂದದಿಂದಾಗಿ ಅದನ್ನು ಮಾಡಲು ಸಾಧ್ಯವಾಗುವುದಿಲ್ಲ ಉಸ್ಲಿಮರಿಗೆ ಹಾನಿ ಮಾಡಲು ಸಾಧ್ಯವಿಲ್ಲ ಎಂದು ಭಾವಿಸಿದರು. ಆದಾಗ್ಯೂ, ಅವರು ನಜದಿನ ಮಾರ್ಗವನ್ನು ಕೈಗೊಂಡರು. ಅದು ಇರಾಕಿಗೆ ತಲುಪುವ ಮಾರ್ಗವಾಗಿತ್ತು. ಅದರ ಆಸುಪಾಸಿನಲ್ಲಿ ಮುಸ್ಲಿಮರ ಪರಮ ಶತ್ರುಗಳಾದ ಸುಲೈಂ ಮತ್ತು ಗ಼ತ್‌ಫಾನ್ ಗೋತ್ರಗಳು ನೆಲೆಸಿದ್ದುವು. ಖುರೈಶಿನ ಒಂದು ಸಂಘ ನಜದಿನ ಮಾರ್ಗವಾಗಿ ದಾಟಿ ಹೋಗುವುದು ಎಂಬ ಮಾಹಿತಿ ಹಝ್ರತ್ ಪೈಗಂಬರ್(ಸ)ರಿಗೆ ಜಮಾದಿಯುಲ್ ಆಖಿರ್‌ನ ತಿಂಗಳಲ್ಲಿ ಲಭಿಸಿತು. ಸ್ಪಷ್ಟವಾದ ವಿಷಯವೇನೆಂದರೆ ಕರಾವಳಿ ಮಾರ್ಗದ ಮೂಲಕ ಖುರೈಷಿಗಳ ಸಂಘಗಳು ಸಾಗುವುದು ಮುಸ್ಲಿಮರಿಗೆ ಅಪಾಯವಾಗಿದ್ದರೆ, ನಜ್ದಿ ಮಾರ್ಗದ ಮೂಲಕ ಅವರ ಮಾರ್ಗವು ಅದೇ ರೀತಿಯದ್ದಾಗಿತ್ತು ಬದಲಿಗೆ ಅದಕ್ಕಿಂತ ಹೆಚ್ಚು ಅಪಾಯಕಾರಿಯಾಗಿತ್ತು ಏಕೆಂದರೆ ಕರಾವಳಿ ಮಾರ್ಗಕ್ಕಿಂತ ಆ ಮಾರ್ಗದಲ್ಲಿ ಖುರೈಷಿಗಳ ಪ್ರತಿಜ್ಞಾ ಬದ್ಧರು ಈ ಮಾರ್ಗದಲ್ಲಿ ವಾಸಿಸುತ್ತಿದ್ದರು. ಅವರು ಖುರೇಷಿಗಳಂತೆ ಮುಸ್ಲಿಮರ ಕಡು ವೈರಿಗಳಾಗಿದ್ದರು. ಮತ್ತು ಅವರೊಂದಿಗೆ ಖುರೈಷಿಗಳು ಸುಲಭವಾಗಿ ಮದೀನಾದಲ್ಲಿ ರಹಸ್ಯ ದಾಳಿಯನ್ನು ಮಾಡಬಹುದಾಗಿತ್ತು ಅಥವಾ ಕೆಲವು ಕಿಡಿಗೇಡಿಗಳನ್ನು ಮಾಡಬಹುದಾಗಿತ್ತು ಮತ್ತು ನಂತರ ಖುರೈಷಿಗಳನ್ನು ದುರ್ಬಲಗೊಳಿಸಲು ಮತ್ತು ಅವರನ್ನು ಶಾಂತಿ ಸಂಧಾನ ಮಾಡಿಕೊಳ್ಳಲು ಪ್ರೇರೇಪಿಸುವ ಉದ್ದೇಶದಿಂದ, ಅವರು ಆ ಸಂಘಗಳನ್ನು ತಡೆಯುವುದು ಸಹ ಅಗತ್ಯವಾಗಿತ್ತು. ಅದಕ್ಕಾಗಿಯೇ ಹಝ್ರತ್ ಪೈಗಂಬರ್(ಸ) ಅವರ ಮುಕ್ತ ಗುಲಾಮ ಝೈದ್ ಬಿನ್ ಹರಿಸಾ(ರ) ಅವರ ನೇತೃತ್ವದಲ್ಲಿ ತನ್ನ ಸಹಚರರ ಒಂದು ಗುಂಪನ್ನು ಕಳುಹಿಸಿದರು.

ಝೈದ್(ರ) ಬಹಳ ಬುದ್ಧಿಪೂರ್ವಕವಾಗಿ ತಮ್ಮ ಕರ್ತವ್ಯವನ್ನು ಈಡೇರಿಸಿದರು. ನಜದಿನ ಪ್ರದೇಶವಾದ ಖರದದಲ್ಲಿ ಆ ಸಂಘದ ಮೇಲೆ ದಾಳಿ ನಡೆಸಿದರು. ಈ ಅಚಾನಕ್ಕಾದ ದಾಳಿಯಿಂದ ಗಾಬರಿಗೊಂಡು ಖುರೈಶಿನ ಜನರು ಸಂಪತ್ತನ್ನು ಬಿಟ್ಟು ಪರಾರಿಯಾದರು. ಝೈದ್ ಬಿನ್ ಹಾರಿಸ(ರ) ಮತ್ತು ಅವರ ಸಹಚರರು ಬಹಳಷ್ಟು ಯುದ್ಧ ಸಂಪತ್ತಿನ ಜೊತೆಗೆ ಯಶಸ್ವಿವಾಗಿ ಮದೀನಕ್ಕೆ ಮರಳಿ ಹೋದರು.

ಕೆಲವು ಇತಿಹಾಸಕಾರರು ಖುರೈಷರ ಈ ಸಂಘದ ನಾಯಕ ಫರಾತ್ ಎಂಬ ವ್ಯಕ್ತಿ ಎಂದು ಬರೆದಿದ್ದಾರೆ, ಅವರು ಮುಸ್ಲಿಮರಿಂದ ಜೈಲಿನಲ್ಲಿದ್ದರು ಮತ್ತು ಮುಸ್ಲಿಮನಾದ

ನಂತರ ಬಿಡುಗಡೆಯಾದನು. ಆದರೆ ಇತರ ವರದಿಗಳ ಪ್ರಕಾರ, ಅವರು ಮುಸ್ಲಿಮರ ವಿರುದ್ಧ ಬಹುದೇವತಾವಾದಿಗಳ ಬೇಹುಗಾರರಾಗಿದ್ದರು, ಆದರೆ ನಂತರ ಮುಸಲ್ಮಾನನಾಗಿ ಮದೀನಾಗೆ ವಲಸೆ ಹೋದರು ಎಂದು ತಿಳಿದುಬಂದಿದೆ.

(ಸೀರತ್ ಖಾತಮನ್ನಬೀಈನ್, ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಮ್‌ಎ, ಪುಟ 465–466)

ಮತ್ತೊಂದು ಘಟನೆ ಕಅ್‌ಬ್ ಬಿನ್ ಅಶ್ರಫಿನ ವಧೆಯ ಕುರಿತಾಗಿದೆ.

ಕಅ್‌ಬ್ ಬಿನ್ ಅಶ್ರಫ್ ಮದೀನದ ಸರದಾರರಲ್ಲಿ ಒಬ್ಬನಾಗಿದ್ದನು ಮತ್ತು ಹಝ್ರತ್ ಪೈಗಂಬರ್(ಸ)ರ ಒಪ್ಪಂದದಲ್ಲಿ ಪಾಲ್ಗೊಂಡಿದ್ದನು. ಅನಂತರ ಆತನು ಪಿತೂರಿ ಉಂಟುಮಾಡಲು ಪ್ರಯತ್ನಿಸಿದನು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಆತನನ್ನು ವಧಿಸಲು ಆದೇಶಿಸಿದರು.

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ) ವರದಿ ಮಾಡಿದ್ದನ್ನು ಬುಖಾರಿಯಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ) ಹೇಳಿದರು: ಕಅ್‌ಬನನ್ನು ಯಾರು ಎದುರಿಸುವಿರಿ? ಆತನು ಅಲ್ಲಾಹನಿಗೆ ಮತ್ತು ಅಲ್ಲಾಹನ ಪ್ರವಾದಿಗೆ ಬಹಳ ತೊಂದರೆ ಕೊಟ್ಟಿದ್ದಾನೆ. ಮುಹಮ್ಮದ್ ಬಿನ್ ಮಸ್ಲಮ ಎದ್ದು ನಿಂತು ಹೇಳಿದರು – ಯಾ ರಸೂಲಲ್ಲಾಹ್! ನಾನು ಆತನನ್ನು ವಧಿಸಬೇಕು ಎಂದು ಬಯಸುತ್ತೀರಾ? ಅದಕ್ಕೆ ಹಝ್ರತ್ ಪೈಗಂಭರ್(ಸ) ಹೌದು ಎಂದು ಹೇಳೀದಾಗ ಮುಹಮ್ಮದ್ ಬಿನ್ ಮುಸಲ್ಲಮ(ರ) ಅವರು ಒಂದು ನೆಪವನ್ನು ಮಾಡಿಕೊಂಡು ಕಅ್‌ಬನ ಬಳಿಗೆ ಹೋದರು ಮತ್ತು ಹೀಗೆ ಹೇಳಿದರು: ಮುಹಮ್ಮದ್(ಸ) ನಮ್ಮಿಂದ ಸದಖಾವನ್ನು ಅವಶ್ಯ ಪಡುತ್ತಿದ್ದಾರೆ, ಹೀಗೆ ನಮ್ಮನ್ನು ಕಷ್ಟತೆಗೆ ಗುರಿಪಡಿಸಿರುವರು. ನಿನ್ನಿಂದ ಸಾಲ ಪಡೆಯಲಿಕ್ಕಾಗಿ ನಾನು ನಿನ್ನ ಬಳಿಗೆ ಬಂದಿರುವೆನು. ಕಅ್‌ಬ್ ಹೇಳಿದನು: ನೀವು ಅವರಿಂದ (ಎಂದರೆ ಹಝ್ರತ್ ಪೈಗಂಬರ್(ಸ)ರಿಂದ) ವಿಮುಖರಾಗುವ ಮತ್ತು ಅವರನ್ನು ತೊರೆಯುವ ದಿನ ದೂರವಲ್ಲ. ಆದಾಗ್ಯೂ, ಮುಹಮ್ಮದ್ ಬಿನ್ ಮುಸ್ಲಮ ಹೇಳಿದರು, ನಾವು ಅವರನ್ನು ಅನುಸರಿಸಿದ್ದರಿಂದ, ಅವರಿಗೆ ಏನಾಗುತ್ತದೆ ಎಂದು ನೋಡುವವರೆಗೂ ನಾವು ಅವರನ್ನು ಬಿಡಲು ಇಷ್ಟಪಡುವುದಿಲ್ಲ, ಮತ್ತು ಅವರು ನಮಗೆ ಒಂದು ಅಥವಾ ಎರಡು ವಸ್ಖ್ ಅನ್ನು ಸಾಲವಾಗಿ ನೀಡಬೇಕೆಂದು ನಾನು ಬಯಸುತ್ತೇನೆ. ಅದಕ್ಕೆ ಕಅ್‌ಬ್ ಹೇಳಿದನು: ಸರಿ! ಅದಕ್ಕೆ ನನ್ನ ಬಳೀ ಏನನ್ನಾದರು ಗಿರವಿ ಇಡಿ. ಅದಕ್ಕೆ ಅವರು ಕೇಳಿದರು ನಿಮಗೆ ಏನು ಬೇಕಾಗಿದೆ? ಕಅ್‌ಬ್ ಹೇಳಿದನು ನಿಮ್ಮ ಮಹಿಳೆಯರನ್ನು ನನಗೆ ಗಿರವಿ ಇಡಿ. ಅವರು ಹೇಳಿದರು, ನೀವು ಅರಬ್ಬರಲ್ಲಿ ಬಹಳ ಸೌಂದರ್ಯವಂತರಾಗಿದ್ದೀರಿ ನಿಮ್ಮಲ್ಲಿ ನಮ್ಮ ಮಹಿಳೆಯರನ್ನು ಹೇಗೆ ಗಿರವಿಯಾಗಿ ಇಡುವುದು? ಹಾಗಾದರೆ ನಿನ್ನ ಗಂಡು ಮಗನನ್ನು ನನ್ನಲ್ಲಿ ಗಿರವಿಯಾಗಿ ಇಡು ಎಂದು ಕಅ್‌ಬ್ ಹೇಳಿದನು. ಅದಕ್ಕೆ ಮತ್ತೆ ಅವರು ಹೇಳಿದರು: ನಾವು ನಮ್ಮ ಮಕ್ಕಳನ್ನು ನಿಮಗೆ ಹೇಗೆ ಗಿರವಿ ಇಡಬಹುದು? ಅವುಗಳಲ್ಲಿ ಪ್ರತಿಯೊಬ್ಬರನ್ನು ಒಂದು ವಸ್ಖ್ ಅಥವಾ ಎರಡಕ್ಕೆ ವಸ್ಖ್‌ಗೆ ನಿಮ್ಮನ್ನು ಗಿರವಿ ಇಡಲಾಗಿತ್ತು ಎಂದು ಅಪಹಾಸ್ಯ ಮಾಡಲಾಗುವುದು. ಇದು ನಮಗೆ ಅವಮಾನವಾಗಿದೆ, ಆದರೆ ನಾವು ನಮ್ಮ ರಕ್ಷಾಕವಚವನ್ನು ನಿಮಗೆ ನೀಎಲು ವಾಗ್ದಾನ ಮಾಡುತ್ತೇವೆ. ರಕ್ಷಾಕವಚಗಳು ಎಂದರೆ ಇಲ್ಲಿ ಯುದ್ಧ ಸಲಕರಣೆಗಳು ಎಂದೂ ಅರ್ಥ. ಅಕ್ಕೆ ಕಅ್‌ಬ್ ಒಪ್ಪಿಕೊಂಡನು ಮತ್ತೆ ತನ್ನ ಬಳಿಗೆ ಬರಲು ಭರವಸೆ ನೀಡಿದರು. ಅವರು ರಾತ್ರಿಯ ಸಮಯದಲ್ಲಿ ಕಅ್‌ಬ್‌ನ ಬಳಿಗೆ ಬಂದರು ಮತ್ತು ಅವರೊಂದಿಗೆ ಕಅ್‌ಬ್‌ನ ಸಹೋದರನಾಗಿದ್ದ ಅಬುನೈಲಾ ಸಹ ಇದ್ದರು. ಅವನು ಅವರನ್ನು ಕೋಟೆಯ ಒಳಗೆ ಕರೆದನು ಮತ್ತು ಅವರು ಕೋಟೆಯಲ್ಲಿ ಅವನ ಬಳಿಗೆ ಹೋದಾಗ, ಅವನು ತನ್ನ ಮಾಳಿಗೆಯಿಂದ ಇಳಿದನು. ಈ ಸಮಯದಲ್ಲಿ ನೀನು ಎಲ್ಲಿಗೆ ಹೋಗುತ್ತಿರುವೆ ಎಂದು ಅವನ ಪತ್ನಿ ಕೇಳಿದಳು. ಅದಕ್ಕೆ ಕಅ್‌ಬ್ ಹೇಳಿದನು: ಇವರು ಮುಹಮ್ಮದ್ ಬಿನ್ ಮುಸ್ಲಮಾ ಮತ್ತು ನನ್ನ ಸಹೋದರ ಅಬುನೈಲಾ ಆಗಿದ್ದಾರೆ. ಅವರು ನನ್ನನ್ನು ಕರೆದಿದ್ದಾರೆ. ನಾನು ಅವರ ಬಳಿಗೆ ಹೋಗುತ್ತಿದ್ದೇನೆ. ಅದಕ್ಕೆ ಅವನ ಹೆಂಡತಿ ಹೇಳಿದಳು, ನನಗೆ ರಕ್ತ ತೊಟ್ಟಿಕ್ಕುವ ಶಬ್ದ ಕೇಳಿಸುತ್ತದೆ. ಅದಕ್ಕೆ ಕಅ್‌ಬ್ ಹೇಳಿದನು ಗೌರವಾನ್ವಿತ ವ್ಯಕ್ತಿಯನ್ನು ರಾತ್ರಿಯಾದರೂ ದಾಳಿಗೆ ಕರೆದರೆ ಖಂಡಿತವಾಗಿಯೂ ಆತನು ಹೋಗುತ್ತಾನೆ. ಆದಾಗ್ಯೂ, ಮುಹಮ್ಮದ್ ಬಿನ್ ಮುಸ್ಲಮಾ(ರ) ತಮ್ಮೊಂದಿಗೆ ಇಬ್ಬರನ್ನು ಕರೆದುಕೊಂಡು ಹೋಗಿದ್ದರು. ಮುಹಮ್ಮದ್ ಬಿನ್ ಮುಸ್ಲಮ ಆ ಪುರುಷರಿಗೆ ಹೇಳಿದರು: ಕಅ್‌ಬ್ ಬಂದಾಗ ನಾನು ಅವನ ಕೂದಲನ್ನು ಹಿಡಿದು ವಾಸನೆ ಮೂಸುತ್ತೇನೆ. ನಾನು ಅವನ ತಲೆಯನ್ನು ಬಲವಾಗಿ ಹಿಡಿದಿದ್ದೇನೆ ಎಂದು ನೀವು ನೋಡಿದಾಗ, ನೀವು ಮುಂದೆ ಬಂದು ಅವನ ಕೆಲಸವನ್ನು ಮುಗಿಸಬೇಕು. ಹೀಗೆ ಕಅ್‌ಬ್ ಒಂದು ಮೇಲಂಗಿಯನ್ನು ಸುತ್ತಿ ಅವರ ಬಳಿಗೆ ಬಂದಾಗ ಅವನಿಂದ ಸುಗಂಧದ ಅಲೆಗಳು ಮೂಡುತ್ತಿದ್ದವು. ಮುಹಮ್ಮದ್ ಬಿನ್ ಮುಸ್ಲಮಾ(ರ) ಹೇಳಿದರು. ಇಂದಿನಂತಹ ಸುಗಂಧವನ್ನು ನಾನು ಎಂದಿಗೂ ಕಂಡುಕೊಂಡಿಲ್ಲ, ಅದು ಅತ್ಯುತ್ತಮ ಸುಗಂಧವಾಗಿದೆ. ಅದಕ್ಕೆ ಕಅ್‌ಬ್ ಹೇಳಿದನು, ನನ್ನ ಬಳಿ ಅರಬ್ ಮಹಿಳೆಯರಲ್ಲಿ ಅತ್ಯಂತ ಪರಿಮಳಯುಕ್ತ ಮತ್ತು ಅತ್ಯಂತ ಸುಂದರಮಯವಾಗಿದ್ದಾರೆ. ಅದಕ್ಕೆ ಮುಹಮ್ಮದ್ ಬಿನ್ ಮುಸ್ಲಮ(ರ) ಹೇಳಿದರು, ನಿಮ್ಮ ತಲೆಯ ವಾಸನೆಯನ್ನು ಮೂಗಿಸಲು ನನಗೆ ಅನುಮತಿಸುತ್ತೀರಾ? ಅದಕ್ಕೆ ಅವನು ಹೌದು ಎಂದು ಹೇಳಿದನು, ಅವರು ಅದನ್ನು ವಾಸನೆ ಮಾಡಿದರು ಮತ್ತು ನಂತರ ಅದನ್ನು ತಮ್ಮ ಸಹಚರರಿಗೆ ವಾಸನೆ ಮಾಡಿಸಿದರು. ಆಗ ನೀವು ನನಗೆ ಅವಕಾಶ ನೀಡುತ್ತೀರಾ? ಎಂದು ಕೇಳಿದಾಗ ಅವನು ಹೌದು ಎಂದು ಹೇಳಿದನು, ನಂತರ ಮುಹಮ್ಮದ್ ಬಿನ್ ಮುಸ್ಲಮಾ(ರ) ಅವನನ್ನು ಹಿಡಿದಾಗ, ಅವನು ತನ್ನ ಸಹಚರರಿಗೆ ಅವನನ್ನು ಕರೆದೊಯ್ಯಲು ಹೇಳಿದನು ಮತ್ತು ಅವರು ಅವನನ್ನು ವಧಿಸಿದರು. ನಂತರ ಇದರ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿಸಲಾಯಿತು.

(ಸಹೀಹ್ ಅಲ್–ಬುಖಾರಿ, ಕಿತಾಬ್ ಅಲ್–ಮುಘಾಜಿ, ಅಧ್ಯಾಯ ಕಬ್ ಬಿನ್ ಅಲ್–ಅಶ್ರಫ್ ಅನ್ನು ಕೊಲ್ಲುವುದು, ವರದಿ ಸಂಖ್ಯೆ–4037)

ಇದರ ಇನ್ನಷ್ಟು ವಿವರಣೆ ಬುಖಾರಿಯ ವ್ಯಾಖ್ಯಾನ ಗ್ರಂಥವಾದ ಉಮ್ದತುಲ್ ಖಾರಿಯಲ್ಲಿ ಹೀಗಿದೆ: ಮುಹಮ್ಮದ್ ಬಿನ್ ಮಸ್ಲಮ ತನ್ನ ಸಂಗಡಿಗರ ಜೊತೆಗೆ ಕಅ್‌ಬ್‌ನ ಮೇಲೆ ಹಲ್ಲೆ ನಡೆಸಿ ಆತನನ್ನು ವಧಿಸಿದರು. ಅವರ ಒಂದು ಸಂಗಡಿಗರಾದ ಹಝ್ರತ್ ಹಾರಿಸ್ ಬಿನ್ ಔಸ್‌ರಿಗೆ ಖಡ್ಗದ ತುದಿ ತಗುಲಿ ಅವರು ಗಾಯಗೊಂಡರು. ಜೊತೆಗಿದ್ದ ಸಂಗಡಿಗರದ್ದೇ ಖಡ್ಗದ ತುದಿ ತಗುಲಿ ಅವರು ಗಾಯಾಳಾಗಿದ್ದರು. ಹೀಗೆ ಅವರ ಜೊತೆಗಾರರು ಅವರನ್ನು ಎತ್ತಿ ಬೇಗನೇ ಮದೀನಕ್ಕೆ ತಲುಪಿದರು ಮತ್ತು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಪೈಗಂಬರ್(ಸ) ತನ್ನ ಉಗುಳನ್ನು ಹಝ್ರತ್ ಹಾರಿಸ್ ಬಿನ್ ಔಸ್(ರ)ರ ಗಾಯದ ಮೇಲೆ ಸವರಿದರು. ಅನಂತರ ಅವರಿಗೆ ಅದರ ನೋವು ಉಂಟಾಗಲಿಲ್ಲ. (ಉಮ್ದತುಲ್ ಖಾರಿ, ಸಂಪುಟ–17, ಪುಟ–192, ಕಿತಾಬುಲ್ ಮಘಾಝಿ, ದಾರ್ ಅಹ್ಯಾಉತ್ತುರಾಸ್ ಬೈರೂತ್ 2003)

ಸೀರತ್ ಖಾತಮನ್ನಬೀಈನ್‌ನಲ್ಲಿ ಕಅ್‌ಬ್ ಬಿನ್ ಅಶ್ರಫ್‌ನ ವಧೆಯ ಘಟನೆಯನ್ನು ಈ ಸಮಯದಲ್ಲಿ ಇಲ್ಲಿ ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಬದ್ರ್ ಯುದ್ಧವು ಮದೀನಾದ ಯಹೂದಿಗಳ ಹಗೆತನವನ್ನು ಬಹಿರಂಗಪಡಿಸಿದಂತೆಯೇ. ಮತ್ತು ಬನೂಖೈನ್‌ಖಾದ ಗಡಿಪಾರು ಇತರ ಯಹೂದಿಯರಿಗೆ ಸುಧಾರಣೆಗೆ ಪ್ರೇರೇಪಿಸಲಿಲ್ಲ ಮತ್ತು ಅವರು ತಮ್ಮ ಕಿಡಿಗೇಡಿತನದಲ್ಲಿ ಮತ್ತು ಪ್ರಲೋಭನೆಗಳಲ್ಲಿ ಪ್ರಗತಿಯನ್ನು ಮುಂದುವರೆಸಿದರು. ಆದ್ದರಿಂದ, ಕಅ್‌ಬ್ ಬಿನ್ ಅಶ್ರಫ್ ವಧೆಯ ಘಟನೆಯು ಈ ಸರಪಳಿಯ ಕೊಂಡಿಯಾಗಿದೆ. ಕಅ್‌ಬ್ ಧರ್ಮದಿಂದ ಯಹೂದಿಯಾಗಿದ್ದನು, ಆದರೆ ವಾಸ್ತವವಾಗಿ ಅವನು ಯಹೂದಿ ಸಂತಾನದವನಾಗಿರಲಿಲ್ಲ ಬದಲಿಗೆ ಅರಬ್ ಆಗಿದ್ದನು. ಅವನ ತಂದೆ ಅಶ್ರಫ್ ಬನೂ ನಬ್‌ಹಾನ್‌ನ ಒಬ್ಬ ಬುದ್ಧಿವಂತ ಮತ್ತು ಸಕ್ರೀಯ ವ್ಯಕ್ತಿಯಾಗಿದ್ದನು. ಅವನು ಮದೀನಾಗೆ ಬಂದು ಬನೂ ನಝೀರ್ ಅವರೊಂದಿಗೆ ಸಂಬಂಧವನ್ನು ಸ್ಥಾಪಿಸಿದ್ದನು. ಅವನು ಅವರ ಪ್ರತಿಜ್ಞಾ ಬದ್ಧನಾಗಿದ್ದನು ಮತ್ತು ಅಂತಿಮವಾಗಿ ಅವನು ತುಂಬಾ ಅಧಿಕಾರ ಮತ್ತು ಪ್ರತಿಷ್ಠೆಯನ್ನು ಗಳಿಸಿದನು, ಬನೂನಝೀರ್ ಗೋತ್ರದ ಮುಖ್ಯಸ್ಥ ಅಬುರಾಫಿ ಬಿನ್ ಅಬುಲ್ ಹುಖೀಖ್ ತನ್ನ ಮಗಳನ್ನು ಅವನೊಂದಿಗೆ ಮದುವೆ ಮಾಡಿಸಿದನು. ಕಅ್‌ಬ್ ಈ ಹುಡುಗಿಯ ಗರ್ಭದಿಂದ ಹುಟ್ಟಿ ಬೆಳೆದು ತಂದೆಗಿಂತ ಉನ್ನತ ಶ್ರೇಣಿಯನ್ನು ಪಡೆದನು. ಕೊನೆಗೆ ಅವನಿಗೆ ಎಂತಹ ಸ್ಥಾನ ಲಭಿಸಿತು ಎಂದರೆ ಅರೇಬಿಯಾದ ಎಲ್ಲಾ ಯಹೂದಿಗಳು ಅವನನ್ನು ತಮ್ಮ ಮುಖ್ಯಸ್ಥ ಎಂದು ಪರಿಗಣಿಸಲು ಪ್ರಾರಂಭಿಸಿದರು. ಕಅ್‌ಬ್ ಬುದ್ಧಿವಂತ ಮತ್ತು ಸುಂದರ ವ್ಯಕ್ತಿಯಲ್ಲದೆ, ಒಬ್ಬ ಸಮರ್ಥ ಕವಿ ಮತ್ತು ಅತ್ಯಂತ ಶ್ರೀಮಂತ ವ್ಯಕ್ತಿಯಾಗಿದ್ದನು. ಅವನು ತನ್ನ ಆರ್ಥಿಕ ಔದಾರ್ಯದಿಂದ ತನ್ನ ಸಮೂದಾಯದ ವಿದ್ವಾಂಸರನ್ನು ಮತ್ತು ಇತರ ಪ್ರಭಾವಿ ಜನರನ್ನು ಯಾವಾಗಲೂ ತನ್ನ ಕೈಕೆಳಗೆ ಇಟ್ಟುಕೊಂಡನು, ಆದರೆ ನೈತಿಕ ದೃಷ್ಟಿಕೋನದಿಂದ, ಅವನು ತುಂಬಾ ಕೊಳಕು ನೀತಿವಂತನಾಗಿದ್ದನು ಮತ್ತು ರಹಸ್ಯ ತಂತ್ರಗಳು ಮತ್ತು ಕುತಂತ್ರದ ಕಲೆಯಲ್ಲಿ ಅವನು ಪರಿಪೂರ್ಣನಾಗಿದ್ದನು. ಅಂತಹ ದುಷ್ಟತನ ಎಲ್ಲೂ ಇರಲಿಲ್ಲ. ಹಝ್ರತ್ ಪೈಗಂಬರ್(ಸ) ಅವರು ಮದೀನಾಗೆ ವಲಸೆ ಹೋದಾಗ, ಕಅ್‌ಬ್ ಬಿನ್ ಅಶ್ರಫ್ ಇತರ ಯಹೂದಿಗಳೊಂದಿಗೆ, ಹಝ್ರತ್ ಪೈಗಂಬರ್(ಸ) ಮತ್ತು ಯಹೂದಿಗಳ ನಡುವೆ ಪರಸ್ಪರ ಸ್ನೇಹ ಮತ್ತು ಶಾಂತಿ ಮತ್ತು ಸಾಮಾನ್ಯ ರಕ್ಷಣೆಗೆ ಸಂಬಂಧಿಸಿದಂತೆ ಲಿಖಿತ ಒಪ್ಪಂದದಲ್ಲಿ ಭಾಗವಹಿಸಿದನು. ಅವನು ಬಾಹ್ಯವಾಗಿ ಈ ಒಪ್ಪಂದವನ್ನು ಮಾಡಿದ್ದನು ಆದರೆ ಆಂತರಿಕವಾಗಿ ಕಅ್‌ಬ್‌ನ ಒಳಗೆ ದ್ವೇಷ ಮತ್ತು ಅಸೂಯೆಯ ಬೆಂಕಿಯು ಹೃದಯದಲ್ಲಿ ಉರಿಯಲು ಪ್ರಾರಂಭಿಸಿತು ಮತ್ತು ಅವನು ರಹಸ್ಯ ತಂತ್ರಗಳು ಮತ್ತು ರಹಸ್ಯ ಯೋಜನೆಗಳೊಂದಿಗೆ ಇಸ್ಲಾಂ ಮತ್ತು ಇಸ್ಲಾಂನ ಸಂಸ್ಥಾಪಕನನ್ನು ವಿರೋಧಿಸಲು ಪ್ರಾರಂಭಿಸಿದನು. ಆದ್ದರಿಂದ, ಕಅ್‌ಬ್ ಪ್ರತಿ ವರ್ಷ ಯಹೂದಿ ವಿದ್ವಾಂಸರನ್ನು ಸಾಕಷ್ಟು ದಾನವನ್ನು ನೀಡುತ್ತಿದ್ದನು ಎಂದು ಬರೆಯಲಾಗಿದೆ, ಆದರೆ ಹಝ್ರತ್ ಪೈಗಂಬರ್(ಸ) ರ ವಲಸೆಯ ನಂತರ ಈ ಜನರು ತಮ್ಮ ವಾರ್ಷಿಕ ಅನುದಾನಗಳನ್ನು ಪಡೆಯಲು ಅವನ ಬಳಿ ಬಂದಾಗ ಅವನು ಮಾತು ಮಾತಲ್ಲಿ ಹಝ್ರತ್ ಪೈಗಂಬರ್(ಸ) ರ ಬಗ್ಗೆ ಕೇಳಿದನು. ಅವರಲ್ಲಿ ಹಝ್ರತ್ ಪೈಗಂಬರ್(ಸ)ರ ಬಗ್ಗೆ ಧಾರ್ಮಿಕ ಪುಸ್ತಕಗಳ ಆಧಾರದ ಮೇಲೆ ಅವರ ಅಭಿಪ್ರಾಯವನ್ನು ಕೇಳಿದನು. ಆದ್ದರಿಂದ ಅವರು ಹೇಳಿದರು, ಸ್ಪಷ್ಟವಾಗಿ, ನಮಗೆ ತಿಳಿಯುವುದೇನೆಂದರೆ ತೌರಾತ್‌ನಲ್ಲಿ ನಮಗೆ ವಾಗ್ದಾನ ಮಾಡಲಾದ ಅದೇ ಪ್ರವಾದಿ ಇವರಾಗಿದ್ದಾರೆ. ಈ ಉತ್ತರದಿಂದ ಕಅ್‌ಬ್ ತುಂಬಾ ಕೋಪಗೊಂಡು ಎಲ್ಲರನ್ನೂ ಸೋಮಾರಿಗಳೆಂದು ಕರೆದು ಶಪಿಸಿ ಕಳುಹಿಸಿದನು. ಮತ್ತು ಅವರಿಗೆ ಕೊಡುತ್ತಿದ್ದ ಅನುದಾನವನ್ನು ಕೊಡಲಿಲ್ಲ. ಯಹೂದಿ ವಿದ್ವಾಂಸರ ತಮ್ಮ ಜೀವನೋಪಾಯವು ನಿಂತಾಗ, ಸ್ವಲ್ಪ ಸಮಯದ ನಂತರ ಅವರು ಕಅ್‌ಬ್ ಬಳಿಗೆ ಹೋಗಿ ಹೇಳಿದರು: ನಾವು ಕುರುಹುಗಳನ್ನು, ಚಿಹ್ನೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ತಪ್ಪು ಮಾಡಿದ್ದೇವೆ, ನಾವು ಮರುಪರಿಶೀಲಿಸಿದ್ದೇವೆ. ವಾಸ್ತವವಾಗಿ, ಮುಹಮ್ಮದ್(ಸ) ವಾಗ್ದಾನ ನೀಡಿದ ಪ್ರವಾದಿಯಲ್ಲ. ಈ ಉತ್ತರದೊಂದಿಗೆ, ಕಅ್‌ಬ್‌ನ ಕೋರಿಕೆಯನ್ನು ಪರಿಹರಿಸಲಾಯಿತು ಮತ್ತು ಅವನು ಸಂತೋಷದಿಂದ ಅವರಿಗೆ ವಾರ್ಷಿಕ ದಾನವನ್ನು ನೀಡಿದನು. ಆದಾಗ್ಯೂ, ಇದು ಧಾರ್ಮಿಕ ವಿರೋಧವಾಗಿದೆ, ಇದು ಅಹಿತಕರ ರೀತಿಯಲ್ಲಿ ಮಾಡಲ್ಪಟ್ಟಿದೆ, ಆದರೆ ಅದನ್ನು ಶಿಕ್ಷೆಗೆ ಒಳಪಡಿಸುವುದು ಆಕ್ಷೇಪಾರ್ಹವಾಗಿರಲಿಲ್ಲ ಮತ್ತು ಅದರಿಂದಾಗಿ ಕಅ್‌ಬ್‌ನನ್ನು ಆರೋಪಿ ಎಂದು ಪರಿಗಣಿಸಲಾಗುವುದಿಲ್ಲ. ಅದರ ನಂತರ, ಕಅ್‌ಬ್‌ನ ವಿರೋಧವು ಹೆಚ್ಚು ಅಪಾಯಕಾರಿಯಾಯಿತು ಮತ್ತು ಅಂತಿಮವಾಗಿ ಬದ್ರ್ ಯುದ್ಧದ ನಂತರ, ಅವನು ಅತ್ಯಂತ ಭ್ರಷ್ಟ ಮತ್ತು ದೇಶದ್ರೋಹದ ಮನೋಭಾವವನ್ನು ಅಳವಡಿಸಿಕೊಂಡನು. ಪರಿಣಾಮವಾಗಿ, ಮುಸ್ಲಿಮರಿಗೆ ಅತ್ಯಂತ ಅಪಾಯಕಾರಿ ಪರಿಸ್ಥಿತಿಯು ಉದ್ಭವಿಸಿತು. ವಾಸ್ತವವಾಗಿ, ಬದ್ರ್ ಮೊದಲು, ಕಅ್‌ಬ್ ಮುಸ್ಲಿಮರ

ಉತ್ಸಾಹವು ತಾತ್ಕಾಲಿಕ ವಿಷಯ ಎಂದು ನಂಬಿದ್ದನು ಮತ್ತು ಕ್ರಮೇಣ ಈ ಎಲ್ಲಾ ಜನರು ಸ್ವಯಂಚಾಲಿತವಾಗಿ ಚದುರಿಹೋಗುತ್ತಾರೆ ಮತ್ತು ತಮ್ಮ ಸ್ಥಳೀಯ ಧರ್ಮಕ್ಕೆ ಮರಳುತ್ತಾರೆ ಎಂದು ಭಾವಿಸಿದ್ದನು, ಆದರೆ ಬದ್ರ್ ಸಂದರ್ಭದಲ್ಲಿ ಮುಸ್ಲಿಮರು ಅನಿರೀಕ್ಷಿತವಾಗಿ ಜಯ ಸಾಧಿಸಿದರು. ಮತ್ತು ಖುರೈಶ್ ಆಗಾಗ್ಗೆ ಕೊಲ್ಲಲ್ಪಟ್ಟರು, ಆದ್ದರಿಂದ ಈಗ ಈ ಹೊಸ ಧರ್ಮವು ಮಸುಕಾಗುವುದಿಲ್ಲ ಎಂದು ಅವನು ಅರ್ಥಮಾಡಿಕೊಂಡನು. ಆದ್ದರಿಂದ, ಬದ್ರ್ ನಂತರ, ಅವನು ಇಸ್ಲಾಂ ಅನ್ನು ಅಳಿಸಲು ಮತ್ತು ನಾಶಮಾಡಲು ತನ್ನ ಎಲ್ಲಾ ಪ್ರಯತ್ನಗಳನ್ನು ಕಳೆಯಲು ನಿರ್ಧರಿಸಿದನು.

ಬದ್ರ್ ವಿಜಯದ ಸುದ್ದಿ ಮದೀನಾವನ್ನು ತಲುಪಿದ ಸಂದರ್ಭದಲ್ಲಿ ಅವನ ದ್ವೇಷ ಮತ್ತು ಅಸೂಯೆಯ ಮೊದಲ ಅಭಿವ್ಯಕ್ತಿಯಾಗಿದೆ, ಈ ಸುದ್ದಿಯನ್ನು ಕೇಳಿದ ಕಅ್‌ಬ್ ಬಹಿರಂಗವಾಗಿ ಸಾಕ್ಷಿ ನೀಡುತ್ತಾ ಈ ಸುದ್ದಿ ಸಂಪೂರ್ಣವಾಗಿ ಸುಳ್ಳು ಎಂದು ತೋರುತ್ತದೆ ಎಂದು ಘೋಷಿಸಿದನು. ಏಕೆಂದರೆ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ರವರು ಖುರೈಷಿಗಳ ಇಂತಹ ದೊಡ್ಡ ಸೈನ್ಯವನ್ನು ಗೆಲ್ಲಲು ಸಾಧ್ಯವಿಲ್ಲ ಮತ್ತು ಮಕ್ಕಾದ ಹಲವಾರು ಪ್ರಸಿದ್ಧ ಗಣ್ಯರು ನಾಶವಾಗುತ್ತಾರೆ ಮತ್ತು ಈ ಸುದ್ದಿ ನಿಜವಾಗಿದ್ದರೆ, ಈ ಬದುಕಿನಿಂದ ಸಾಯುವುದು ಉತ್ತಮವಾಗಿದೆ ಎಂದು ಹೇಳಿದನು. ಆದಾಗ್ಯೂ, ಈ ಸುದ್ದಿಯನ್ನು ದೃಢಪಡಿಸಿದಾಗ ಮತ್ತು ಬದ್ರ್‌ನ ವಿಜಯವು ಇಸ್ಲಾಂ ಧರ್ಮಕ್ಕೆ ಯಾವುದೇ ಭ್ರಮೆಯಿಲ್ಲದ ಸ್ಥಿರತೆಯನ್ನು ನೀಡಿದೆ ಎಂದು ಕಅ್‌ಬ್‌ಗೆ ಮನವರಿಕೆಯಾದಾಗ, ಅವನು ಕೋಪದಿಂದ ತುಂಬಿದನು ಮತ್ತು ತಕ್ಷಣವೇ ತನ್ನ ಮೆಕ್ಕಾ ಪ್ರಯಾಣಕ್ಕೆ ಸಿದ್ಧನಾದನು. ಅಲ್ಲಿಗೆ ಹೋಗುವುದರ ಮೂಲಕ ಖುರೈಷಿಗಳ ಹೃದಯದಲ್ಲಿ ಉರಿಯುವ ಬೆಂಕಿಯನ್ನು ತನ್ನ ಅದ್ಭುತವಾದ ಮಾತು ಮತ್ತು ಕವನಗಳಿಂದ ಹೊತ್ತಿಸಿದನು. ಅವರ ಎದೆಯು ಸೇಡು ಮತ್ತು ದ್ವೇಷದ ಭಾವನೆಗಳಿಂದ ತುಂಬಿತು. ಮತ್ತು ಕಅ್‌ಬ್‌ನ ಪ್ರಚೋದನೆಯು ಅವರ ಭಾವನೆಗಳನ್ನು ತೀವ್ರವಾಗಿ ವಿದ್ಯುದ್ದೀಕರಿಸಲು ಕಾರಣವಾದಾಗ, ಅವನು ಅವರನ್ನು (ಖುರೈಷಿಗಳನ್ನು) ಕಾಬಾ ಭವನದ ಅಂಗಳಕ್ಕೆ ಕರೆದೊಯ್ದು ಅವರ ಕೈಯಲ್ಲಿ ಕಾಬಾ ಭವನದ ಪರದೆಗಳನ್ನು ನೀಡಿ ಇಸ್ಲಾಂ ಮತ್ತು ಇಸ್ಲಾಮಿನ ಸ್ಥಾಪಕರನ್ನು ನಾಶಗೊಳಿಸುವ ತನಕ ತಾಳ್ಮೆಯಿಂದ ಕೂರುವುದಿಲ್ಲ ಎಂದು ಪ್ರತಿಜ್ಞೆ ಮಾಡಿಸಿದನು. ಮಕ್ಕಾದಲ್ಲಿ ಈ ಜ್ವಾಲಾಮುಖಿ ವಾತಾವರಣವನ್ನು ಸೃಷ್ಟಿಸುವ ಮೂಲಕ, ಈ ನೀಚನು ಇತರ ಗೋತ್ರಗಳ ಕಡೆಗೆ ತಿರುಗಿದನು ಮತ್ತು ಮುಸ್ಲಿಮರ ವಿರುದ್ಧ ಜನರನ್ನು ಪ್ರಚೋದಿಸುವ ಮೂಲಕ ಒಂದು ಸಮುದಾಯದಿಂದ ಇನ್ನೊಂದು ಸಮುದಾಯಕ್ಕೆ ಹೋದನು. ನಂತರ ಅವನು ಮದೀನಾಗೆ ಹಿಂದಿರುಗಿದನು ಮತ್ತು ಅವನ ಸ್ಫೂರ್ತಿದಾಯಕ ಕವಿತೆಗಳಲ್ಲಿ ಮುಸ್ಲಿಂ ಮಹಿಳೆಯರನ್ನು ಅತ್ಯಂತ ಕೊಳಕು ಮತ್ತು ಅಶ್ಲೀಲ ರೀತಿಯಲ್ಲಿ ಉಲ್ಲೇಖಿಸಿದನು. ಪ್ರವಾದಿಯವರ ಕುಟುಂಬದ ಮಹಿಳೆಯರನ್ನು ಕೂಡ ತನ್ನ ಅಶ್ಲೀಲ ಕವಿತೆಗಳಲ್ಲಿ ಉಲ್ಲೇಖಿಸಿದನು ಮತ್ತು ಈ ಕವಿತೆಗಳನ್ನು ದೇಶದಲ್ಲಿ ಜನಪ್ರಿಯಗೊಳಿಸಿದನು. ಅಂತಿಮವಾಗಿ, ಅವನು ಹಝ್ರತ್ ಪೈಗಂಬರ್(ಸ) ಅವರನ್ನು ಕೊಲ್ಲಲು ಸಂಚು ಹೂಡಿದನು ಮತ್ತು ಅವರನ್ನು ಮನೆಗೆ ಆಹ್ವಾನಿಸುವ ನೆಪದಲ್ಲಿ ಕೆಲವು ಯುವ ಯಹೂದಿಗಳನ್ನು ತಮ್ಮ ಮನೆಗೆ ಕರೆದನು, ಆದರೆ ಅಲ್ಲಾಹನ ಅನುಗ್ರಹದಿಂದ, ಅವರಿಗೆ ಸಮಯಕ್ಕೆ ತಿಳಿಸಲಾಯಿತು ಮತ್ತು ಅವನ ಸಂಚು ಯಶಸ್ವಿಯಾಗಲಿಲ್ಲ.

ತಿರುವು ಈ ಹಂತವನ್ನು ತಲುಪಿದಾಗ ಮತ್ತು ಕಅ್‌ಬ್ ವಿರುದ್ಧ ಪ್ರಮಾಣ ಉಲ್ಲಂಘನೆ, ದಂಗೆ, ಯುದ್ಧಕ್ಕೆ ಪ್ರಚೋದನೆ, ದೇಶದ್ರೋಹ, ಅಶ್ಲೀಲತೆ ಮತ್ತು ಕೊಲೆಯ ಪಿತೂರಿಯ ಆರೋಪಗಳು ಪುರಾವೆಯ ಮಟ್ಟವನ್ನು ತಲುಪಿದಾಗ, ಹಝ್ರತ್ ಪೈಗಂಬರ್(ಸ.ಅ)ರವರು ಅಂತರಾಷ್ಟ್ರೀಯ ಒಪ್ಪಂದದ ಪ್ರಕಾರ ಅವರು(ಸ) ಮದೀನಾಗೆ ಆಗಮನದ ನಂತರ, ಮದೀನಾದ ಜನರೊಂದಿಗೆ ಮಾಡಿದ್ದರು, ಹಝ್ರತ್ ಪೈಗಂಬರ್(ಸ)ರವರು ಮದೀನಾದ ಪ್ರಜಾಪ್ರಭುತ್ವದ ಅಧ್ಯಕ್ಷ ಹಾಗೂ ಸರ್ವೋಚ್ಚ ಆಡಳಿತಗಾರರಾಗಿದ್ದರು. ಅವರು(ಸ) ಕಅ್‌ಬ್ ಬಿನ್ ಅಶ್ರಫ್ ತನ್ನ ಕಾರ್ಯಗಳಿಂದಾಗಿ ವಧೆಗೆ ಅರ್ಹನೂ ಎಂಬ ನಿರ್ಧಾರವನ್ನು ನೀಡಿದರು ಮತ್ತು ಅವನ ಕೆಲವು ಸಹಚರರಿಗೆ ಅವನನ್ನು ವಧಿಸಲು ಸೂಚಿಸಿದರು. ಆದರೆ ಆ ಸಮಯದಲ್ಲಿ ಮದೀನಾದ ವಾತಾವರಣವು ಕಅ್‌ಬ್‌ನ ರಾಜದ್ರೋಹಗಳಿಂದಾಗಿ ಮಾರ್ಪಟ್ಟಿದ್ದರಿಂದ, ಅವನನ್ನು ಅಧಿಕೃತವಾಗಿ ಘೋಷಿಸಿ ಕೊಲ್ಲಲು ಹೋದರೆ, ಮದೀನಾದಲ್ಲಿ ಅಪಾಯಕಾರಿ ಅಂತರ್ಯುದ್ಧ ಪ್ರಾರಂಭವಾಗುವ ಸಾಧ್ಯತೆಯಿತ್ತು. ಇದರಲ್ಲಿ ಎಷ್ಟು ರಕ್ತಪಾತವಾಗುತ್ತದೆ ಎಂಬುದು ತಿಳಿದಿರಲಿಲ್ಲ ಮತ್ತು ಹಝ್ರತ್ ಪೈಗಂಬರ್(ಸ) ಅವರು ಎಲ್ಲಾ ಸಂಭಾವ್ಯ ಮತ್ತು ಕಾನೂನುಬದ್ಧ ತ್ಯಾಗವನ್ನು ಮಾಡುವ ಮೂಲಕ ಅಂತರರಾಷ್ಟ್ರೀಯ ರಕ್ತಪಾತವನ್ನು ತಡೆಯಲು ಬಯಸಿದ್ದರು, ಇದರಿಂದಾಗಿ ಮುಸ್ಲಿಮರು ಮತ್ತು ಯಹೂದಿಗಳು ಪರಸ್ಪರ ಹೊಡೆದಾಡಿಕೊಂಡು ಪರಸ್ಪರ ಕೊಲ್ಲಲ್ಪಡುವುದಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ) ಅವರು ಕಅ್‌ಬ್‌ನನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲಬಾರದು ಎಂಬ ಸೂಚನೆಗಳನ್ನು ನೀಡಿದರು, ಆದರೆ ಕೆಲವು ಜನರು ಸದ್ದಿಲ್ಲದೆ ಸೂಕ್ತ ಅವಕಾಶವನ್ನು ಕಂಡುಕೊಂಡು ಅವನನ್ನು ಕೊಲ್ಲಬೇಕು ಎಂದು ಹೇಳಿದರು. ಈ ಕಾರ್ಯವನ್ನು ಕೈಗೊಳ್ಳಲು ಓಸ್ ಗೋತ್ರದ ನಿಷ್ಠಾವಂತ ಸಹಾಬಿ ಮುಹಮ್ಮದ್ ಬಿನ್ ಮುಸಲ್ಲಮ(ರ) ಅವರನ್ನು ವಹಿಸಲಾಯಿತು ಮತ್ತು ಅವರನ್ನು ಅವರು ಯಾವ ವಿಧಾನವನ್ನು ಬೇಕಾದರು ಅಳವಡಿಸಿಕೊಂಡರೂ ಅದು ಔಸ್ ಗೋತ್ರದ ಮುಖ್ಯಸ್ಥ ಸಾದ್ ಬಿನ್ ಮುಆಝ್(ರ) ಅವರ ಸಲಹೆಯೊಂದಿಗೆ ಮಾಡಬೇಕು ಎಂದು ಸೂಚಿಸಿದರು. ಮುಹಮ್ಮದ್ ಬಿನ್ ಮುಸ್ಲಮಾ ಹೇಳಿದರು: ಯಾ ರಸೂಲಲ್ಲಾಹ್! ಮೌನದಿಂದ ಕೊಲ್ಲಲು ಏನಾದರೂ ಹೇಳಬೇಕು. ಅಂದರೆ, ಕೆಲವು ತಂತ್ರ ಇತ್ಯಾದಿಗಳನ್ನು ರೂಪಿಸಬೇಕಾಗುವುದು ಅದರ ಸಹಾಯದಿಂದ ಕಅ್‌ಬ್ ಅನ್ನು ಅವನ ಮನೆಯಿಂದ ಹೊರಗೆ ತೆಗೆದುಕೊಂಡು ಸುರಕ್ಷಿತ ಸ್ಥಳದಲ್ಲಿ ಕೊಲ್ಲಬಹುದು. ಅದಕ್ಕೆ ಹಝ್ರತ್ ಪೈಗಂಬರ್(ಸ)ರವರು ಆ ಸಂದರ್ಭದಲ್ಲಿ ಮೌನ ಶಿಕ್ಷೆಯ ವಿಧಾನವನ್ನು ಕೈಬಿಟ್ಟರೆ ಆಗಬಹುದಾದ ಮಹಾನ್ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ಸರಿ ಎಂದು ಹೇಳಿಸರು. ಆದ್ದರಿಂದ ಮುಹಮ್ಮದ್ ಬಿನ್ ಮುಸ್ಲಮ(ರ) ಸಅದ್ ಬಿನ್ ಮುಆದ್ ಅವರ ಸಲಹೆಯೊಂದಿಗೆ ಅಬು ನೈಲಾ ಮತ್ತು ಇತರ ಇಬ್ಬರು ಅಥವಾ ಮೂವರು ಸಹಚರರನ್ನು ಕರೆದುಕೊಂಡು ಕಅ್‌ಬ್‌ನ ಮನೆಗೆ ತಲುಪಿದರು ಮತ್ತು ಕಅ್‌ಬ್‌ನನ್ನು ಅವನ ಮನೆಯೊಳಗಿಂದ ಕರೆದು ಹೇಳಿದರು, ನಮ್ಮ ಸಾಹಿಬ್ ಅಂದರೆ ಮುಹಮ್ಮದ್ (ಸ) ನಮಗೆ ಸದಖವನ್ನು ನೀಡಲು ಆಜ್ಞಾಪಿಸಿದ್ದಾರೆ ಮತ್ತು ನಾವು ತೊಂದರೆಯಲ್ಲಿದ್ದೇವೆ. ದಯವಿಟ್ಟು ನಮಗೆ ಏನಾದರೂ ಸಾಲ ನೀಡಬಹುದೇ? ಇದನ್ನು ಕೇಳಿದ ಕಅ್‌ಬ್ ಸಂತೋಷದಿಂದ ಜಿಗಿದನು. ಅವನು ಹೇಳತೊಡಗಿದ. ಅಲ್ಲಾಹನ ಆಣೆ! ಈಗ ಏನಾಗಿದೆ ಆ ವ್ಯಕ್ತಿಯಿಂದ ಬೇಸತ್ತು ಅವನನ್ನು ಬಿಟ್ಟು ಹೋಗುವ ದಿನ ದೂರವಿಲ್ಲ. ಅದಕ್ಕೆ ಮುಹಮ್ಮದ್ ಬಿನ್ ಮುಸ್ಲಮಾ(ರ) ಏನೇ ಇರಲಿ ನಾವು ಮುಹಮ್ಮದ್(ಸ) ಅವರನ್ನು ಅನುಸರಿಸಿದ್ದೇವೆ ಮತ್ತು ಈಗ ನಾವು ಈ ಸರಪಳಿಯ ಅಂತ್ಯವನ್ನು ಏನಾಗುವುದು ಎಂದು ನೋಡುತ್ತಿದ್ದೇವೆ. ಆದರೆ ನೀವು ಸಾಲವನ್ನು ಪಾವತಿಸುತ್ತೀರೋ ಇಲ್ಲವೋ ಹೇಳಿ? ಅದಕ್ಕೆ ಕಅ್‌ಬ್ ಹೌದು, ನಿಮ್ಮ ಬಳಿ ಏನಾದರೂ ಇದ್ದರೆ, ಅದನ್ನು ಗಿರವಿಯಾಗಿ ಇಡಿ ಎಂದು ಹೇಳಿದನು. ಮತ್ತು ನಾನು ಬುಖಾರಿಯನ್ನು ಉಲ್ಲೇಖಿಸಿ ವಿವರಿಸಿದಂತೆ ಅವನು ಮೊದಲು ಮಹಿಳೆಯರನ್ನು, ನಂತರ ಗಂಡುಮಕ್ಕಳನ್ನು ಗಿರವಿ ಇಡಲು ಕೇಳಿದನು ಮತ್ತು ಅಂತಿಮವಾಗಿ ಕಅ್‌ಬ್ ಅವರ ಶಸ್ತ್ರಾಸ್ತ್ರಗಳನ್ನು ಗಿರವಿ ಇಡಲು ಒಪ್ಪಿಕೊಂಡನು ಮತ್ತು ಮುಹಮ್ಮದ್ ಬಿನ್ ಮುಸ್ಲಮಾ(ರ) ಮತ್ತು ಅವರ ಸಹಚರರು ರಾತ್ರಿಯಲ್ಲಿ ಬರುವುದಾಗಿ ಭರವಸೆ ನೀಡಿದರು. ಅವರು ಹಿಂತಿರುಗಿದರು. ರಾತ್ರಿಯಾದಾಗ ಈ ತಂಡವು ಆಯುಧ ಇತ್ಯಾದಿಗಳೊಂದಿಗೆ ಕಅ್‌ಬ್‌ನ ಮನೆಗೆ ತಲುಪಿತು ಮತ್ತು ಅವನನ್ನು ಮನೆಯಿಂದ ಹೊರಗೆ ಕರೆದೊಯ್ದು ಮಾತನಾಡುತ್ತಾ ಒಂದು ಬದಿಗೆ ಕರೆತಂದರು, ಸ್ವಲ್ಪ ಸಮಯದ ನಂತರ, ನಡೆದುಕೊಂಡು ಹೋಗುವಾಗ, ಹಿಂದೆ ಶಸ್ತ್ರಸಜ್ಜಿತರಾದ ಸಹಚರರು ಅವನನ್ನು ವಧಿಸಿದರು. ಅವನನ್ನು ಕತ್ತಿಯನ್ನು ಬೀಸಿ ಕೊಂದರು. ಆದಾಗ್ಯೂ, ಕಅ್‌ಬ್ ಕೊಲ್ಲಲ್ಪಟ್ಟನು ಮತ್ತು ಮುಹಮ್ಮದ್ ಬಿನ್ ಮುಸ್ಲಮಾ ಮತ್ತು ಅವನ ಸಹಚರರು ಅಲ್ಲಿಂದ ಹೊರಟು ಹಝ್ರತ್ ಪೈಗಂಬರ್(ಸ) ಅವರ ಸೇವೆಯಲ್ಲಿ ಬಂದು ಹತ್ಯೆಯ ಬಗ್ಗೆ ಅವರಿಗೆ ತಿಳಿಸಿದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಕಅ್‌ಬ್‌ನ ಕೊಲೆಯ ಸುದ್ದಿ ಹರಡಿದಾಗ ಯಹೂದಿಯರ ಒಂದು ಸಂಘ ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ದೂರಿದರು: ನಮ್ಮ ಸರದಾರ ಹೀಗೆ ವಧಿಸಲ್ಪಟ್ಟಿರುವನು. ಹಝ್ರತ್ ಪೈಗಂಬರ್(ಸ) ಕಅ್‌ಬ್‌ನ ಒಪ್ಪಂದದ ಉಲ್ಲಂಘನೆ, ಯುದ್ಧಕ್ಕಾಗಿ ಹುರಿದುಂಬಿಸಿದ್ದು, ಪಿತೂರಿ, ಬೈಗುಳ ಮತ್ತು ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಆತನು ಮಾಡಿದ ರಹಸ್ಯ ಕುತಂತ್ರಗಳು ಇತ್ಯಾದಿ ಕೆಲಸಗಳ ಬಗ್ಗೆ ಸಂಕ್ಷೇಪವಾಗಿ ಅವರಿಗೆ ನೆನಪಿಸಿಕೊಟ್ಟರು. ಆಗ ಅವರು ಹೆದರಿ ಸುಮ್ಮನಾದರು. ಅವರ ಒಪ್ಪಿಗೆಯಿಂದಲೇ ಒಂದು ಹೊಸ ಒಪ್ಪಂದವನ್ನು ಬರೆಯಲಾಯಿತು. ಪಿತೂರಿ ಮತ್ತು ಗಲಭೆಗಳ ಮಾರ್ಗಗಳಿಂದ ಬಿಟ್ಟು ನಿಲ್ಲುವುದಾಗಿ ಯಹೂದಿಯರು ಪುನಃ ವಾಗ್ದಾನ ಮಾಡಿದರು. ಈ ಒಪ್ಪಂದವನ್ನು ಹಝ್ರತ್ ಅಲೀ(ರ)ರವರಿಗೆ ನೀಡಲಾಯಿತು.

ಅನಂತರ ಎಂದಾದರೂ ಯಹೂದಿಗಳು ಕಅ್‌ಬ್ ಬಿನ್ ಅಶ್ರಫಿನ ಕೊಲೆಯ ಬಗ್ಗೆ ಪ್ರಸ್ತಾಪಿಸಿ ಮುಸ್ಲಿಮರ ಮೇಲೆ ಆರೋಪ ಹೊರಿಸಿದ್ದಾಗಿ ಯಾವುದೇ ಪ್ರಸ್ತಾಪ ಚರಿತ್ರೆಯಲ್ಲಿ ಕಂಡುಬರುವುದಿಲ್ಲ. ಏಕೆಂದರೆ ಕಅ್‌ಬ್ ವಧೆಶಿಕ್ಷೆಗೆ ಅರ್ಹನಾಗಿದ್ದನು ಎಂದು ಅವರಿಗೂ ಅನಿಸುತ್ತಿತ್ತು.

ಒಂದು ಅನ್ಯಾಯವಾದ ಕೊಲೆಯನ್ನು ಹಝ್ರತ್ ಪೈಗಂಬರ್(ಸ) ಮಾಡಿಸಿದ್ದರು ಎಂದು ಕೆಲವು ಚರಿತ್ರೆಗಾರರು ಆರೋಪಿಸುತ್ತಾರೆ. ಆದರೆ ಅದು ಅನ್ಯಾಯವಾದ ಕೊಲೆಯಾಗಿರಲಿಲ್ಲ ಎಂಬುದು ಸ್ಪಷ್ಟ. ಏಕೆಂದರೆ ಕಅ್‌ಬ್ ಬಿನ್ ಅಶ್ರಫ್ ಹಝ್ರತ್ ಪೈಗಂಬರ್(ಸ)ರೊಂದಿಗೆ ಶಾಂತಿಯ ಒಪ್ಪಂದವನ್ನು ಮಾಡಿಕೊಂಡಿದ್ದನು. ಮುಸ್ಲಿಮರ ವಿರುದ್ಧ ಕಾರ್ಯಾಚರಣೆ ಮಾಡುವುದಿಲ್ಲ ಎಂದು ಮಾತ್ರವಲ್ಲ ಹೊರಗಿನ ಶತ್ರುಗಳ ವಿರುದ್ಧ ಮುಸ್ಲಿಮರಿಗೆ ನೆರವು ನೀಡುವೆನು ಮತ್ತು ಮುಸ್ಲಿಮರ ಜೊತೆಗೆ ಗೆಳೆತನದ ಸಂಬಂಧಗಳನ್ನು ಇರಿಸುವೆನು ಎಂದು ಕೂಡ ಆತನು ಪ್ರತಿಜ್ಞೆ ಮಾಡಿದ್ದನು. ಮತ್ತು ಈ ಒಪ್ಪಂದದ ಪ್ರಕಾರ, ಹಜ್‌ರತ್ ಪೈಗಂಬರ್(ಸ) ಅವರು ಮದೀನಾದಲ್ಲಿ ಸ್ಥಾಪಿಸಲಾದ ಪ್ರಜಾಪ್ರಭುತ್ವ ಸಾಮ್ರಾಜ್ಯದ ಅಧ್ಯಕ್ಷರಾಗಿರುತ್ತಾರೆ ಮತ್ತು ಅವರ ನಿರ್ಧಾರವು ಎಲ್ಲರಿಗೂ ಬದ್ಧವಾಗಿರುತ್ತದೆ ಎಂದು ಅವನು ಒಪ್ಪಿಕೊಂಡಿದ್ದನು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಬರೆಯುತ್ತಾರೆ: ಈ ಒಪ್ಪಂದದ ಅಡಿಯಲ್ಲಿ, ಯಹೂದಿ ಜನರು ತಮ್ಮ ಪ್ರಕರಣಗಳು ಇತ್ಯಾದಿಗಳನ್ನು ಹಝ್ರತ್ ಪೈಗಂಬರ್(ಸ)ರ ಸೇವೆಗೆ ಪ್ರಸ್ತುತಪಡಿಸುತ್ತಿದ್ದರು ಮತ್ತು ಅವರು(ಸ) ಅವರಿಗೆ ಆದೇಶಗಳನ್ನು ನೀಡುತ್ತಿದ್ದರು ಎಂದು ಇತಿಹಾಸದಿಂದ ಸಾಬೀತಾಗಿದೆ. ಈಗ, ಈ ಸಂದರ್ಭಗಳ ನಡುವೆಯೂ, ಕಅ್‌ಬ್ ಮುಸ್ಲಿಮರೊಡನೆ ಮಾಡಿದ ಒಪ್ಪಂದವನ್ನು ಮುರಿದು ದ್ರೋಹ ಮಾಡಿದನು ಹಾಗೂ ಮದೀನದಲ್ಲಿ ಪಿತೂರಿ ಮತ್ತು ಕಲಹದ ಬೀಜವನ್ನು ಬಿತ್ತಿ ಯುದ್ಧದ ಬೆಂಕಿಯನ್ನು ಹೊತ್ತಿಸಲು ಪ್ರಯತ್ನಿಸಿದನು ಹಾಗೂ ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಯೋಜನೆಗಳನ್ನು ಹಾಕಿದನು. ಆತನ ಅಪರಾಧಗಳ ರಾಶಿ ಬಹಳಷ್ಟು ಇದ್ದ ಕಾರಣದಿಂದ ಆತನ ವಿರುದ್ಧ ಶಿಕ್ಷಾ ಕ್ರಮವನ್ನು ಕೈಗೊಳ್ಳಲಾಯಿತು. ಇಂದಿನ ನಾಮಧಾರಿ ನಾಗರಿಕ ದೇಶಗಳಲ್ಲಿ ಕೂಡ ದೇಶದ್ರೋಹ, ಒಪ್ಪಂದದ ಉಲ್ಲಂಘನೆ, ಜನರನ್ನು ಕೆರಳಿಸುವುದು, ಯುದ್ಧದ ಸ್ಥಿತಿ ಉಂಟುಮಾಡುವುದು ಕುತಂತ್ರ ಇತ್ಯಾದಿ ಅಪರಾಧಿಗಳಿಗೆ ಶಿಕ್ಷೆ ನೀಡಲಾಗುತ್ತಿದೆ. ಹೀಗಿರುವಾಗ ಆಕ್ಷೇಪಕ್ಕೆ ಯಾವ ಎಡೆಯಿದೆ? ಇತ್ತೀಚಿಗೆ ಪೆಲಸ್ತೀನ್ ಮತ್ತು ಇಸ್ರೇಲಿನ ನಡುವೆ ಅದಕ್ಕಿಂತಲೂ ಹೆಚ್ಚಿನದು ಆಗುತ್ತಿವೆ. ಅವುಗಳು ಅನೇಕ ರೀತಿಯಲ್ಲಿ ಅನ್ಯಾಯವಾಗಿದೆ.

ಮತ್ತೊಂದು ಪ್ರಶ್ನೆ ಮೌನವಾಗಿ ಮತ್ತು ರಹಸ್ಯವಾಗಿ ಆತನನ್ನು ಕೊಂದು ಹಾಕಿದ ರೀತಿಯ ಬಗ್ಗೆಯಾಗಿದೆ.

ರಾತ್ರೋರಾತ್ರಿ ಕೊಂದರೆ ಮೌನವಾಗಿ ಕೊಂದಿದ್ದು ಏಕೆ? ಆ ಸಮಯದಲ್ಲಿ ಅರೇಬಿಯಾದಲ್ಲಿ ಯಾವುದೇ ಔಪಚಾರಿಕ ಸಾಮ್ರಾಜ್ಯ ಇರಲಿಲ್ಲ ಎಂಬುದನ್ನು ನೆನಪಿನಲ್ಲಿಡಬೇಕು. ಒಬ್ಬ ಮುಖ್ಯಸ್ಥನನ್ನು ನೇಮಿಸಲಾಗಿತ್ತು, ಆದರೆ ಅವನ ನಿರ್ಧಾರ ಮಾತ್ರವಲ್ಲ ಬದಲಿಗೆ ಅವರು ತನ್ನ ಸ್ವಂತ ನಿರ್ಧಾರಗಳನ್ನು ಮಾಡಲು ಬಯಸಿದರೆ, ಪ್ರತಿಯೊಬ್ಬ ವ್ಯಕ್ತಿ ಮತ್ತು ಪ್ರತಿ ಗೋತ್ರಗಳು ಸಹ ಸ್ವತಂತ್ರವಾಗಿ ತಮ್ಮ ನಿರ್ಧಾರಗಳನ್ನು ಕೈಗೊಳ್ಳಬಹುದಾಗಿತ್ತು. ಅವರು ಹಝ್ರತ್ ಪೈಗಂಬರ್ (ಸ) ರ ಬಳಿಗೆ ಸಮಂಜಸವಾದ ತೀರ್ಪನ್ನು ಪಡೆಯಲು ಬರುತ್ತಿದ್ದರು ಮತ್ತು ಗೋತ್ರಗಳು ತಮ್ಮದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು. ಇಂತಹ ಸ್ಥಿತಿಯಲ್ಲಿ ಕಅ್‌ಬ್‌ನ ವಿರುದ್ಧ ಮೊಕದ್ದಮೆ ಹೂಡಿ ನಿಯಮಿತವಾಗಿ ವಧೆಶಿಕ್ಷೆಯ ಆದೇಶವನ್ನು ಯಾವ ನ್ಯಾಯಾಲಯದಿಂದ ಪಡೆಯಲು ಸಾಧ್ಯವಿತ್ತು? ಮುಸಲ್ಮಾನರಿಗೆ ದ್ರೋಹ ಬಗೆದ ಯಹೂದಿಗಳನ್ನೇ ಮುಂದಿಟ್ಟುಕೊಂಡು ದಿನಕ್ಕೊಂದು ಸಂಕಟ ಸೃಷ್ಟಿಸುತ್ತಿದ್ದ ಯಹೂದಿಗಳಿಗೆ ದೂರು ಕೊಡುತ್ತಿದ್ದರೇನೋ? ಹೀಗಾಗಿ ಯಹೂದಿಗಳ ಮೊರೆ ಹೋಗುವುದರಲ್ಲಿ ಎರಡು ಮಾತಿಲ್ಲ. ಕಳೆದ ತಿಂಗಳಲ್ಲಿ ಮದೀನಾವನ್ನು ಮೂರ್ನಾಲ್ಕು ಬಾರಿ ದಾಳಿ ಮಾಡಲು ಸಿದ್ಧರಾದ ಸುಲೈಮ್ ಮತ್ತು ಘಾತ್‌ಫಾನ್ ಗೋತ್ರಗಳನ್ನು ಸಂಪರ್ಕಿಸಬೇಕಾಗಿತ್ತೇ. ಅವರೂ ಅವರ ಗೋತ್ರಗಳೇ ಆಗಿದ್ದರು, ಆದ್ದರಿಂದ ಅವರಿಂದಲೂ ಯಾವುದೇ ನ್ಯಾಯ ಸಿಗುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಆದಾಗ್ಯೂ, ಅಂದಿನ ಪರಿಸ್ಥಿತಿಯನ್ನು ಪರಿಗಣಿಸಿ ಮತ್ತು ನಂತರ ಮುಸ್ಲಿಮರಿಗೆ ಬೇರೆ ದಾರಿ ಏನು ಎಂದು ಯೋಚಿಸಿ, ಒಬ್ಬ ವ್ಯಕ್ತಿಯ ಪ್ರಚೋದನೆ ಮತ್ತು ಆಂದೋಲನ ಯುದ್ಧ ಮತ್ತು ದೇಶದ್ರೋಹ ಮತ್ತು ಕೊಲ್ಲುವ ಪಿತೂರಿಯು ತನಗಾಗಿ ಮತ್ತು ದೇಶದ ಶಾಂತಿಗಾಗಿ ಅವನ ಜೀವವನ್ನು ಅಪಾಯಕ್ಕೆ ಒಳಪಡಿಸಿದಾಗ. ಅವರಿಗೆ ಸಾಧ್ಯವಾದರೆ, ಅವರು ಆತ್ಮರಕ್ಷಣೆಗಾಗಿ ಅವನನ್ನು ಕೊಲ್ಲುತ್ತಿದ್ದರು, ಏಕೆಂದರೆ ಅನೇಕ ಶಾಂತಿಯುತ ನಾಗರಿಕರ ಜೀವಕ್ಕೆ ಅಪಾಯವನ್ನುಂಟುಮಾಡುವುದಕ್ಕಿಂತ ಮತ್ತು ದೇಶದ ಶಾಂತಿಯನ್ನು ನಾಶಪಡಿಸುವುದಕ್ಕಿಂತ ದುಷ್ಟ ಮತ್ತು ಭ್ರಷ್ಟನನ್ನು ಕೊಲ್ಲುವುದು ಉತ್ತಮವಾಗಿತ್ತು.

ಕೊಲೆಗಿಂತ ಪ್ರಲೋಭನೆ ದೊಡ್ಡದು ಎಂದು ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾನೆ. ಆದರೆ, ವಲಸೆಯ ನಂತರ ಮುಸ್ಲಿಮರು ಮತ್ತು ಯಹೂದಿಗಳ ನಡುವಿನ ಒಪ್ಪಂದದ ಪ್ರಕಾರ, ಹಝ್ರತ್ ಪೈಗಂಬರ್ (ಸ) ಅವರಿಗೆ ಸಾಮಾನ್ಯ ನಾಗರಿಕನ ಸ್ಥಾನಮಾನ ಇರಲಿಲ್ಲ ಬದಲಿಗೆ ಅವರು(ಸ) ಈ ಪ್ರಜಾಪ್ರಭುತ್ವ ರಾಷ್ಟ್ರದ ಅಧ್ಯಕ್ಷರಾಗಿದ್ದರು ಮತ್ತು ಹಝ್ರತ್ ಪೈಗಂಬರ್(ಸ) ಅವರನ್ನು ಎಲ್ಲ ಜಗಳಗಳಲ್ಲಿ ಮತ್ತು ರಾಜಕೀಯ ವಿಷಯಗಳಲ್ಲಿ ಸಮಂಜಸವೆಂದು ತೋರುವ ತೀರ್ಪನ್ನು ಹೊರಡಿಸಲು ಹಝ್ರತ್ ಪೈಗಂಬರ್(ಸ)ರಿಗೆ ಅಧಿಕಾರ ನೀಡಲಾಗಿತ್ತು.

ಹೀಗಿರುವಾಗ ದೇಶದಲ್ಲಿ ಶಾಂತಿ ನೆಲೆಸಲಿಕ್ಕಾಗಿ ಕಅ್‌ಬ್‌ನ ಪಿತೂರಿಯ ಕಾರಣದಿಂದ ಆತನನ್ನು ವಧೆಶಿಕ್ಷೆಗೆ ಅರ್ಹನೆಂದು ಹಝ್ರತ್ ಪೈಗಂಬರ್(ಸ) ವಿಧಿಸಿದರೆ, ಹಝ್ರತ್ ಪೈಗಂಬರ್(ಸ)ರ ತೀರ್ಪಿನ ಮೇಲೆ ನ್ಯಾಯಾಲಯದಲ್ಲಿ ಅಪೀಲು ಮಾಡಲು ಯಾರಿಗಾದರೂ ಹಕ್ಕು ಇರಲು ಹೇಗೆ ಸಾಧ್ಯ? ವಿಶೇಷವಾಗಿ ಕಅ್‌ಬ್‌ಗೆ ವಿಧಿಸಲಾದ ಈ ಶಿಕ್ಷೆಯನ್ನು ಆತನ ಅಪರಾಧಗಳ ಬೆಳಕಿನಲ್ಲಿ ಸರಿಯೆಂದು ಮನವರಿಕೆ ಮಾಡಿಕೊಂಡು ಯಹೂದಿಯರು ಸುಮ್ಮನಿದ್ದರು ಮತ್ತು ಅದರ ಬಗ್ಗೆ ಯಾವುದೇ ಆಕ್ಷೇಪ ಎತ್ತಲಿಲ್ಲ.

(ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಸಾಹಿಬ್ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟಗಳು 466 ರಿಂದ 472)

ಹಝ್ರತ್ ಉಮರ್(ರ)ರವರ ಪುತ್ರಿ ಹಝ್ರತ್ ಹಫ್ಸಾ(ರ) ಅವರ ಎರಡನೇ ವಿವಾಹವೂ ಇದೇ ಅವಧಿಯಲ್ಲಿ ನಡೆಯಿತು. ಹಝ್ರತ್ ಹಫ್ಸಾ(ರ) ಅವರು ಹಝ್ರತ್ ಉಮರ್(ರ) ರವರ ಪುತ್ರಿ ಮತ್ತು ಅವರ ವಿವಾಹ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ನಡೆಯಿತು ಅದರ ವಿವರ ಹೀಗಿದೆ: ಹಝ್ರತ್ ಹಫ್ಸಾ(ರ) ಅವರ ಪತಿ ಬದ್ರ್ ಯುದ್ಧದಲ್ಲಿ ಭಾಗವಹಿಸಿದರು ಮತ್ತು ಅನಾರೋಗ್ಯದಿಂದ ಹಿಂದಿರುಗಿದ ನಂತರ ನಿಧನರಾದರು. ನಂತರ ಹಝ್ರತ್ ಪೈಗಂಬರ್(ಸ)ರವರು ಹಝ್ರತ್ ಹಫ್ಸಾ(ರ) ಅವರನ್ನು ವಿವಾಹವಾದರು.

ಇದರ ವಿವರವು ಬುಖಾರಿಯಲ್ಲಿ ಈ ಕೆಳಗಿನಂತೆ ದಾಖಲಿಸಲಾಗಿದೆ: ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ.ಅ) ರವರು ಹೇಳುತ್ತಾರೆ, ಹಝ್ರತ್ ಹಫ್ಸಾ ಬಿಂತ್ ಉಮರ್ (ರ.ಅ) ರವರು ಹಝ್ರತ್ ಪೈಗಂಬರ್(ಸ)ರವರ ಓರ್ವ ಖುನೈಸ್ ಬಿನ್ ಹುದಾಫ ಸಾಹ್ಮಿ ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರಯ ಅವರಿಂದ ವಿಧವೆಯಾದರು. ಒಂದು ವರದಿಯ ಪ್ರಕಾರ ಅವರು ಮದೀನಾದಲ್ಲಿ ನಿಧನರಾದಾಗ, ಹಝ್ರತ್ ಉಮರ್(ರ) ಹೇಳಿದರು ನಾನು ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಅವರನ್ನು ಭೇಟಿ ಮಾಡಿದ್ದೇನೆ. ಅವರಲ್ಲಿ ಹಫ್ಸಾ ಬಗ್ಗೆ ಪ್ರಸ್ತಾಪಿಸಿದ್ದೇನೆ ಒಂದು ವೇಳೆ ಅವರು ಬಯಸಿದ್ದರೆ ನಾನು ಅವರಿಗೆ ಹಫ್ಸಾಳನ್ನು ನೀಡಿ ಮದುವೆಮಾಡಿಸುತ್ತೇನೆ. ಅದಕ್ಕೆ ಹಝ್ರತ್ ಉಸ್ಮಾನ್(ರ) ರವರು ಹೇಳಿದರು, ನಾನು ನನ್ನ ಈ ವಿಷಯದ ಯೋಚಿಸುತ್ತೇನೆ. ಹಝ್ರತ್ ಉಮರ್(ರ) ಹೇಳಿದರು: ಹಾಗಾಗಿ ನಾನು ಹಲವಾರು ದಿನಗಳವರೆಗೆ ಕಾಯುತ್ತಿದ್ದೆ. ಆಗ ಹಝ್ರತ್ ಉಸ್ಮಾನ್ ಅವರು ಕೆಲವು ದಿನಗಳ ನಂತರ ನಾನು ಈ ದಿನಗಳಲ್ಲಿ ಮದುವೆಯಾಗದಿರುವುದು ಸೂಕ್ತವೆಂದು ನಾನು ಭಾವಿಸುತ್ತೇನೆ ಎಂದು ಹೇಳಿದರು. ಹಝ್ರತ್ ಉಮರ್ ರ.ಅ ರವರು ಹೇಳುತ್ತಾರೆ: ಆಗ ನಾನು ಹಝ್ರತ್ ಅಬೂಬಕರ್ ರ.ಅ ಅವರನ್ನು ಭೇಟಿಯಾದೆ, ನೀವು ಬಯಸಿದರೆ ನಾನು ಹಫ್ಸಾ ಬಿಂತ್ ಉಮರ್ ರ.ಅ ರವರನ್ನು ನಿಮಗೆ ಮದುವೆ ಮಾಡಿಕೊಡುತ್ತೇನೆ ಎಂದು. ಹಝ್ರತ್ ಅಬೂಬಕರ್(ರ) ಅವರು ನನಗೆ ಉತ್ತರಿಸಲಿಲ್ಲ ಮತ್ತು ಮೌನವಾದರು ಮತ್ತು ಹಝ್ರತ್ ಉಮರ್(ರ) ಹೇಳುತ್ತಾರೆ, ನಾನು ಉಸ್ಮಾನ್‌ಗಿಂತ ಹೆಚ್ಚು ಭಾವಿಸಿದ್ದೇನೆ, ಅಂದರೆ ಅವರು ನಿರಾಕರಿಸಿದ್ದಾರೆ ಎಂದು ಭಾವಿಸಿದೆ. ಕೆಲವು ದಿನಗಳ ನಂತರ ನಾನು ಹಝ್ರತ್ ಪೈಗಂಬರ್(ಸ) ರವರಿಗೆ ಹಝ್ರತ್ ಹಫ್ಸಾ ಅವರಿಗೆ ಮದುವೆಯ ಸಂದೇಶವನ್ನು ಕಳುಹಿಸಿದೆ ಮತ್ತು ನಾನು ಹಝ್ರತ್ ಪೈಗಂಬರ್(ಸ) ಅವರಿಂದ ಹಫ್ಸಾಳ ನಿಕಾಹ್ ಮಾಡಿಕೊಟ್ಟೆ. (ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್-ಮಘಾಜಿ, ಹದೀಸ್ ಸಂಖ್ಯೆ-4005)

ಈ ಘಟನೆಯನ್ನು ಸೀರತ್ ಖಾತಮನ್ನಬೀಈನ್(ಸ) ನಲ್ಲಿ ಈ ಕೆಳಗಿನಂತೆ ಬರೆಯಲಾಗಿದೆ: ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರಿಗೆ ಹಫ್ಸಾ ಎಂಬ ಪುತ್ರಿ ಇದ್ದಳು. ಅವರು ಖುನೈಸ್ ಬಿನ್ ಹುಝಾಫಾ ಅವರನ್ನು ವಿವಾಹವಾದರು, ಅವರು ನಿಷ್ಠಾವಂತ ಸಹಾಬಿ ಮತ್ತು ಬದ್ರ್ ಯುದ್ಧದಲ್ಲಿ ಭಾಗವಹಿಸಿದ್ದರು. ಬದ್ರ್ ನಂತರ ಮದೀನಾಗೆ ಹಿಂದಿರುಗಿದ ನಂತರ, ಖುನೈಸ್ ಅನಾರೋಗ್ಯಕ್ಕೆ ಒಳಗಾದರು ಮತ್ತು ಈ ಅನಾರೋಗ್ಯದಿಂದ ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅವರ ನಿಧನದ ಸ್ವಲ್ಪ ಕಾಲದ ನಂತರ, ಹಝ್ರತ್ ಉಮರ್(ರ) ಅವರು ಹಫ್ಸಾ ಅವರ ಮರುವಿವಾಹದ ಬಗ್ಗೆ ಚಿಂತಿತರಾದರು. ಆಗ ಹಫ್ಸಾಗೆ ಇಪ್ಪತ್ತು ವರ್ಷಕ್ಕಿಂತ ಅಧಿಕ ವಯಸ್ಸಾಗಿತ್ತು. ಹಝ್ರತ್ ಉಮರ್(ರ) ಅವರು ತಮ್ಮ ಸಹಜ ಸರಳತೆಯಲ್ಲಿ ಸ್ವತಃ ಉಸ್ಮಾನ್ ಬಿನ್ ಅಫ್ಫಾನ್(ರ) ಅವರನ್ನು ಭೇಟಿಯಾಗಿ ನನ್ನ ಮಗಳು ಹಫ್ಸಾ ಈಗ ವಿಧವೆಯಾಗಿದ್ದಾರೆ ಎಂದು ತಿಳಿಸಿದರು. ನೀವು ಬಯಸಿದರೆ ನೀವು ಅವಳನ್ನು ಮದುವೆಯಾಗಬಹುದು, ಆದರೆ ಹಝ್ರತ್ ಉಸ್ಮಾನ್(ರ) ನಿರಾಕರಿಸಿದರು. ಅದರ ನಂತರ ಹಝ್ರತ್ ಉಮರ್(ರ) ಅವರು ಹಝ್ರತ್ ಅಬೂಬಕರ್(ರ) ಅವರ ಬಳಿ ಪ್ರಸ್ತಾಪಿಸಿದರು, ಆದರೆ ಹಝ್ರತ್ ಅಬೂಬಕರ್(ರ) ಅವರು ಸಹ ಉತ್ತರಿಸದೆ ಮೌನವಾಗಿದ್ದರು. ಹಝ್ರತ್ ಉಮರ್(ರ) ಅವರು ಇದರಿಂದ ತುಂಬಾ ಬೇಸತ್ತಿದ್ದರು ಮತ್ತು ಈ ಬೇಸರದ ಸ್ಥಿತಿಯಲ್ಲಿ ಅವರು ಹಝ್ರತ್ ಪೈಗಂಬರ್(ಸ) ಅವರ ಸೇವೆಯಲ್ಲಿ ಬಂದು ಅವರಿಗೆ ಇಡೀ ಕಥೆಯನ್ನು ವಿವರಿಸಿದರು. ಅದಕ್ಕೆ ಅವರು(ಸ) ಹೇಳಿದರು: ಉಮರ್! ಚಿಂತಿಸಬೇಡಿ. ದೇವರು ಬಯಸಿದಲ್ಲಿ, ಹಫ್ಸಾ ಉಸ್ಮಾನ್(ರ) ಮತ್ತು ಅಬುಬಕರ್(ರ) ಗಿಂತ ಉತ್ತಮ ಪತಿಯನ್ನು ಪಡೆಯುತ್ತಾರೆ ಮತ್ತು ಉಸ್ಮಾನ್(ರ) ಹಫ್ಸಾಗಿಂತ ಉತ್ತಮ ಪತ್ನಿಯನ್ನು ಪಡೆಯುತ್ತಾರೆ.

ಹಝ್ರತ್ ಪೈಗಂಬರ್(ಸ) ಅವರು ಹಫ್ಸಾ(ರ) ಅವರನ್ನು ಮದುವೆಯಾಗಲು ಮತ್ತು ಅವರ ಮಗಳು ಉಮ್ಮೆ ಕುಲ್ಸೂಮ್ ಅವರನ್ನು ಹಝ್ರತ್ ಉಸ್ಮಾನ್(ರ) ಅವರಿಗೆ ಮದುವೆ ಮಾಡಲು ಉದ್ದೇಶಿಸಿದ್ದರಿಂದ ಹೀಗೆ ಹೇಳಿದರು, ಇದು ಹಝ್ರತ್ ಅಬುಬಕರ್(ರ) ಮತ್ತು ಹಝ್ರತ್ ಉಸ್ಮಾನ್(ರ) ಇಬ್ಬರಿಗೂ ತಿಳಿದಿತ್ತು ಮತ್ತು ಆದ್ದರಿಂದ ಅವರು ಹಝ್ರತ್ ಉಮರ್(ರ) ಅವರ ಪ್ರಸ್ತಾಪವನ್ನು ತಿರಸ್ಕರಿಸಿದರು. ಸ್ವಲ್ಪ ಸಮಯದ ನಂತರ, ಹಝ್ರತ್ ಪೈಗಂಬರ್(ಸ) ಅವರು ತಮ್ಮ ಪುತ್ರಿ ಉಮ್ಮೆ ಕುಲ್ಸೂಮ್(ರ) ಅವರನ್ನು ಹಝ್ರತ್ ಉಸ್ಮಾನ್ (ರ.ಅ) ರೊಂದಿಗೆ ವಿವಾಹವಾದರು ಮತ್ತು ನಂತರ ಅವರು ಹಫ್ಸಾಗಾಗಿ ಹಝ್ರತ್ ಉಮರ್(ರ) ಅವರಿಗೆ ಸಂದೇಶವನ್ನು ಕಳುಹಿಸಿದರು. ಹಝ್ರತ್ ಉಮರ್(ರ) ಅವರಿಗೆ ಇದಕ್ಕಿಂತ ಇನ್ನೇನು ಬೇಕಿತ್ತು? ಅವರು ಈ ಸಂಬಂಧವನ್ನು ಸಂತೋಷದಿಂದ ಒಪ್ಪಿಕೊಂಡರು ಮತ್ತು ಶಾಬಾನ್ 3 ಹಿಜರಿನಲ್ಲಿ, ಹಝ್ರತ್ ಹಫ್ಸಾ(ರ) ಹಝ್ರತ್ ಪೈಗಂಬರ್(ಸ) ರನ್ನು ವಿವಾಹವಾದ ನಂತರ ಹಝ್ರತ್ ಪೈಗಂಬರ್(ಸ) ಅವರ ಧರ್ಮಪತ್ನಿಯರಲ್ಲಿ ಪ್ರವೇಶಿಸಿದರು. ಈ ಸಂಬಂಧವನ್ನು ಸ್ಥಾಪಿಸಿದ ನಂತರ, ಹಝ್ರತ್ ಅಬೂಬಕರ್(ರ) ಅವರು ಹಝ್ರತ್ ಉಮರ್(ರ) ಅವರಿಗೆ ಹೇಳಿದರು ಬಹುಶಃ ನಿಮ್ಮ ಮನಸ್ಸಿನಲ್ಲಿ ನನ್ನಿಂದ ಏನಾದರೂ ತಪ್ಪಾಗಿರಬಹುದು. ವಿಷಯವೇನೆಂದರೆ ಅಲ್ಲಾಹನ ಸಂದೇಶವಾಹಕರ ಉದ್ದೇಶವನ್ನು ನಾನು ಅರಿತುಕೊಂಡಿದ್ದೆ, ಆದರೆ ಅವರ ಅನುಮತಿಯಿಲ್ಲದೆ ನಾನು ಅವರ ರಹಸ್ಯವನ್ನು ಬಹಿರಂಗಪಡಿಸಲು ಸಾಧ್ಯವಿರಲಿಲ್ಲ. ಹೌದು, ಒಂದುವೇಳೆ ಅವರಿಗೆ(ಸ) ಈ ಉದ್ದೇಶ ಹೊಂದಿರುತ್ತಿರಲಿಲ್ಲದಿದ್ದರೆ, ನಾನು ಹಫ್ಸಾಳನ್ನು ಸಂತೋಷದಿಂದ ಮದುವೆಯಾಗುತ್ತಿದ್ದೆ.

ಹಫ್ಸಾ ಅವರ ವಿವಾಹದಲ್ಲಿ ಒಂದು ವಿಶೇಷತೆ ಇತ್ತು ಅವರು ಹಝ್ರತ್ ಉಮರ್(ರ) ರವರ ಪುತ್ರಿಯಾಗಿದ್ದರು ಅಂದರೆ ಹಝ್ರತ್ ಅಬೂಬಕರ್(ರ) ಅವರ ನಂತರ ಅವರು ಎಲ್ಲಾ ಸಹಾಬರರಲ್ಲಿ ಅತ್ಯುತ್ತಮವೆಂದು ಪರಿಗಣಿಸಲ್ಪಟ್ಟರು ಮತ್ತು ಅವರು ಹಝ್ರತ್ ಪೈಗಂಬರ್(ಸ) ಅವರ ಆಪ್ತರಲ್ಲಿ ಒಬ್ಬರಾಗಿದ್ದರು. ಅವರು ಓರ್ವ ನಿಷ್ಠಾವಂತ ಸಹಾಬಿಯಾದ ಖುನೈಸ್ ಬಿನ್ ಹುದಾಫ(ರ)ರಿಗೆ ವಿವಾಹಿತರಾಗಿದ್ದರು. ಆ ಸಹಾಬಿ ಬದ್ರ್ ಯುದ್ಧದಿಂದ ಮರಳಿ ಬಂದ ನಂತರ ರೋಗಿಯಾದರು ಮತ್ತು ಆ ರೋಗದಿಂದ ಚೇತರಿಸಲಾಗದೇ ನಿಧನಗೊಂಡರು. ಹಝ್ರತ್ ಹಫ್ಸ(ರ)ರ ಪತಿಯ ಅಕಾಲಿಕ ಮರಣದ ಕಾರಣದಿಂದ ಅವರಿಗೆ ಉಂಟಾದ ದುಃಖವನ್ನು ದೂರ ಮಾಡಲಿಕ್ಕಾಗಿಯೂ, ಹಝ್ರತ್ ಉಮರ್(ರ)ರೊಡನೆ ಸಂಬಂಧವನ್ನು ಸುದೃಢಗೊಳಿಸಲಿಕ್ಕಾಗಿಯೂ ಮತ್ತು ಹಝ್ರತ್ ಹಫ್ಸ(ರ) ವಿದ್ಯಾವಂತರಾಗಿದ್ದರು ಎಂಬ ವಿಶೇಷತೆಯನ್ನು ಹೊಂದಿದ್ದರು ಎಂಬ ಕಾರಣದಿಂದ ಇಸ್ಲಾಮಿನ ಪ್ರಚಾರ ಮತ್ತು ಶಿಕ್ಷಣದ ಕೆಲಸವನ್ನು ವಿಸ್ತಾರಗೊಳಿಸಲಿಕ್ಕಾಗಿಯೂ ಹಝ್ರತ್ ಪೈಗಂಬರ್(ಸ) ಅವರೊಡನೆ ನಿಕಾಹ್ ಮಾಡಿಕೊಂಡರು. (ಸೀರತ್ ಖಾತಮನ್ನಬೀಈನ್, ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-477-478)

ಪರಿಶುದ್ಧ ಪತ್ನಿಯರಲ್ಲಿ ಅವರಿಗೆ ವಿಶೇಷ ಸ್ಥಾನಮಾನವಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ಅವರು ಹಝ್ರತ್ ಆಯಿಷಾ(ರ) ಅವರಿಗೆ ತುಂಬಾ ಹತ್ತಿರವಾಗಿದ್ದರು ಮತ್ತು ಅಂತಹ ಸಂಬಂಧದಲ್ಲಿ ಸಂಭವಿಸುವ ಸಾಂದರ್ಭಿಕ ಘರ್ಷಣೆಯನ್ನು ಹೊರತುಪಡಿಸಿ, ಇಬ್ಬರೂ ಬಹಳ ಪ್ರೀತಿಯಿಂದ ಬದುಕುತ್ತಿದ್ದರು. ಹಝ್ರತ್ ಹಫ್ಸಾ(ರ) ಅವರಿಗೆ ಓದಲು ಮತ್ತು ಬರೆಯಲು ತಿಳಿದಿತ್ತು. ಹಾಗಾಗಿ ಹದೀಸ್‌ನಲ್ಲಿ ಅವರು ಸಹಾಬಿ ಮಹಿಳೆಯಾದ ಶಫಾ ಬಿಂತ್ ಅಬ್ದುಲ್ಲಾ ರವರಿಂದ ಬರೆಯಲು ಕಲಿತರು ಎಂಬ ವರದಿ ಇದೆ, ಹಝ್ರತ್ ಹಫ್ಸ(ರ) ಸುಮಾರು 63ನೇ

ವಯಸ್ಸಿನಲಿ ಹಿಜರೀ 45ರಲ್ಲಿ ನಿಧನಗೊಂಡರು. (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಸಾಹಿಬ್ಜಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–480)

ನಂತರ, ಈ ಅವಧಿಯಲ್ಲಿ, ಹಝ್ರತ್ ಇಮಾಮ್ ಹಸನ್(ರ) ಅವರ ಜನ್ಮವೂ ಸಂಭವಿಸಿತು. ಹಝ್ರತ್ ಇಮಾಮ್ ಹಸನ್ ಬಿನ್ ಅಲಿ ಬಿನ್ ಅಬು ತಾಲಿಬ್(ರ) ರಂಜಾನ್ 3 ಹಿಜ್ರಿಯ ಅರ್ಧದಲ್ಲಿ ಜನಿಸಿದರು. ಅವರು ಶಾಬಾನ್ 3 ಹಿಜ್ರಿಯಲ್ಲಿ ಜನಿಸಿದರು ಎಂದು ಕೆಲವರು ಹೇಳುತ್ತಾರೆ. ಕೆಲವರು ಹೇಳುತ್ತಾರೆ ಉಹುದ್ ಯುದ್ಧದ ಒಂದು ವರ್ಷದ ನಂತರ ಜನಿಸಿದರು. ಮತ್ತು ಕೆಲವರು ಎರಡು ವರ್ಷಗಳ ನಂತರ ಜನಿಸಿದ್ದರು ಎಂದೂ ಹೇಳುತ್ತಾರೆ. ಅಲ್–ಬುಖಾರಿ ವ್ಯಾಖ್ಯಾನಕಾರ ಅಲ್ಲಾಮಾ ಇಬ್ನ್ ಹಜರ್ ಅಸ್ಕಲಾನಿ ಅವರು ಮೊದಲ ಅಭಿಪ್ರಾಯವು ಹೆಚ್ಚು ಸರಿಯಾದ ಮತ್ತು ದೃಢವಾಗಿದೆ ಎಂದು ಹೇಳುತ್ತಾರೆ. ಹಝ್ರತ್ ಅಲಿ(ರ) ಅವರಿಗೆ ಹರ್ಬ್ ಎಂದು ಹೆಸರಿಟ್ಟಿದ್ದರು, ಆದರೆ ಹಝ್ರತ್ ಪೈಗಂಬರ್(ಸ) ಅವರು ಅದನ್ನು ಹಸನ್ ಎಂದು ಬದಲಾಯಿಸಿದರು. ಅವರು ಹುಟ್ಟಿದ ಏಳನೆಯ ದಿನ ಅವರ ಅಖೀಖಾ ಮಾಡಿ ಅವರ ಕೂದಲನ್ನು ಬೋಳಿಸಿದರು ಮತ್ತು ಅವರ ಕೂದಲಿನ ತೂಕಕ್ಕೆ ಸಮನಾದ ಬೆಳ್ಳಿಯನ್ನು ಸದಖವಾಗಿ ನೀಡಬೇಕೆಂದು ಆದೇಶಿಸಿದರು. ಉಮ್ಮೆ ಫಝಲ್ ಒಮ್ಮೆ ಹೇಳಿದರು, ಯಾ ರಸೂಲಲ್ಲಾಹ್(ಸ)! ನಿಮ್ಮ ಒಂದು ಅಂಗವು ನನ್ನ ಮನೆಯಲ್ಲಿ ಅಥವಾ ನನ್ನ ಕೋಣೆಯಲ್ಲಿದೆ ಎಂದು ನಾನು ಕನಸಿನಲ್ಲಿ ನೋಡಿದ್ದೇನೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು ನೀವು ಒಳ್ಳೆಯ ಕನಸ್ಸನ್ನು ಕಂಡಿದ್ದೀರಿ. ಫಾತಿಮಾಗೆ ಒಂದು ಮಗು ಜನಿಸುತ್ತದೆ ಮತ್ತು ನೀವು ಅವನನ್ನು ನೋಡಿಕೊಳ್ಳುತ್ತೀರಿ ಮತ್ತು ನೀವು ಅದನ್ನು ಕುತ್ಸಾಮ್ನೊಂದಿಗೆ ಹಾಲುಣಿಸುತ್ತೀರಿ. ಉಮ್ಮೆ ಫಝಲ್ ಅವರು ಹಝ್ರತ್ ಪೈಗಂಬರ್(ಸ) ರ ಚಿಕ್ಕಪ್ಪ ಹಝ್ರತ್ ಅಬ್ಬಾಸ್(ರ) ಅವರ ಪತ್ನಿಯಾಗಿದ್ದರು ಮತ್ತು ಅವರ ಪುತ್ರನ ಹೆಸರು ಕುಸ್ಮಾನ್ ಎಂದಾಗಿತ್ತು. ಹೀಗೆ ಹಝ್ರತ್ ಇಮಾಮ್ ಹಸನ್(ರ) ಜನಿಸಿದರು ಮತ್ತು ಉಮ್ಮ್ ಫಝಲ್ ಅವರನ್ನು ಕುತ್ಸಾಮ್ನೊಂದಿಗೆ ಹಾಲುಣಿಸಿದರು.

ಹಝ್ರತ್ ಪೈಗಂಬರ್(ಸ) ಅವರ ಕೆಲವು ಮಾತುಗಳನ್ನು ನಿಮಗೆ ನೆನಪಿದ್ದರೆ ಅದನ್ನು ವಿವರಿಸಿ ಎಂದು ಹಝ್ರತ್ ಹಸನ್ ಬಿನ್ ಅಲಿ(ರ) ಅವರನ್ನು ಕೇಳಲಾಯಿತು. ಅದಕ್ಕೆ ಅವರು ಹೇಳಿದರು: ಹಝ್ರತ್ ಪೈಗಂಬರ್(ಸ) ಹೇಳಿದ ಮಾತು ನನಗೆ ನೆನಪಿದೆ. ಒಮ್ಮೆ ನಾನು ಸದಖದ ಖರ್ಜೂರವನ್ನು ತೆಗೆದುಕೊಂಡು ಅದನ್ನು ನನ್ನ ಬಾಯಿಗೆ ಹಾಕಿಕೊಂಡೆ, ನಂತರ ನನ್ನ ಲಾಲಾರಸವು ಅದರಲ್ಲಿ ಬೆರೆತಿರುವಾಗ ಹಝ್ರತ್ ಪೈಗಂಬರ್(ಸ) ಅವರು ಅದನ್ನು ನನ್ನ ಬಾಯಿಯಿಂದ ತೆಗೆದರು ಮತ್ತು ಅದನ್ನು ಸದಖದ ಖರ್ಜೂರರಲ್ಲಿ ಸೇರಿಸಿದರು. ಅದಕ್ಕೆ ಯಾರೋ ಹೇಳೀದರು ಯಾರಸೂಲಲ್ಲಾಹ್(ಸ) ಅದು ಒಂದೇ ಒಂದು ಖರ್ಝೂವಾಗಿತ್ತು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳೀದರು: ನಮಗೆ ಅಂದರೆ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಕುಟುಂಬಕ್ಕೆ ಸದಖ ಹಲಾಲ್ ಆಗಿಲ್ಲ (ಧರ್ಮಬದ್ಧವಾಗಿಲ್ಲ).

ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ ಹಝ್ರತ್ ಹಸನ್(ರ) ರವರಿಗಿಂತ ಸಮಾನರು ಯಾರೂ ಇರಲಿಲ್ಲ. ಹಝ್ರತ್ ಇಬ್ನೆ ಅಬ್ಬಾಸ್(ರ) ಹೇಳುತ್ತಾರೆ: ರಸೂಲುಲ್ಲಾಹ್(ಸ) ಅವರು ಹಝ್ರತ್ ಹಸನ್(ರ) ಅವರನ್ನು ಒಮ್ಮೆ ತಮ್ಮ ಭುಜದ ಮೇಲೆ ಹೊತ್ತುಕೊಂಡು ಹೋಗುತ್ತಿದ್ದರು, ಯಾರೋ ಹೇಳಿದರು, ಓ ಶ್ರೇಷ್ಠ ಮಗನೇ! ನೀವು ಎಂತಹ ಉತ್ತಮವಾದ ಸವಾರಿ ಮಾಡುತ್ತಿದ್ದೀರಿ. ಅದಕ್ಕೆ ನಬೀ ಕರೀಮ್(ಸ) ಹೇಳಿದರು ಅವರ ಸವಾರನೂ ಉತ್ತಮವಾಗಿದ್ದಾನೆ. ಅವರು ತಮ್ಮ ಮೊಮ್ಮಗನನ್ನು ತುಂಬಾ ಪ್ರೀತಿಸುತ್ತಿದ್ದರು.

ಹಝ್ರತ್ ಬರಾ(ರ) ವರದಿ ಮಾಡುತ್ತಾರೆ: ನಾನು ರಸೂಲುಲ್ಲಾಹ್(ಸ) ಅವರನ್ನು ಹಸನ್ ಬಿನ್ ಅಲೀ ಅವರನ್ನು ತಮ್ಮ ಭುಜದ ಮೇಲೆ ಹೊತ್ತುಕೊಂಡು ಓ ಅಲ್ಲಾಹನೇ! ನಾನು ಇವನನ್ನು ನನ್ನ ಸ್ನೇಹಿತನನ್ನಾಗಿ ಇರಿಸುತ್ತೇನೆ ಆದ್ದರಿಂದ ನೀನು ಸಹ ಇವನೊಂದಿಗೆ ಸ್ನೇಹಿತನಾಗಿಯೇ ಇರಿಸು ಎಂದು ಹೇಳುತ್ತಾ ಹೋಗುವುದನ್ನು ನೋಡಿದೆ. ಕೆಲವು ವರದಿಗಳಲ್ಲಿ ಹಝ್ರತ್ ಇಮಾಮ್ ಹಸನ್(ರ) ವಿಷದಿಂದ ನಿಧನರಾದರು ಎಂದು ಉಲ್ಲೇಖಿಸಲಾಗಿದೆ.

(ಅಲ್–ಅಸಬಾಹ್, ಸಂಪುಟ–1, ಪುಟ–492, ಅಲ್–ಹಸನ್ ಬಿನ್ ಅಲಿ, ದಾರ್ ಅಲ್–ಫಿಕ್ರ್, ಬೈರುತ್ 2001)

ಆದಾಗ್ಯೂ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ಹಝ್ರತ್ ಇಮಾಮ್ ಹಸನ್(ರ) ರವರ ಜನ್ಮವನ್ನು ಉಲ್ಲೇಖಿಸುವಾಗ ಹೇಳುತ್ತಾರೆ: "ಹಿಜರೀ 2ರ ಘಟನೆಗಳಲ್ಲಿ ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮ(ರ)ರ ನಿಕಾಹಿನ ಬಗ್ಗೆ ಮುಂಚೆ ಪ್ರಸ್ತಾಪಿಸಲಾಗಿದೆ. ಅವರಿಗೆ ಹಿಜರೀ 3ರಲ್ಲಿ ಎಂದರೆ, ನಿಕಾಹಿನ ಹತ್ತು ತಿಂಗಳ ನಂತರ ಮಗು ಹುಟ್ಟಿತು. ಮಗುವಿಗೆ ಹಝ್ರತ್ ಪೈಗಂಬರ್(ಸ) ಹಸನ್ ಎಂದು ಹೆಸರಿಸಿದರು. ಇದೇ ಹಸನ್ ನಂತರ ಮುಸ್ಲಿಮರಲ್ಲಿ ಇಮಾಮ್ ಹಸನ್(ಅ) ಎಂದು ಬಿರುದು ಪಡೆದರು. ಹಸನ್(ರ) ಅವರ ನೋಟ ಮತ್ತು ನೋಟದಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ಹೋಲುತ್ತಿದ್ದರು ಮತ್ತು ರಸೂಲುಲ್ಲಾಹ್(ಸ) ಅವರು ತಮ್ಮ ಮಕ್ಕಳನ್ನು ಹಝ್ರತ್ ಫಾತಿಮಾ ಅವರನ್ನು ಹೇಗೆ ಪ್ರೀತಿಸುತ್ತಿದ್ದರೋ, ಅದೇ ರೀತಿಯಲ್ಲಿ ಅವರು ಹಝ್ರತ್ ಫಾತಿಮಾ(ರ) ಅವರ ಮಕ್ಕಳ ಬಗ್ಗೆ ವಿಶೇಷ ಪ್ರೀತಿಯನ್ನು ಹೊಂದಿದ್ದರು. ಹಲವು ಬಾರಿ ಹೀಗೆ ಹೇಳುತ್ತಿದ್ದರು ಓ ದೇವನೇ! ನಾನು ಈ ಮಕ್ಕಳನ್ನು ಪ್ರೀತಿಸುತ್ತೇನೆ, ನೀನು ಸಹ ಅವರನ್ನು ಪ್ರೀತಿಸು ಮತ್ತು ಅವರನ್ನು ಪ್ರೀತಿಸುವವರನ್ನು ಪ್ರೀತಿಸು.

ಹಝ್ರತ್ ಪೈಗಂಬರ್(ಸ)ರವರು ನಮಾಝ್ ನಿರ್ವಹಿಸುತ್ತಿರುವಾಗ ಹಸನ್(ರ) ನಿಮ್ಮನ್ನು(ಸ) ಅಪ್ಪಿಕೊಳ್ಳುತ್ತಿದ್ದರು. ನೀವು ರುಕೂವಿನಲ್ಲಿದ್ದಾಗ ನಿಮ್ಮ ಎರಡು ಕಾಲುಗಳ ಮಧ್ಯದಿಂದ ದಾರಿ ಮಾಡಿಕೊಂಡು ಓಡುತ್ತಿದ್ದರು. ಕೆಲವೊಮ್ಮೆ, ಸಹಚರರು ಅವರನ್ನು ತಡೆದಾಗ, ಅವರು(ಸ) ಸಹಚರರನ್ನು ತಡೆಯುವುದನ್ನು ನಿಷೇಧಿಸುತ್ತಿದ್ದರು. ವಾಸ್ತವವಾಗಿ, ಅವರ ಅಪ್ಪುಗೆಯು ಅವರ ಗಮನವನ್ನು ಬೇರೆಡೆಗೆ ತಿರುಗಿಸದ ಕಾರಣ, ಮುಗ್ಧ ಪ್ರೀತಿಯ ಅವರ ಬಾಲಿಶ ಪ್ರದರ್ಶನವನ್ನು ವಿರೋಧಿಸಲು ಅವರು ಬಯಸಲಿಲ್ಲ. ಇಮಾಮ್ ಹಸನ್ ಬಗ್ಗೆ, ಅವರು(ಸ) ಒಮ್ಮೆ ಹೇಳಿದರು: ನನ್ನ ಈ ಮಗು ಸಯ್ಯದ್ ಆಗಿರುವರು; ಎಂದರೆ ಸರದಾರರಾಗಿರುವರು ಎಂದು. ಒಂದು ಕಾಲ ಬರುವುದು, ಆಗ ಮುಸ್ಲಿಮರ ಎರಡು ಗುಂಪುಗಳ ನಡುವೆ ಅಲ್ಲಾಹನು ಇವರ ಮೂಲಕ ಮೈತ್ರಿ ಉಂಟುಮಾಡುವನು. ಹೀಗೆ ಸರಿಯಾದ ಸಮಯದಲ್ಲಿ ಆ ಭವಿಷ್ಯವಾಣಿ ಈಡೇರಿತು.

(ಸೀರತ್ ಖಾತಮನ್ನಬೀಈನ್, ಹಝ್ರತ್ ಸಾಹಿಬ್ಜಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–480–481)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಹಝ್ರತ್ ಹಸನ್(ರ), ನನ್ನ ಅಭಿಪ್ರಾಯದಲ್ಲಿ, ಅವರು ಖಿಲಾಫತ್ನಿಂದ ಬೇರ್ಪಟ್ಟು ಬಹಳ ಉತ್ತಮ ನಿರ್ಣಯವನ್ನು ಕೈಗೊಂಡಿರುವರು. ಏಕೆಂದರೆ ಈಗಾಗಲೇ ಸಾವಿರಾರು ಕೊಲೆಗಳಾಗಿದ್ದವು. ಇನ್ನು ಕೊಲೆಯಾಗುವುದು ಅವರಿಗೆ ಇಷ್ಟವಾಗಲಿಲ್ಲ. ಅದಕ್ಕಾಗಿಯೇ ಅವರು ಮುಆವಿಯಾದಿಂದ ಜೀವನೋಪಾಯವನ್ನು ಪಡೆದುಕೊಂಡರು. ಹಝ್ರತ್ ಹಸನ್(ರ) ಅವರ ಈ ಕ್ರಮ" ಅಂದರೆ ಒಪ್ಪಂದ ಮಾಡಿಕೊಳ್ಳುವುದು "ಶಿಯಾ ವಿರುದ್ಧವಾಗಿರುವುದರಿಂದ, ಇಮಾಮ್ ಹಸನ್(ರ) ಅವರಿಂದ ಸಂಪೂರ್ಣವಾಗಿ ತೃಪ್ತರಾಗಲಿಲ್ಲ. ನಾವು ಅವರಿಬ್ಬರಿಗೂ ಆಭಾರಿಯಾಗಿದ್ದೇವೆ." ಅಂದರೆ ಹಝ್ರತ್ ಇಮಾಮ್ ಹಸನ್(ರ) ಮತ್ತು ಇಮಾಮ್ ಹುಸೈನ್(ರ) ಅವರನ್ನು. "ವಾಸ್ತವವೇನೆಂದರೆ ಪ್ರತಿಯೊಬ್ಬ ವ್ಯಕ್ತಿಯು ವಿಭಿನ್ನ ಸಾಮರ್ಥ್ಯಗಳನ್ನು ಹೊಂದಿದ್ದರು. ಹಝ್ರತ್ ಇಮಾಮ್ ಹುಸ್ಸೈನ್(ರ) ರವರಿಗೆ ಮುಸ್ಲಿಮರ ನಡುವೆ ಅಂತರ್ಯುದ್ಧ ಮತ್ತು ರಕ್ತಪಾತ ನಡೆಯುವುದು ಇಷ್ಟವಿರಲಿಲ್ಲ. ಅವರು ಶಾಂತಿಯನ್ನು ಪರಿಗಣಿಸಿದರು ಮತ್ತು ಹಝ್ರತ್ ಇಮಾಮ್ ಹುಸೇನ್(ರ) ಅವರು ನಾನು ಒಬ್ಬ ದುಷ್ಟನ ಕೈಮೇಲೆ ಬೈಅತ್ ಮಾಡುವುದನ್ನು ಇಷ್ಟಪಡಲಿಲ್ಲ ಏಕೆಂದರೆ ಅದು ಧರ್ಮದಲ್ಲಿ ಭ್ರಷ್ಟಾಚಾರವನ್ನು ಉಂಟುಮಾಡುತ್ತದೆ. ಆದರೆ ಅವರಿಬ್ಬರ ಉದ್ದೇಶವು ಒಳ್ಳೆಯದಾಗಿತ್ತು. **ಇನ್ನಮಲ್ ಅಅ್ಮಾಲು ಬಿನ್ನಿಯಾತ್**. (ಮಲ್ಫೂಝಾತ್, ಸಂಪುಟ–8, ಪುಟ–278–279, 1984 ಆವೃತಿ) ಇದು ಈ ಮಕ್ಕಳ ಕಥೆಯಾಗಿತ್ತು.

ನಾನು ಅನೇಕ ಖುತ್ಬಗಳಲ್ಲಿ ಪೆಲಸ್ತೀನಿಯರಿಗಾಗಿ ದುಆ ಮಾಡಲು ಹೇಳುತ್ತಿದ್ದೇನೆ. ಇಂದು ಕೂಡ ಅದರದೇ ಬಗ್ಗೆ ಹೇಳಲು ಬಯಸುತ್ತೇನೆ. ದುಆಗಳನ್ನು ಮುಂದುವರೆಸಿರಿ. ಈಗಂತು ದೌರ್ಜನ್ಯ ಮಿತಿಯನ್ನು ಮೀರುತ್ತಿದೆ. ಹಮಾಸಿನೊಂದಿಗೆ ಯುದ್ಧದ ಹೆಸರಲ್ಲಿ ಮುಗ್ಧ ಮಕ್ಕಳನ್ನು, ಮಹಿಳೆಯರನ್ನು, ವೃದ್ಧರನ್ನು ಮತ್ತು ರೋಗಿಗಳನ್ನು ಕೊಲ್ಲಲಾಗುತ್ತಿದೆ. ಯುದ್ಧದ ಎಲ್ಲ ವಿಧ ಮಾನದಂಡಗಳನ್ನು ಮತ್ತು ನಿಬಂಧನೆಗಳನ್ನು ಈ ನಾಮಧಾರಿ ನಾಗರಿಕ ಮತ್ತು ಸುಸಂಸ್ಕೃತ ಲೋಕವು ಕಡೆಗಣಿಸಿದೆ. ಅಲ್ಲಾಹನು ಮುಸ್ಲಿಂ ದೇಶಗಳಿಗೂ ವಿವೇಕವನ್ನು ನೀಡಲಿ. ಮುಸ್ಲಿಮರು ಒಂದಾಗಬೇಕೆಂದು 72, 73 ವರ್ಷಗಳ ಹಿಂದೆ ಹಝ್ರತ್ ಮುಸ್ಲಿಹ್ ಮೌಊದ್(ರ) ಎಚ್ಚರಿಸಿದ್ದರು. ಒಗ್ಗಟ್ಟಾಗಿ ಇರದೇ ಇದ್ದು ಒಂದೊಂದಾಗಿ ನಾಶವಾಗಬೇಕೇ ಅಥವಾ ಒಂದು ಅಸ್ತಿತ್ವವಾಗಿ ಇದ್ದು ಬಾಕಿಯುಳಿಯಬೇಕೇ ಎಂಬುದಾಗಿ ಸ್ವತಃ ತೀರ್ಮಾನಿಸಿರಿ ಎಂದು ಅವರು ಹೇಳಿದ್ದರು.

ಈಗಲಾದರೂ ಈ ಜನರು ಈ ಮಾತನ್ನು ಮನವರಿಕೆ ಮಾಡಿದ್ದರೆ ಎಷ್ಟು ಚೆನ್ನ!

ಸ್ಥಿತಿ ಎಂತಹದ್ದು ಆಗಿದೆ ಎಂದರೆ, ಪೆಲಸ್ತೀನ್ ಅಥವಾ ಇಸ್ರೇಲಿನ ಯುದ್ಧದ ಬಗ್ಗೆ ಯಾವುದೇ ಮಾತನ್ನು ಹೇಳಬಾರದು ಎಂದು ಉಮ್ರಾಗೆ ಹೋಗುವವರೊಡನೆ ಹೇಳಲಾಗುತ್ತಿದೆ ಎಂದು ನನ್ನೊಡನೆ ಒಬ್ಬರು ಹೇಳಿದ್ದರು. ವೀಸಾ ನೀಡುವಾಗ ಅಲ್ಲಿನ ಸರ್ಕಾರ ಈ ನಿರ್ದೇಶನವನ್ನು ನೀಡುತ್ತಿದೆ. ಈ ಮಾಹಿತಿ ಸರಿ ಎಂದಾದರೆ, ಇದು ಮುಸ್ಲಿಂ ಸರ್ಕಾರದ ಕಡೆಯಿಂದ ಅತ್ಯಂತ ಭೀರುತ್ವವಾಗಿದೆ. ಹೇಗಿದ್ದರೂ ಉಮ್ರಾದ ಆರಾಧನೆಯ ಹಕ್ಕನ್ನು ಈಡೇರಿಸಬೇಕು. ಆ ವೇಳೆ ಹೇಗಿದ್ದರೂ ಇಂತಹ ಯಾವುದೇ ವಿಧದ ಮಾತುಗಳು ಇರಬಾರದು. ಆದರೆ ಪೀಡಿತ ಪೆಲಸ್ತೀನಿಯರಿಗಾಗಿ ಅಲ್ಲಿ ಖಂಡಿತವಾಗಿಯೂ ದುಆ ಮಾಡಬೇಕು. ಅಲ್ಲಿಗೆ ಹೋಗುವವರು ಈ ದುಆಗಳನ್ನು ನೆನಪಿಟ್ಟುಕೊಳ್ಳುವುದಾದರೆ ಚೆನ್ನಾಗಿತ್ತು.

ಇತ್ತೀಚೆಗೆ ಮುಸ್ಲಿಂ ಸರ್ಕಾರಗಳು ಕೂಡ ಬಹಳ ದುರ್ಬಲವಾದ ಶಬ್ದವನ್ನು ಎತ್ತುತ್ತಿದೆ. ಕೆಲವು ಶಬ್ದಗಳು ಎದ್ದಿವೆ. ಅದಕ್ಕಿಂತ ಹೆಚ್ಚು ಶಕ್ತವಾದ ಶಬ್ದವನ್ನು ಕೆಲವು ಮುಸ್ಲಿಮೇತರ ಜನರು, ರಾಜಕರಣಿಗಳು ಮತ್ತು ಸರ್ಕಾರಗಳು ಎತ್ತಿವೆ. ಅಲ್ಲಾಹನು ಮುಸ್ಲಿಮರಲ್ಲೂ ಧೈರ್ಯ ಮತ್ತು ವಿವೇಕವನ್ನು ಉಂಟುಮಾಡಲಿ.

ವಿಶ್ವಸಂಸ್ಥೆಯ ಸೆಕ್ರಟರಿ ಜನರಲ್ ಕೂಡ ಉತ್ತಮವಾಗಿ ಹೇಳುತ್ತಿದ್ದಾರೆ. ಇತ್ತೀಚಿಗೆ ಅವರು ಬಹಳ ಉತ್ತಮವಾಗಿ ಮಾತನಾಡುತ್ತಿದ್ದಾರೆ. ಆದರೆ ಅವರ ಮಾತಿಗೆ ಯಾವುದೇ ಬೆಲೆಯಿಲ್ಲ ಎಂದು ತೋರುತ್ತಿದೆ.

ಈ ಯುದ್ಧ ಇನ್ನಷ್ಟು ಹರಡಿದರೆ ಮತ್ತು ಜಾಗತಿಕ ಯುದ್ಧದ ಅವಸ್ಥೆ ಉಂಟಾದರೆ, ಯುದ್ಧ ಕೊನೆಗೊಳ್ಳುವುದರೊಂದಿಗೆ ವಿಶ್ವಸಂಸ್ಥೆ ಕೂಡ ಇಲ್ಲವಾಗುವುದು ಎಂದು ತೋರುತ್ತಿದೆ. ಅಲ್ಲಾಹನು ಲೋಕಕ್ಕೆ ಬುದ್ಧಿ ನೀಡಲಿ. ಈಗ ಲೋಕವು ತನ್ನ ನಾಶವನ್ನು ಬಹಳ ಸಮೀಪಕ್ಕೆ ತಂದಿದೆ ಎಂದು ತೋರುತ್ತಿದೆ. ಈ ನಾಶದ ನಂತರ ಬಾಕಿಯುಳಿಯುವ ಜನರಿಗೆ ಅಲ್ಲಾಹನು ವಿವೇಕವನ್ನು ನೀಡಲಿ. ಅವರು ಅಲ್ಲಾಹನ ಕಡೆಗೆ ಗಮನಿಸುವವರಾಗಲಿ ಮತ್ತು ಅವನ ಕಡೆಗೆ ಮರಳುವವರಾಗಲಿ. ಹೇಗಿದ್ದರೂ ನಾವು ಈ ಸಂಬಂಧವಾಗಿ ಬಹಳ ದುಆಗಳನ್ನು ಮಾಡಬೇಕಾಗಿದೆ. ಅಲ್ಲಾಹನು ಲೋಕದ ಮೇಲೆ ಕೃಪೆದೋರಲಿ. (ಆಮೀನ್).

...*...*...*...

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

# ಖುತ್‌ಬ ಜುಮುಅ

ಹಝ್ರತ್ ಮಸೀಹ್ ಮೌಊದ್(ಅ) ತನ್ನ ಲಿಖಿತಗಳಲ್ಲಿ ಮತ್ತು ಉಪದೇಶಗಳಲ್ಲಿ ಅನೇಕ ಎಡೆಗಳಲ್ಲಿ ತನ್ನ ಆಗಮನದ ಉದ್ದೇಶ ಮತ್ತು ಈ ಕಾಲಘಟ್ಟದಲ್ಲಿ ಯಾರಾದರೂ ಸುಧಾರಕರಾಗಿ ಆಗಮಿಸಬೇಕಾದ ಆವಶ್ಯಕತೆಯನ್ನು ವಿವರಿಸಿರುವರು.

ನಿಜವೇನೆಂದರೆ, ಒಬ್ಬ ವ್ಯಕ್ತಿಯ ಪ್ರವಾದಿತ್ವ ವಾದವನ್ನು ಪರೀಕ್ಷಿಸಲು ಮೊತ್ತ ಮೊದಲಾಗಿ ಕಾಲಘಟ್ಟದ ಆವಶ್ಯತೆಯನ್ನು ನೋಡಲಾಗುತ್ತದೆ. ಅನಂತರ ವಾದಿಸುವ ವ್ಯಕ್ತಿ ನಿಶ್ಚಿತ ಸಮಯದಲ್ಲಿ ಆಗಮಿಸಿರುವರೋ ಇಲ್ಲವೋ ಎಂಬುದನ್ನೂ ನೋಡಲಾಗುತ್ತದೆ. ಅನಂತರ ಅಲ್ಲಾಹನು ಆ ವ್ಯಕ್ತಿಗೆ ನೆರವು ನೀಡಿರುವನೋ ಇಲ್ಲವೋ ಎಂಬುದನ್ನೂ ನೋಡಲಾಗುತ್ತದೆ. ಅನಂತರ ಶತ್ರುಗಳು ಎತ್ತಿರುವ ಆಕ್ಷೇಪಗಳಿಗೆ ಸರಿಯಾಗಿ ಉತ್ತರ ನೀಡಲಾಗಿದೆಯೋ ಇಲ್ಲವೋ ಎಂಬುದನ್ನು ಕೂಡ ನೋಡಬೇಕಾಗುತ್ತದೆ.

ಎದುರಾಳಿಗಳ ವಿರೋಧ ಇದ್ದೂ ಜಮಾಅತಿನ ಸದಸ್ಯರ ವಿಶ್ವಾಸವನ್ನು ಅಲ್ಲಾಹನು ಸುದೃಢಗೊಳಿಸಿದನು ಮತ್ತು ಸುದೃಢಗೊಳಿಸುತ್ತಾ ಇದ್ದಾನೆ. ಇಂದು ಸಹ ನಾವು ನೋಡುತ್ತಿರುವ ದೈವಿಕ ಸಹಾಯಗಳ ದೃಶ್ಯಗಳು ಒಬ್ಬ ಅಹ್ಮದಿಯ ವಿಶ್ವಾಸವನ್ನು ಸುದೃಢಗೊಳಿಸುವ ಮಾರ್ಗವಾಗಿವೆ.

ಕ್ರೈಸ್ತರು ಲೋಕದಲ್ಲಿ ತಮ್ಮ ಬಾವುಟಗಳನ್ನು ಹಾರಿಸುವ ಮಾತುಗಳನ್ನಾಡುತ್ತಿದ್ದ ಒಂದು ಕಾಲವಿತ್ತು. ಈಗ ಕ್ರೈಸ್ತರು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತಾಕೆಯ ಕೆಳಗೆ ಬರುತ್ತಿದ್ದಾರೆ. ಇವೆಲ್ಲವನ್ನು ನೋಡಿಯೂ ಈ ನಾಮಧಾರಿ ಧರ್ಮರಕ್ಷಕರ ಕಣ್ಣುಗಳು ತೆರೆಯುತ್ತಿಲ್ಲವೆಂದಾದರೆ ಅವರ ವಿಷಯ ಅಲ್ಲಾಹನಿಗೆ ಬಿಟ್ಟಿದೆ.

ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರ ಮೂಲಕ ಇಸ್ಲಾಮಿನ ಸಂದೇಶವನ್ನು ಲೋಕದ ಮೂಲೆ ಮೂಲೆಗೆ ತಲುಪಿಸುವ ಕೆಲಸವನ್ನು ಅಹ್ಮದಿಯಾ ಜಮಾಅತಿನ ಮೂಲಕ ಮಾಡುತ್ತಿದ್ದಾನೆ. ಅದು ಹರಡುವುದು, ಫಲ ನೀಡುವುದು ಮತ್ತು ಹೂ ಬಿಡುವುದು – ಇನ್‌ಶಾ ಅಲ್ಲಾಹ್. ಈ ದೈವಿಕ ಕೆಲಸವನ್ನು ತಡೆಯಲು ಯಾರಿಂದಲೂ ಸಾಧ್ಯವಲ್ಲ. ಆದರೆ ಹಝ್ರತ್ ಮಸೀಹ್ ಮೌಊದ್(ಅ)ರ ವಾದಗಳನ್ನು ನಂಬುವುದು ಮಾತ್ರ ಸಾಕಾಗುವುದಿಲ್ಲ ಎಂಬ ಸಂಗತಿಯನ್ನು ಪ್ರತಿಯೊಬ್ಬ ಅಹ್ಮದಿ ಅರಿತಿರಬೇಕು. ಬದಲಾಗಿ ನಾವು ನಮ್ಮೊಳಗೆ ಪರಿಶುದ್ಧವಾದ ಪರಿವರ್ತನೆಗಳನ್ನು ಉಂಟುಮಾಡಬೇಕಾಗಿದೆ.

ಐದು ದಿವಂಗತರಾದ ಮಾನ್ಯ ಅಬ್ದುಸ್ಸಲಾಮ್ ಸಾಹಿಬ್, ಮಾನ್ಯ ಮುಹಮ್ಮದ್ ಖಾಸಿಮ್ ಸಾಹಿಬ್, ಮಾನ್ಯ ಅಬ್ದುಲ್ ಕೀಮ್ ಖುದ್ಸಿ ಸಾಹಿಬ್, ಮಾನ್ಯ ಮಿಯಾಂ ರಫೀಖ್ ಅಹ್ಮದ್ ಸಾಹಿಬ್ ಗೊಂಡಾಲ್ ಮತ್ತು ಮಾನ್ಯ ನಸೀಮಾ ಲಈಖ್ ಸಾಹಿಬಾರವರ ಸದ್ಗುಣಗಳ ಪ್ರಸ್ತಾವನೆ ಹಾಗು ನಮಾಝೆ ಜನಾಝ ಗ್ಹಾಯಿಬ್ ನಿರ್ವಹಣೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **24–11–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಮಸೀಹ್ ಮೌಊದ್(ಅ) ತನ್ನ ಲಿಖಿತಗಳಲ್ಲಿ ಮತ್ತು ಉಪದೇಶಗಳಲ್ಲಿ ಅನೇಕ ಎಡೆಗಳಲ್ಲಿ ತನ್ನ ಆಗಮನದ ಉದ್ದೇಶ ಮತ್ತು ಈ ಕಾಲಘಟ್ಟದಲ್ಲಿ ಯಾರಾದರೂ ಸುಧಾರಕರಾಗಿ ಆಗಮಿಸಬೇಕಾದ ಆವಶ್ಯಕತೆಯನ್ನು ವಿವರಿಸಿರುವರು.

ಅವರ ಆಗಮನವು ಕಾಲಘಟ್ಟದ ಆವಶ್ಯಕತೆಯಾಗಿತ್ತು ಹಾಗೂ ಅಲ್ಲಾಹನ ನಡವಳಿಕೆ ಕ್ರಮ ಮತ್ತು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಯ ಪ್ರಕಾರವಾಗಿತ್ತು ಎಂದು ಅವರು ಸಾಬೀತುಗೊಳಿಸಿರುವರು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಿರ್ಣಾಯಕ ಪುರಾವೆ ಎಂಬ ರೀತಿಯಲ್ಲಿ ಅಥವಾ ಕಾರ್ಯವನ್ನು ಸ್ಪಷ್ಟಪಡಿಸಲಿಕ್ಕಾಗಿ ನಾನು ಇದನ್ನು ತಿಳಿಸುತ್ತೇನೆ. ಅಲ್ಲಾಹನು ಈ ಕಾಲಘಟ್ಟವನ್ನು ಅಂಧಕಾರಮಯವಾಗಿ ಮತ್ತು ಲೋಕವನ್ನು ಅಸಡ್ಡೆ, ಸತ್ಯನಿಷೇಧ, ಬಹುದೇವಾರಾಧನೆಯಲ್ಲಿ ಮುಳುಗಿದ್ದಾಗಿ ಹಾಗೂ ಸತ್ಯವಿಶ್ವಾಸ, ಸತ್ಯಸಂಧತೆ, ದೇವಭಕ್ತಿ ಮತ್ತು ನೇರಮಾರ್ಗ ಮಾಯವಾಗುತ್ತಿರುವುದಾಗಿ ಕಂಡು ಪುನಃ ಲೋಕದಲ್ಲಿ ಜ್ಞಾನಪರ, ಕರ್ಮಪರ, ನೈತಿಕತೆ ಮತ್ತು ವಿಶ್ವಾಸಪರವಾದ ಸತ್ಯತೆಯನ್ನು ನೆಲೆನಿಲ್ಲಿಸಲಿಕ್ಕಾಗಿ ಹಾಗೂ ವಿಚಾರವಾದ, ನಿಸರ್ಗವಾದ, ಪ್ರಗತಿವಾದ, ಬಹುದೇವಾರಾಧನೆ ಹಾಗೂ ನಾಸ್ತಿಕತೆಯ ಅಂಗಿಯನ್ನು ಧರಿಸಿಕೊಂಡು ದೈವಿಕ ತೋಟಕ್ಕೆ ಸ್ವಲ್ಪ ನಷ್ಟವನ್ನು ತಲುಪಿಸಲು ಬಯಸುವ ಜನರ ದಾಳಿಯಿಂದ ಇಸ್ಲಾಮನ್ನು ರಕ್ಷಿಸಲಿಕ್ಕಾಗಿ ನನ್ನನ್ನು ಕಳುಹಿಸಿದನು. ಆದ್ದರಿಂದ ಹೇ ಸತ್ಯಾನ್ವೇಷಿಗಳೇ, ಯೋಚಿಸಿ ನೋಡಿರಿ; ಇದು ಇಸ್ಲಾಮಿಗಾಗಿ ದೈವಿಕ ಸಹಾಯದ ಆವಶ್ಯಕತೆ ಇರುವ ಕಾಲವಲ್ಲವೇ? ಕಳೆದ ಹದಿಮೂರನೇ ಶತಮಾನದಲ್ಲಿ ಇಸ್ಲಾಮಿಗೆ ತಲುಪಿದ ಕಷ್ಟತೆಗಳು ಮತ್ತು ದುನರ್ಡತೆಯ ಹರಡುವಿಕೆಯಿಂದ ಎಂತಹ ಅಸಹನೀಯವಾದ ನೋವು ಮುಸ್ಲಿಮರಿಗೆ  ಅನುಭವಿಸಬೇಕಾಗಿ ಬಂತು ಎಂಬುದು ಇಲ್ಲಿಯ ವರೆಗೆ ನಿಮಗೆ ತಿಳಿದಿಲ್ಲವೇ? ಯಾವ ಯಾವ ಆಪತ್ತುಗಳಲ್ಲಿ ಇಸ್ಲಾಂ ಸುತ್ತುವರಿಯಲ್ಪಟ್ಟಿದೆ ಎಂದು ನೀವು ಇಲ್ಲಿಯ ತನಕ ಗೊತ್ತು ಮಾಡಿಲ್ಲವೇ? ಎಷ್ಟೆಲ್ಲ ಜನರು ಇಸ್ಲಾಮನ್ನು ತ್ಯಜಿಸಿ ಕ್ರೈಸ್ತರಾಗಿರುವರು, ನಾಸ್ತಿಕರಾಗಿರುವರು, ಪ್ರಕೃತವಾದಿಗಳಾಗಿರುವರು ಎಂದೂ ಎಷ್ಟರ ಮಟ್ಟಿಗೆ ಬಹುದೇವಾರಾಧನೆ ಮತ್ತು ನವೀನಾಚಾರಗಳು ಏಕದೇವ ವಿಶ್ವಾಸದ ಹಾಗೂ ಸುನ್ನತಿನ ಜಾಗವನ್ನು ಆವರಿಸಿವೆ ಎಂದೂ ಇಸ್ಲಾಮಿನ ಎದುರಾಗಿ ಎಷ್ಟೆಲ್ಲ ಪುಸ್ತಕಗಳು ಬರೆಯಲಾಗಿವೆ ಹಾಗು ಲೋಕದಲ್ಲಿ ಹರಡಲಾಗಿವೆ ಎಂಬ ಸುದ್ದಿ ನಿಮಗೆ ಇಲ್ಲಿಯ ವರೆಗೂ ತಲುಪಿಲ್ಲವೇ? ಆದ್ದರಿಂದ ನೀವು ಯೋಚಿಸಿ ಹೇಳಿರಿ, ಹೊರಗಿನಿಂದ ಬರುವ ದಾಳಿಗಳನ್ನು ಎದುರಿಸಲಿಕ್ಕಾಗಿ ಅಲ್ಲಾಹನ ಕಡೆಯಿಂದ ಈ ಕಾಲಘಟ್ಟದಲ್ಲಿ ಒಬ್ಬ ವ್ಯಕ್ತಿಯನ್ನು ಕಳುಹಿಸಬೇಕಾದದ್ದು ಈಗ ಅಗತ್ಯವಲ್ಲವೇ? ಖಂಡಿತವಾಗಿಯೂ ಅಗತ್ಯವಾಗಿತ್ತು ಎಂದಾದರೆ ನೀವು ತಿಳಿದುಕೊಂಡೇ ದೈವಿಕ ಅನುಗ್ರಹವನ್ನು ನಿರಾಕರಿಸಬೇಡಿರಿ. ಈ ಕಾಲಘಟ್ಟದಲ್ಲಿ ಈ ಕಾಲಘಟ್ಟದ ಸ್ಥಿತಿ ಅನುಸಾರ ಅಗತ್ಯವಾಗಿದ್ದ ಮತ್ತು ಯಾರ ಬಗ್ಗೆ ಆರಂಭದಿಂದಲೇ ಹಝ್ರತ್ ಪೈಗಂಬರ್(ಸ) ಸುವಾರ್ತೆ ನೀಡಿದ್ದರೋ ಆ ವ್ಯಕ್ತಿಯಿಂದ ಮುಖ ತಿರುಗಿಸಬೇಡಿರಿ."

(ಆಯಿನಾ ಕಮಾಲಾತೆ ಇಸ್ಲಾಮ್, ರೂಹಾನಿ ಖಝಾಈನ್, ಸಂಪುಟ–5, ಪುಟ–251–253)

ಒಬ್ಬ ವ್ಯಕ್ತಿಯ ಸತ್ಯತೆಯನ್ನು ಯಾವ ರೀತಿಯಲ್ಲಿ ಪರೀಕ್ಷಿಸಬೇಕು ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಒಬ್ಬ ವ್ಯಕ್ತಿ ಸತ್ಯವಂತನು ಎಂಬುದಕ್ಕೆ ಆ ವ್ಯಕ್ತಿಯ ಬಗ್ಗೆ ಯಾವುದಾದರೂ ದೈವಿಕ ಗ್ರಂಥದಲ್ಲಿ ಸ್ಪಷ್ಟವಾದ ಸುವಾರ್ತೆ ಇರಲೇ ಬೇಕು ಎಂದೇನಿಲ್ಲ. ಈ ನಿಬಂಧನೆ ಅಗತ್ಯ ಎಂದಾಗಿದ್ದರೆ ಯಾವುದೇ ಪ್ರವಾದಿಯ ಪ್ರವಾದಿತ್ವ ಸಾಬೀತುಗೊಳ್ಳದು.

ನಿಜವೇನೆಂದರೆ, ಒಬ್ಬ ವ್ಯಕ್ತಿಯ ಪ್ರವಾದಿತ್ವ ವಾದವನ್ನು ಪರೀಕ್ಷಿಸಲು ಮೊತ್ತ ಮೊದಲಾಗಿ ಕಾಲಘಟ್ಟದ ಆವಶ್ಯತೆಯನ್ನು ನೋಡಲಾಗುತ್ತದೆ. ಅನಂತರ ವಾದಿಸುವ ವ್ಯಕ್ತಿ ನಿಶ್ಚಿತ ಸಮಯದಲ್ಲಿ ಆಗಮಿಸಿರುವರೋ ಇಲ್ಲವೋ ಎಂಬುದನ್ನೂ ನೋಡಲಾಗುತ್ತದೆ. ಅನಂತರ ಅಲ್ಲಾಹನು ಆ ವ್ಯಕ್ತಿಗೆ ನೆರವು ನೀಡಿರುವನೋ ಇಲ್ಲವೋ ಎಂಬುದನ್ನೂ ನೋಡಲಾಗುತ್ತದೆ. ಅನಂತರ ಶತ್ರುಗಳು ಎತ್ತಿರುವ ಆಕ್ಷೇಪಗಳಿಗೆ ಸರಿಯಾಗಿ ಉತ್ತರ ನೀಡಲಾಗಿದೆಯೋ ಇಲ್ಲವೋ ಎಂಬುದನ್ನು ಕೂಡ ನೋಡಬೇಕಾಗುತ್ತದೆ.

ಈ ಎಲ್ಲ ಸಂಗತಿಗಳು ಈಡೇರಿದರೆ ಆ ವ್ಯಕ್ತಿ ಸತ್ಯವಂತನೆಂದು ನಂಬಲಾಗುವುದು. ಇಲ್ಲದಿದ್ದರೆ ಒಪ್ಪಲು ಸಾಧ್ಯವಲ್ಲ. ಈ ಕಾಲದಲ್ಲಿ ಇಸ್ಲಾಮಿನಲ್ಲಿರುವ ಭಿನ್ನತೆಯನ್ನು ದೂರಮಾಡಲಿಕ್ಕಾಗಿ ಮತ್ತು ಹೊರಗಿನ ದಾಳಿಗಳಿಂದ ಇಸ್ಲಾಮನ್ನು ರಕ್ಷಿಸಲಿಕ್ಕಾಗಿ ಹಾಗೂ ಲೋಕದಿಂದ ಕಾಣೆಯಾದ ಆಧ್ಯಾತ್ಮಿಕತೆಯನ್ನು ಪುನಃ ಸ್ಥಾಪಿಸಲಿಕ್ಕಾಗಿ ನಿಸ್ಸಂಶಯವಾಗಿಯೂ ದೃಢನಂಬಿಕೆಯನ್ನು ಪುನಃ ನೀಡಿ ಸತ್ಯವಿಶ್ವಾಸದ ಬೇರುಗಳಿಗೆ ನೀರು ಹಾಕಿಕೊಂಡು ಕೆಡುಕು ಮತ್ತು ಪಾಪದಿಂದ ಮುಕ್ತಿ ನೀಡುತ್ತಾ ಒಳಿತು ಮತ್ತು ಸತ್ಯತೆ ಕಡೆಗೆ ಮರಳಿಸುವ ಒಬ್ಬ ದೈವಿಕ ಸುಧಾರಕನ ಆವಶ್ಯಕತೆ ಇದೆ ಎಂದು ಕಾಲವೇ ತನ್ನ ಅವಸ್ಥೆಯ ಮೂಲಕ ಕೂಗಿ ಹೇಳುತ್ತಿದೆ. ಆದ್ದರಿಂದ ಅಗತ್ಯವಾಗಿದ್ದ ತಕ್ಕ ಸಮಯದಲ್ಲಿ ನಾನು ಆಗಮಿಸಿದ್ದೇನೆ ಎಂಬುದು ಎಷ್ಟು ಸ್ಪಷ್ಟವಾಗಿದೆ ಎಂದರೆ, ಪೂರ್ವಾಗ್ರಹ ಪೀಡಿತನಲ್ಲದೇ ಬೇರೆ

ಯಾವನೂ ಅದನ್ನು ನಿರಾಕರಿಸಲಾರನು.

ಎರಡನೇ ನಿಬಂಧನೆ ಏನೆಂದರೆ, ವಾದಿಸುವ ವ್ಯಕ್ತಿ ಪ್ರವಾದಿಗಳು ನಿಶ್ಚಯಿಸಿದ ಸಮಯದಲ್ಲಿ ಆಗಮಿಸಿರುವರೋ ಇಲ್ಲವೋ ಎಂದು ನೋಡುವುದಾಗಿದೆ. ಈ ನಿಬಂಧನೆ ಸಹ ನನ್ನ ಆಗಮನದಿಂದ ಈಡೇರಿದೆ. ಏಕೆಂದರೆ (ಪ್ರವಾದಿ ಆದಮ್‌ರ ಆಗಮನದಿಂದ ಹಿಡಿದು) ಆರನೇ ಸಾವಿರ ಕೊನೆಗೊಳ್ಳುವಾಗ ವಾಗ್ದತ್ತ ಮಸೀಹ್ ಪ್ರಕಟಗೊಳ್ಳುವರು ಎಂದು ಪ್ರವಾದಿಗಳು ಭವಿಷ್ಯ ನುಡಿದಿದ್ದರು. ಹೀಗೆ ಚಂದ್ರಮಾನ ವರ್ಷದ ಪ್ರಕಾರ ಹಝ್ರತ್ ಆದಂ(ಅ)ರ ಕಾಲದಿಂದ 6 ಸಾವಿರ ವರ್ಷಗಳು ಈಗಾಗಲೇ ಕೊನೆಗೊಂಡಿವೆ ಮತ್ತು ಸೂರ್ಯಮಾನ ವರ್ಷದ ಪ್ರಕಾರ 6 ಸಾವಿರ ವರ್ಷಗಳು ಮುಕ್ತಾಯಗೊಳ್ಳಲಿದೆ. ಅದಲ್ಲದೇ ಪ್ರತಿ ಶತಮಾನದ ಆರಂಭದಲ್ಲಿ ಧರ್ಮದ ಪುನರುಜ್ಜೀವನಕ್ಕಾಗಿ ಮುಜದ್ದಿದ್ ಆಗಮಿಸುವರು ಎಂದು ನಮ್ಮ ನಬಿ(ಸ) ಹೇಳಿದ್ದರು. ಈಗ 14ನೇ ಶತಮಾನದ 21 ವರ್ಷಗಳು ದಾಟಿಹೋಗಿವೆ ಮತ್ತು 22ನೇ ವರ್ಷ ಮುಂದುವರಿಯುತ್ತಿದೆ. ಮುಜದ್ದಿದ್ ಆಗಮಿಸಿರುವರು ಎಂಬುದಕ್ಕೆ ಇದು ಸೂಚನೆಯಲ್ಲವೇ?" (ಲೆಕ್ಚರ್ ಲಾಹೋರ್, ರೂಹಾನಿ ಖಝಾಈನ್, ಸಂಪುಟ–20, ಪುಟ–194–195)

ಅನ್ಯರು ನಂಬಿದರೂ ನಂಬದಿದ್ದರೂ, ನಮ್ಮ ವಿರೋಧಿಗಳು ಹಝ್ರತ್ ಮಸೀಹ್ ಮೌಊದ್(ಅ)ರ ಸತ್ಯತೆಯನ್ನು ಒಪ್ಪಿದರೂ ಇಲ್ಲದಿದ್ದರೂ ಇಸ್ಲಾಮಿನ ನೌಕೆಯನ್ನು ನಿಭಾಯಿಸಲು ಇಸ್ಲಾಮಿನಲ್ಲಿ ಮಹ್‌ದಿ ಮತ್ತು ಸುಧಾರಕನ ಆವಶ್ಯಕತೆಯಿದೆ ಎಂದು ಅವರು ಸ್ವತಃ ಉಚ್ಚ ಸ್ವರದಲ್ಲಿ ಹೇಳುತ್ತಿದ್ದಾರೆ. ಆಗಮಿಸಬೇಕಾದ ವ್ಯಕ್ತಿ ಭವಿಷ್ಯವಾಣಿ ಪ್ರಕಾರ, ಕಾಲಘಟ್ಟದ ಆವಶ್ಯಕತೆ ಅನುಸಾರ ಆಗಮಿಸಿದರು. ಆದರೆ ಆ ವ್ಯಕ್ತಿಯನ್ನು ನಂಬಲು ಅವರು ತಯಾರಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಕೇವಲ ವಾದಗಳನ್ನು ಮುಂದಿರಿಸಿಲ್ಲ. ಬದಲಾಗಿ ವಾದಗಳೊಂದಿಗೆ ಅನೇಕ ದೃಷ್ಟಾಂತಗಳನ್ನು ಕೂಡ ಪ್ರಕಟಗೊಳಿಸಿದರು. ಒಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇಂದಿಗೆ 23 ವರ್ಷಗಳ ಹಿಂದೆ ಬರಾಹೀನೆ ಅಹ್ಮದಿಯಾದಲ್ಲಿ ಹೀಗೊಂದು ದಿವ್ಯವಾಣಿ ಇದೆ: "ಈ ಜಮಾಅತನ್ನು ನಾಶಮಾಡಲು ಜನರು ಪ್ರಯತ್ನಿಸುವರು ಮತ್ತು ಅವರು ಎಲ್ಲ ರೀತಿಯ ಕುತಂತ್ರವನ್ನು ಮಾಡುವರು. ಆದರೆ ನಾನು ಈ ಜಮಾಅತನ್ನು ವರ್ಧಿಸುವೆನು ಮತ್ತು ಪೂರ್ತಿ ಮಾಡುವೆನು ಹಾಗೂ ಅದೊಂದು ಸೈನ್ಯವಾಗುವುದು. ಖಿಯಾಮತ್ ತನಕ ಅದಕ್ಕೆ ಮೇಲುಗೈ ಇರುವುದು. ನಾನು ನಿನ್ನ ಹೆಸರನ್ನು ಲೋಕದ ಮೂಲೆಗಳ ತನಕ ಪ್ರಸಿದ್ಧಗೊಳಿಸುವೆನು. ಗುಂಪುಗುಂಪಾಗಿ ಜನರು ದೂರದಿಂದ ಬರುವರು. ಎಲ್ಲೆಡೆಯಿಂದ ಆರ್ಥಿಕ ಸಹಾಯ ಲಭಿಸುವುದು. ಮನೆಗಳನ್ನು ವಿಸ್ತಾರಗೊಳಿಸು. ಈ ತಯಾರಿ ಆಕಾಶದಲ್ಲಿ ನಡೆಯುತ್ತಿದೆ." ಈಗ ನೋಡಿರಿ, ಇದು ಯಾವ ಕಾಲದ ಭವಿಷ್ಯವಾಣಿಯಾಗಿದೆ. ಇಂದು ಅದು ಈಡೇರಿದೆ. ಕಣ್ಣುಳ್ಳವರು ಅವುಗಳನ್ನು ನೋಡುತ್ತಿದ್ದಾರೆ. ಆದರೆ ಕುರುಡರ ಪ್ರಕಾರ ಇಲ್ಲಿಯ ವರೆಗೂ ಯಾವುದೇ ಕುರುಹು ಪ್ರಕಟಗೊಂಡಿಲ್ಲ." (ನುಝೂಲುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ–18, ಪುಟ–384–385)

ಇಂದು ಸಹ ಅಹ್ಮದಿಯಾ ಜಮಾಅತಿನ ಪ್ರಗತಿ, ಲಕ್ಷಾಂತರ ಸಂಖ್ಯೆಯಲ್ಲಿ ಜನರು ಜಮಾಅತಿನಲ್ಲಿ ಪ್ರವೇಶಿಸುವುದು, ತ್ಯಾಗಗಳಲ್ಲಿ ಮುಂದಾಗುವುದು ಹಝ್ರತ್ ಮಸೀಹ್ ಮೌಊದ್(ಅ)ರ ಸತ್ಯತೆಯ ಪುರಾವೆಯಾಗಿದೆ. ಇಂದು ಲೋಕದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಸಂದೇಶ ತಲುಪದ ಯಾವುದೇ ದೇಶವಿಲ್ಲ. ಅವರ ಸಂದೇಶದ ಕಾರಣದಿಂದ ಇಸ್ಲಾಮಿನ ಕಡೆಗೆ ಸೌಭಾಗ್ಯಶಾಲಿಗಳ ಗಮನ ಹರಿಯದ ಯಾವುದೇ ದೇಶವಿಲ್ಲ. ಮಾತ್ರವಲ್ಲ ಕೆಲವೆಡೆ ಎಂತಹ ಘಟನೆಗಳು ನಡೆದಿವೆ ಎಂದರೆ ಅಲ್ಲಿ ಅಲ್ಲಾಹನು ಸ್ವತಃ ಜನರ ಮಾರ್ಗದರ್ಶನ ಮಾಡಿದನು ಮತ್ತು ಅವರು ಜಮಾಅತಿನಲ್ಲಿ ಪ್ರವೇಶಿಸಿದರು.

ಎದುರಾಳಿಗಳ ವಿರೋಧ ಇದ್ದೂ ಜಮಾಅತಿನ ಸದಸ್ಯರ ವಿಶ್ವಾಸವನ್ನು ಅಲ್ಲಾಹನು ಸುದೃಢಗೊಳಿಸಿದನು ಮತ್ತು ಸುದೃಢಗೊಳಿಸುತ್ತಾ ಇದ್ದಾನೆ. ಇಂದು ಸಹ ನಾವು ನೋಡುತ್ತಿರುವ ದೈವಿಕ ಸಹಾಯಗಳ ದೃಶ್ಯಗಳು ಒಬ್ಬ ಅಹ್ಮದಿಯ ವಿಶ್ವಾಸವನ್ನು ಸುದೃಢಗೊಳಿಸುವ ಮಾರ್ಗವಾಗಿವೆ.

ಬೋಬೋವ್ ಇಸ್ಲಾಂಬೆಕ್ ಸಾಹಿಬ್ ಅವರು ರಷ್ಯದವರಾಗಿದ್ದಾರೆ, ಕಿರ್ಗಿಸ್ತಾನ್ ನಿಂದ. ಅವರು ಹೇಳುತ್ತಾರೆ: ನಾನು ಕಿರ್ಗಿಸ್ತಾನ್‌ನ ಕಶ್ಗರ್ ಕಿಶ್ಲಾಕ್‌ಗೆ ಸೇರಿದವನಾಗಿದ್ದೇನೆ ಮತ್ತು ನನ್ನ ಪತ್ರವನ್ನು ಬರೆಯಲು ಕಾರಣವೆಂದರೆ ನಾನು ಹಝ್ರತ್ ಇಮಾಮ್ ಮಹದಿ ಅಲೈಹಿಸ್ಸಲಾಮ್‌ರ ಬೈಅತ್ ಮಾಡುವ ಮೂಲಕ ನಿಜವಾದ ಇಸ್ಲಾಂಗೆ ಅಂದರೆ ಜಮಾಅತ್‌ಗೆ ಸೇರುತ್ತಿದ್ದೇನೆ. ಹಝ್ರತ್ ಇಮಾಮ್ ಮಹದಿ(ಅ) ಅವರು ಇಸ್ಲಾಮಿನ ಸದ್ಗುಣಗಳನ್ನು, ವೈಶಿಷ್ಟತೆಗಳನ್ನು ಬಹಳ ಉತ್ತಮ ರೀತಿಯಲ್ಲಿ ವಿವರಿಸಿರುವುದು ಇದು ನನಗೆ ಅಹ್ಮದಿಯ್ಯತ್‌ಗೆ ಸೇರಲು ಕಾರಣವಾಗಿದೆ. ಇಮಾಮ್ ಮಹದಿ(ಅ) ಮಾತ್ರ ಇಸ್ಲಾಮಿನ ಸದ್ಗುಣಗಳನ್ನು ಈ ರೀತಿಯಲ್ಲಿ ವಿವರಿಸಬಲ್ಲರು ಎಂದು ನನಗೆ ಮನವರಿಕೆಯಾಗಿದೆ. ನಂತರ ಅವರು ಬರೆಯುತ್ತಾರೆ, ಸರ್ವಶಕ್ತನಾದ ಅಲ್ಲಾಹನು ನನ್ನನ್ನು ಧರ್ಮನಿಷ್ಠನನ್ನಾಗಿ ಮಾಡಲಿ ಮತ್ತು ಬೈಅತ್‌ನ ಹತ್ತು ನಿಯಮಗಳ ಅನುಸರಿಸುವವನನ್ನಾಗಿ ಮಾಡಲಿ ಎಂದು ನನಗಾಗಿ ದುಆ ಮಾಡಿರಿ. ಇದು ದೂರದ ಪ್ರದೇಶದಲ್ಲಿ ಕುಳಿತ ವ್ಯಕ್ತಿಯೊಬ್ಬನ ಹೇಳಿಕೆಯಾಗಿದೆ. ಈಗ ಅದು ಒಂದೇ ಕಡೆ ಅಲ್ಲ ಎಲ್ಲ ದೇಶಗಳಲ್ಲೂ ನಡೆಯುತ್ತಿದೆ.

ಕಾಂಗೋವಿನ ಒಂದು ಪ್ರಾಂತ್ಯ ಮನೀಮಾ ಎಂದಾಗಿದೆ. ಅಲ್ಲಿ ರೋಡಿಕಾ ಎಂಬ ಸ್ಥಳವಿದೆ. ಒಬ್ಬ ಕ್ರೈಸ್ತ ಸ್ನೇಹಿತ ಫಿರೋಝ್ ಮಾಜಿಕ್ ಸಾಹಿಬ್ ಎಂಬವವರಿದ್ದಾರೆ. ಜಮಾಅತ್‌ನ ಕರಪತ್ರಗಳು ಅವರನ್ನು ತಲುಪಿದವು, ಅದರಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರ ಆಗಮನ ಮತ್ತು ಅಹ್ಮದೀಯ ಜಮಾಅತ್‌ನಲ್ಲಿನ ಖಿಲಾಫತ್ ವ್ಯವಸ್ಥೆಯ ಅನುಗ್ರಹಗಳನ್ನು ವಿವರಿಸಲಾಗಿದೆ. ಅವರು ಹೇಳಿದರು, ನಾನು ಈ ಇಸ್ಲಾಂ ಧರ್ಮವನ್ನು ಹುಡುಕುತ್ತಿದ್ದೇನೆ. ಅವರು ಬೈಅತ್ ಮಾಡಿ ಅಹ್ಮದಿಯತ್ತಿನಲ್ಲಿ ಸೇರ್ಪಡೆಯಾದರು. ಹಾಗೆಯೇ ಮತ್ತೊಬ್ಬ ಮಿತ್ರ ಹುಸೇನ್ ಸಾಹಿಬ್ ಜಮಾಅತ್‌ನ ಕರಪತ್ರಗಳನ್ನು ಓದಿ ಬೈಅತ್ ಮಾಡಿದ್ದು ಮಾತ್ರವಲ್ಲದೆ ಮುಂದೆಯೂ ತಮ್ಮ ತಬ್ಲೀಗ್ ಅನ್ನೂ ಆರಂಭಿಸಿದರು, ಈ ವರದಿ ಲಭಿಸಿಸದವರೆಗೆ ಐದು ಮಂದಿಯನ್ನು ಅಹಮದಿಯತ್ತಿನಲ್ಲಿ ಸೇರಿಸಿದರು. ಈ ರೀತಿಯಾಗಿ ಜನರು ತಮ್ಮನ್ನು ತಾವು ಸೇರಿಕೊಳ್ಳುವುದು ಮಾತ್ರವಲ್ಲದೆ ತಬ್ಲೀಗನ್ನೂ ಸಹ ಮಾಡುತ್ತಿದ್ದಾರೆ ಮತ್ತು ಅವರು ಉಪದೇಶದತ್ತ ಗಮನಹರಿಸಬೇಕು ಎಂಬುದು ಹಳೆಯ ಅಹಮದೀಯರ ಕಾಳಜಿಯ ವಿಷಯವಾಗಿದೆ.

ನಂತರ ತಾಂಜಾನಿಯಾದಲ್ಲಿ ಶಿಯಾಂಗಾ ಎಂಬ ಪ್ರದೇಶವಿದೆ. ವ್ಯಾಂಗಲಂಗದಲ್ಲಿ ಒಂದು ಜಮಾಅತ್ ಇದೆ. ಇಲ್ಲಿ ಅಹ್ಮದಿಯತ್ ಜಮಾಅತ್ ಪ್ರಾರಂಭಿಸಿದಾಗ, ಆರಂಭದಲ್ಲಿ ಅಹ್ಮದಿ ಸ್ನೇಹಿತರು ಮರಗಳ ನೆರಳಿನಲ್ಲಿ ನಮಾಝ್ ನಿರ್ವಹಿಸುತ್ತಿದ್ದರು. ಈ ನಡುವೆ, ಅಲ್ಲಿದ್ದ ವ್ಯಕ್ತಿಯೊಬ್ಬ ಮಹಮ್ಮದ್ ಘಂಗಗುಂಗಾ ಜಮಾಅತ್ ಅನ್ನು ಬಲವಾಗಿ ವಿರೋಧಿಸಲು ಪ್ರಾರಂಭಿಸಿದನು ಮತ್ತು ಕೆಲವು ಸ್ನೇಹಿತರ ಜೊತೆಗೂಡಿ ಈ ಅಹ್ಮದಿಯರು ಮುಸ್ಲಿಮರಲ್ಲ ಮತ್ತು ನಾವು ಮುಸ್ಲಿಮರು ಶೀಘ್ರದಲ್ಲೇ ಇಲ್ಲಿ ಮಸೀದಿಯನ್ನು ನಿರ್ಮಿಸುತ್ತೇವೆ ಎಂದು ಎಲ್ಲಾ ಕಡೆ ಪ್ರಕಟಿಸಿದನು. ಈ ವ್ಯಕ್ತಿ ಮಸೀದಿಗೆ ಹಣ ನೀಡುವುದಾಗಿ ಓರ್ವ ಶ್ರೇಷ್ಠ ಮಹಿಳೆಯ ಗ್ಯಾರಂಟಿಯನ್ನೂ ತೆಗೆದುಕೊಂಡನು. ಮತ್ತೊಂದೆಡೆ, ಓರ್ವ ಪ್ರಾಮಾಣಿಕ ಅಹ್ಮದಿ, ರಂಜಾನ್ ಸಾಹಿಬ್, ಮಸೀದಿಗಾಗಿ ತನ್ನ ಭೂಮಿಯನ್ನು ಅರ್ಪಿಸಿದಾಗ, ಈ ವ್ಯಕ್ತಿಯು ಹೇಗಾದರೂ ಈ ಭೂಮಿಯನ್ನು ಜಮಾಅತೇತರ ಮುಸ್ಲಿಮರಿಗೆ ಪಡೆಯಲು ತುಂಬಾ ಪ್ರಯತ್ನಿಸಿದನು, ಆದರೆ ಜಮಾಅತ್‌ನ ಸದಸ್ಯರು ಮಸೀದಿಯನ್ನು ನಿರ್ಮಿಸುವವರೆಗೂ ಬಹಳ ದೃಢವಾಗಿ ನೆಲೆನಿಂತಿದ್ದರು. ಅಷ್ಟರಲ್ಲಿ ಅಹ್ಮದಿಯಾ ಜಮಾಅತ್ ನ ಉಪದೇಶ ಈ ಎದುರಾಳಿಯ ಮನೆಯವರೆಗೆ ತಲುಪಿತು. ಈಗ ಅವನು ವಿರೋಧಿಸುತ್ತಿದ್ದಾನೆ ಮತ್ತು ಅಹ್ಮದಿಯ್ಯತ್‌ನ ಸಂದೇಶವು ಅವನ ಮನೆಗೆ ತಲುಪಿತು ಮತ್ತು ಸರ್ವಶಕ್ತನಾದ ಅಲ್ಲಾಹನು ಅವನ ಪತ್ನಿ ಮತ್ತು ಮಕ್ಕಳನ್ನು ಅಹ್ಮದಿಯತ್ ಅನ್ನು ಸ್ವೀಕರಿಸಲು ಸೌಭಾಗ್ಯ ಲಭಿಸಿದರು ಮತ್ತು ಈಗ ಅವನು ತನ್ನ ವಿರೋಧದಲ್ಲಿ ಏಕಾಂಗಿಯಾಗಿದ್ದಾನೆ. ಈಗ, ಈ ವ್ಯಕ್ತಿಯಲ್ಲಿ ಬುದ್ಧಿವಂತಿಕೆ ಇದ್ದರೆ ಮತ್ತು ಅವನಂತಹ ಅನೇಕ ಜನರಿದ್ದರೆ, ವಿರೋಧದ ನಡುವೆಯೂ ಅಲ್ಲಾಹನು ಆತನ ಹೆಂಡತಿ ಮತ್ತು ಮಕ್ಕಳ ಹೃದಯದಲ್ಲಿ ನಿಜವಾದ ಇಸ್ಲಾಂನ ಉತ್ಸಾಹವನ್ನು ಸೃಷ್ಟಿಸಿದನು ಮತ್ತು ಅವನ ಯಾವುದೇ ಬಲವು ನಡೆಯಲಿಲ್ಲ ಎಂಬುದಕ್ಕೆ ಇದು ಒಂದು ಸಂಕೇತವಾಗಿದೆ. ಈ ವಿಶ್ವಾಸ, ಈ ಬದಲಾವಣೆಯನ್ನು ಯಾವುದೇ ಮನುಷ್ಯ ಸೃಷ್ಟಿಸಬಹುದೇ? ಅಸಾಧ್ಯ. ಇದು ಸರ್ವಶಕ್ತನಾದ ಅಲ್ಲಾಹನ ವಿಶೇಷ ಅನುಗ್ರಹದಿಂದ ಮಾತ್ರ ಸಂಭವಿಸುತ್ತದೆ.

ನಂತರ ದೃಢ ನಂಬಿಕೆಗೆ ಮತ್ತು ಅಲ್ಲಾಹನ ಬೆಂಬಲಕ್ಕೆ ಮತ್ತೊಂದು ಉದಾಹರಣೆ ಹೀಗಿದೆ.

ಅರ್ಜೆಂಟೀನಾ ಅಮೆರಿಕಾದಲ್ಲಿ ಒಂದು ದೂರದ ಬೇರೆ ಪ್ರದೇಶವಿದೆ. ಆಫ್ರಿಕಾದಲ್ಲೂ ನಡೆಯುತ್ತಿದೆ, ರಷ್ಯಾದ ಬಗ್ಗೆ ನಡೆಯುತ್ತಿದೆ. ಅಮೇರಿಕಾದ ಬಗ್ಗೆ ನಡೆಯುತ್ತಿದೆ. ಅಲ್ಲಿನ ಓರ್ವ ಮಹಿಳೆ ಮಾರಿಲಾ ಸಾಹಿಬಾ ಎಂಬವರಿದ್ದಾರೆ ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದರು, ಆದರೆ ಮುಸ್ಲಿಮರ ಪ್ರಾಯೋಗಿಕ ನಡವಳಿಕೆಯಿಂದ ಅವರು ಇಸ್ಲಾಂನಿಂದ ದೂರ ಸರಿಯುತ್ತಿದ್ದರು. ಅಹ್ಮದಿ ಆಗಿರಲಿಲ್ಲ. ಇಸ್ಲಾಂ ಸ್ವೀಕರಿಸಿದ್ದರು. ಅವರಿಗೆ ಅಹ್ಮದಿಯಾ ಜಮಾಅತ್ ಬಗ್ಗೆ ಪರಿಚಯವಾದಾಗ ಅವರು ಮಿಷನ್ ಹೌಸ್‌ಗೆ ಬಂದು ನಮ್ಮ ಅರೇಬಿಕ್ ಮತ್ತು ಇಸ್ಲಾಂ ತರಗತಿಗಳಿಗೆ ಹಾಜರಾಗುತ್ತಿದ್ದರು, ಮತ್ತು ಕೆಲವು ತಿಂಗಳ ನಂತರ ಅವರು ಬೈಅತ್ ಮಾಡಿ ಜಮಾಅತ್‌ಗೆ ಸೇರಿಕೊಂಡರು. ಜಮಾಅತ್‌ನ ಬೋಧನೆಗಳು ಮತ್ತು ಆಚರಣೆಗಳಲ್ಲಿ ನಾನು ಸ್ಥಿರತೆಯನ್ನು ಕಂಡುಕೊಂಡಿದ್ದೇನೆ ಮತ್ತು ನಿಜವಾದ ಸಹೋದರತ್ವದ ವಾತಾವರಣವನ್ನು ಅನುಭವಿಸಿದ್ದರಿಂದ ನಾನು ನನ್ನ ಬೈಅತ್‌ನಿಂದ ತೃಪ್ತಳಾಗಿದ್ದೇನೆ ಎಂದು ಅವರು ಹೇಳ ತೊಡಗಿದರು.

ಇದರಲ್ಲಿ ಹೊಸಬರಾಗಿದ್ದರೂ ಯಾವುದೇ ತಾರತಮ್ಯ, ವ್ಯತ್ಯಾಸವಿಲ್ಲದೇ ಎಲ್ಲರಿಗೂ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ. ಅವರ ಪುತ್ರಿ ಮುಸ್ಲಿಮೇತರಳಾಗಿದ್ದಳು ಆಕೆಯು ಸುನ್ನಿ ಇಸ್ಲಾಮಿಕ್ ಸೆಂಟರ್‌ನಲ್ಲಿ ಅಧ್ಯಾಯನ ಮಾಡುತ್ತಿದ್ದಳು, ಇದು ಅವರ ಪ್ರೌಢಶಾಲೆಯಾಗಿತ್ತು. ಅರಬ್ಬರು ಅಲ್ಲಿ ಹಣವನ್ನು ಖರ್ಚು ಮಾಡಿದ್ದಾರೆ. ಆಕೆಯ ತಾಯಿ ಜಮಾಅತ್‌ನಲ್ಲಿ ತೊಡಗಿರುವ ಬಗ್ಗೆ ಶಾಲೆಯ ಆಡಳಿತ ಮಂಡಳಿಗೆ ತಿಳಿದಾಗ, ಅವರು ಅವಳ ಮೇಲೆ ಒತ್ತಡ ಹೇರಲು ಮತ್ತು ಜಮಾಅತ್‌ನ ವಿರುದ್ಧ ಅಪಪ್ರಚಾರ ಮಾಡಲು ಪ್ರಾರಂಭಿಸಿದರು. ಶಾಲೆಯ ಯೋಜನೆಯ ಭಾಗವಾಗಿ ತಮ್ಮ ಮಗಳು ಜಮಾಅತ್‌ನ ಮಿಷನ್ ಹೌಸ್‌ಗೆ ವಿಶೇಷ ಅಲಂಕಾರದ ತುಣುಕುಗಳನ್ನು ಸಹ ಸಿದ್ಧಪಡಿಸಿದ್ದಾಳೆ ಎಂದು ಶಾಲಾ ಸಿಬ್ಬಂದಿಗಳಿಗೆ ತಿಳಿದಾಗ, ಶಾಲಾ ಆಡಳಿತ ಮಂಡಳಿಯು ಕೋಪಗೊಂಡು ಬಾಲಕಿಗೆ ಅಹ್ಮದಿಯಾ ಜಮಾಅತ್‌ಗೆ ಬೆಂಬಲ ನೀಡಿದರೆ ನಿನಗೆ ಶಾಲೆಯಲ್ಲಿ ಬಹಳ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ ಆದ್ದರಿಂದ ನೀನು ಮತ್ತು ನಿನ್ನ ತಾಯಿ ಜಮಾಅತ್ತಿನಿಂದ ಬೇರ್ಪಡಬೇಕು ಎಂದು ಹೇಳಿದರು. ಈ ಮಾತು ಆಕೆಯ ತಾಯಿಗೆ ತಿಳಿದಾಗ, ಅವರು ಯಾವುದೇ ಹಿಂಜರಿಕೆಯಿಲ್ಲದೆ ತನ್ನ ಮಗಳನ್ನು ಈ ಇಸ್ಲಾಮಿಕ್ ಶಾಲೆಯಿಂದ ತಕ್ಷಣ ವರ್ಗಾಯಿಸಿದರು ಮತ್ತು ಈಗ ನಾನು ಮತ್ತು ನನ್ನ ಮಗಳು ನಮ್ಮ ಧರ್ಮದ ಕಾರಣದಿಂದ ನಮಗೆ ಯಾರೂ ತೊಂದರೆ ನೀಡುವುದಿಲ್ಲ ಎಂದು ತೃಪ್ತಿ ಹೊಂದಿದ್ದೇವೆ ಎಂದು ಹೇಳಿದರು. ನಾನು ಜಮಾಅತ್ ಸರಿಯಾಗಿದೆ

ಎಂದು ಭಾವಿಸಿ ಒಪ್ಪಿಕೊಂಡಿದ್ದರಿಂದ ನಾನು ಅಪರಿಚಿತರ ಮುಂದೆ ಬಹಳ ಸಂತೋಷ ಹಾಗೂ ಹೆಮ್ಮೆಯಿಂದ ಇದನ್ನು ವ್ಯಕ್ತಪಡಿಸುತ್ತೇನೆ ಇದರಿಂದ ಯಾರಿಗೆ ಬೇಸರವಾದರೂ ಸರಿ. ಹೀಗೆ ಇದು ಆ ಜನರಲ್ಲಿ ಹುಟ್ಟುತ್ತಿರುವ ವಿಶ್ವಾಸವಾಗಿದೆ.

ರಷ್ಯಾದ ಒಂದು ಪ್ರದೇಶವಾದ ಬುಖಾರಾದಲ್ಲಿ ಓರ್ವ ಪ್ರಾಮಾಣಿಕ ಅಹ್ಮದಿ ಸನತ್ ಸುಲ್ತಾನೋವಿಚ್ ಸಾಹಿಬ್ ಇದ್ದಾರೆ. ಅವರು ಉಜ್ಬೇಕಿಸ್ತಾನ್‌ಗೆ ಸೇರಿದವರು ಮತ್ತು ರಷ್ಯಾದಲ್ಲಿ ಕೆಲಸ ಮಾಡುತ್ತಾರೆ. ಅವರು ಹೇಳುತ್ತಾರೆ ನಾನು ಒಬ್ಬನೇ ಅಹ್ಮದಿ ಆಗಿದ್ದೇನೆ ಮತ್ತು ನನ್ನ ಹೆಂಡತಿ ಮತ್ತು ಮಗುವನ್ನು ಇಸ್ಲಾಮ್ ಅಹ್ಮದಿಯತ್‌ನ ಬೋಧನೆಗಳಿಗೆ ಪರಿಚಯಿಸುತ್ತಲೇ ಇರುತ್ತೇನೆ. ನನ್ನ ಹೆಂಡತಿ ಮತ್ತು ಮಕ್ಕಳು ಸಹ ಅಹ್ಮದೀಯರಾಗಬೇಕೆಂದು ನಾನು ಬಯಸುತ್ತೇನೆ. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಇಸ್ಲಾಮ್ ಅಹ್ಮದಿಯತ್‌ನ ಪ್ರಕಾಶದಿಂದ ಪ್ರಜ್ವಲಗೊಳಿಸಲಿ ಎಂದು ನಾನು ತುಂಬಾ ಪ್ರಾರ್ಥಿಸುತ್ತೇನೆ. ಅವರು ಹೇಳುತ್ತಾರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನನ್ನ ಕನಸಿನಲ್ಲಿ ಬಂದು ನನ್ನ ಹೃದಯದ ಮೇಲೆ ತಲೆಯಿಟ್ಟುಕೊಂಡು ನಿರಂತರವಾಗಿ ಸೂರಾ ಇಖ್ಲಾಸ್ ಅನ್ನು ಪಠಿಸುತ್ತಿದ್ದುದನ್ನು ನಾನು ಕನಸಿನಲ್ಲಿ ನೋಡಿದೆ, ಇದು ನನಗೆ ಹೆಚ್ಚಿನ ಮನಸ್ಸಿಗೆ ಶಾಂತಿಯನ್ನು ನೀಡಿತು. ಅಂತೆಯೇ, ನಾನು ನನ್ನ ಹೆಂಡತಿ ಮತ್ತು ಮಗನೊಂದಿಗೆ ಸ್ವರ್ಗದಲ್ಲಿದ್ದೇನೆ ಎಂದು ನಾನು ಕನಸಿನಲ್ಲಿ ನೋಡಿದೆ ಮತ್ತು ಅಲ್ಲಿ ನಾನು ಹಝ್ರತ್ ಮೂಸಾ ಮತ್ತು ಹಝ್ರತ್ ಈಸಾ ಮಸೀಹ್‌ರನ್ನು ಸಹ ನೋಡಿದೆ. ಈ ಕನಸಿನಿಂದ ನನಗೆ ತೃಪ್ತಿ ಲಭಿಸಿದ್ದೇನೆಂದರೆ ಸ್ವರ್ಗ ಎಂದರೆ ಅದು ಇಸ್ಲಾಮ್ ಅಹ್ಮದಿಯ್ಯತ್ ಆಗಿದೆ ಹಾಗೂ ಅದರ ಬೋಧನೆಗಳು ಸ್ವರ್ಗನಂತಿದೆ. ಸರ್ವಶಕ್ತನಾದ ಅಲ್ಲಾಹನು ತನ್ನ ಅನುಗ್ರಹದಿಂದ ನನ್ನ ಹೆಂಡತಿ ಮತ್ತು ಮಗನನ್ನು ಈ ಸ್ವರ್ಗಕ್ಕೆ ಕರೆತರುತ್ತಾನೆ ಎಂಬ ಭರವಸೆ ನನಗಿತ್ತು. ಈ ಕನಸಿನ ನಂತರ ಕೆಲವೇ ದಿನಗಳಲ್ಲಿ ಸರ್ವಶಕ್ತನಾದ ಅಲ್ಲಾಹನು ನನ್ನ ಹತ್ತೊಂಬತ್ತು ವರ್ಷದ ಮಗ ದಿಯಾರ್ ಬೇಗ್ ಸುನ್ನತ್‌ನ ಮನಸ್ಸನ್ನು ಇಸ್ಲಾಂ ಅಹ್ಮದಿಯತ್ ಕಡೆಗೆ ತೆರೆದನು ಮತ್ತು ಅವನು ಬೈಅತ್ ಮಾಡಿ ಜಮಾಅತ್ತಿನಲ್ಲಿ ಸೇರ್ಪಡೆಯಾದನು. ಇದು ನನಗೆ ಬಹಳ ಸಂತೋಷದ ದಿನವಾಗಿತ್ತು. ಅದನ್ನು ಪದಗಳಲ್ಲಿ ವಿವರಿಸಲು ಅಸಾಧ್ಯ. ಅಲ್ಲಾಹನು ನನ್ನ ಹೆಂಡತಿಯ ಮನಸ್ಸನ್ನು ಸಹ ಅದೇ ರೀತಿಯಲ್ಲಿ ತೆರೆಯಲಿ ಮತ್ತು ಅವಳನ್ನು ಇಸ್ಲಾಂ ಅಹ್ಮದಿಯತ್ ಕಡೆಗೆ ತರಲಿ. ಇದು ಈ ಜನರ ಉತ್ಸಾಹವಾಗಿದೆ.

ಯುಕೆಯ ನವ ಅಹ್ಮದಿ ಮಹಿಳೆ ಇದ್ದಾರೆ ಅವರು ಹೇಳುತ್ತಾರೆ. ನನಗೆ ಮುಸ್ಲಿಂ ಹಿನ್ನೆಲೆ ಇದೆ. ಸುನ್ನಿ ಕುಟುಂಬಕ್ಕೆ ಸೇರಿದವಳಾಗಿದ್ದೆನೆ. ಅವರು ಹೇಳುತ್ತಾರೆ ಸುನ್ನಿ ಇಸ್ಲಾಂ ಮಾತ್ರ ನಿಜವಾದ ಇಸ್ಲಾಂ ಆಗಿದೆ ಎಂದು ನಮಗೆ ಹೇಳಲಾಗಿದೆ. ಒಂದು ದಿನ, ಅವಳು ಹೇಳುತ್ತಾಳೆ, ನನ್ನ ವಿಶ್ವವಿದ್ಯಾನಿಲಯದ ಸಮೀಪವಿರುವ ಜಿಲಿಂಗ್‌ಹ್ಯಾಮ್‌ನಲ್ಲಿರುವ ಮಸ್ಜಿದ್ ನಾಸಿರ್‌ನಲ್ಲಿ ಅಝಾನ್ ಅನ್ನು ನಾನು ಕೇಳಿದೆ, ನಾನು ಮನೆಗೆ ಬಂದು ನಮ್ಮ ವಿಶ್ವವಿದ್ಯಾಲಯದ ಬಳಿ ಒಂದು ಸುಂದರವಾದ ಮಸೀದಿ ಇದೆ ಎಂದು ನನ್ನ ತಂದೆಗೆ ಬಹಳ ಸಂತೋಷದಿಂದ ಹೇಳಿದೆ. ಅದಕ್ಕೆ ನನ್ನ ತಂದೆ ಅದನ್ನು ಸಂಶೋಧಿಸಿ ಅದು ಅಹ್ಮದೀಯರ ಮಸೀದಿಯಾಗಿದೆ ಎಂದು ಕಂಡುಕೊಂಡರು. ಈ ಮಸೀದಿಯು ಖಾದಿಯಾನಿಗಳಿಗೆ ಸೇರಿದ್ದು ಮತ್ತು ಅವರು ಪ್ರವಾದಿತ್ವದ ಅಂತ್ಯವನ್ನು ನಂಬುವುದಿಲ್ಲ ಎಂದು ಅವರು ನನ್ನನ್ನು ಕಟ್ಟುನಿಟ್ಟಾಗಿ ನಿಷೇಧಿಸಿದರು. ಈ ಆರೋಪವು ಸುಳ್ಳಾಗಿದೆ. ಮತ್ತು ಅವರು ತಮ್ಮದೇ ಆದ ಪ್ರವಾದಿಯನ್ನು ಸೃಷ್ಟಿಸಿಕೊಂಡಿದ್ದಾರೆ ಇತ್ಯಾದಿ.. ಆದ್ದರಿಂದ ಈ ಮಸೀದಿಯಿಂದ ದೂರವಿರಿ. ಆರಂಭದಲ್ಲಿ ನಾನು ಅವರ ಮಾತನ್ನು ಒಪ್ಪಿದೆ ಆದರೆ ನನ್ನ ಮನಸ್ಸು ಒಪ್ಪಲಿಲ್ಲ ಎಂದು ಅವಳು ಹೇಳುತ್ತಾಳೆ. ಅಹ್ಮದೀಯರ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ಮಾಡಬೇಕೆಂದು ನನಗೆ ಅನಿಸಿತು, ಆದರೆ ಇನ್ನೊಂದು ಕಡೆ ನಾನು ಸಿಕ್ಕಿಬೀಳಬಹುದೆಂದು ಮನೆಯವರ ಭಯವು ಇತ್ತು. ವಿಶ್ವವಿದ್ಯಾನಿಲಯದಲ್ಲಿ ಕೆಲವು ಅಹ್ಮದಿ ವಿದ್ಯಾರ್ಥಿಗಳನ್ನು ಭೇಟಿಯಾದೆ, ಅವರೊಂದಿಗೆ ಇಸ್ಲಾಂ ಅಹ್ಮದಿಯತ್‌ನ ಬಗ್ಗೆ ವಿವರವಾದ ಚರ್ಚೆ ನಡೆಯಿತು. ಮೊದಲಿಗೆ, ನಾನು ಸುನ್ನಿ ಇಸ್ಲಾಂ ನಿಜವಾದ ಇಸ್ಲಾಂ ಎಂದು ಅವರಿಗೆ ಸಾಬೀತುಪಡಿಸಲು ಪ್ರಯತ್ನಿಸಿದೆ, ಆದರೆ ಈ ರೀತಿಯ ಸಂಭಾಷಣೆಯಿಂದ, ಅಹ್ಮದಿಯತ್ ಅನ್ನು ಸಂಶೋಧಿಸುವ ನನ್ನ ಆಸಕ್ತಿಯು ಹೆಚ್ಚುತ್ತಲೇ ಇತ್ತು. ನಂತರ ನಾನು ಅಹ್ಮದಿಯಾ ಜಮಾಅತ್‌ನ ವೆಬ್‌ಸೈಟ್ ಅನ್ನು ನೋಡಿದೆ, ಅಲ್ಲಿಯೂ ನಾನು ಸಾಕಷ್ಟು ವೀಡಿಯೊಗಳನ್ನು ವೀಕ್ಷಿಸಲು ಮತ್ತು ಸಾಕಷ್ಟು ವಸ್ತುಗಳನ್ನು ಓದಲು ಲಭಿಸಿತು. ನನಗೆ ಇಸ್ಲಾಮಿನ ಬಗ್ಗೆ ಕೆಲವು ಪ್ರಶ್ನೆಗಳಿದ್ದವು, ಅದು ನನಗೆ ಎಲ್ಲಿಂದಲಾದರೂ ತೃಪ್ತಿಕರ ಉತ್ತರಗಳನ್ನು ಪಡೆಯಲು ಸಾಧ್ಯವಾಗಲಿಲ್ಲ, ಆದರೆ ನಾನು ಜಮಾಅತ್ ಅಹ್ಮದಿಯಾದ ಸಾಹಿತ್ಯವನ್ನು ಅಧ್ಯಯನ ಮಾಡಿದಾಗ, ನಾನು ಬಯಸಿದ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯಲಾರಂಭಿಸಿತು. ಈಗ ಅಹ್ಮದಿ ಯುವಕರು ಸಹ ಜ್ಞಾನವನ್ನು ಸರಿಯಾಗಿ ಪಡೆಯಲು ಪ್ರಯತ್ನಿಸಿದರೆ, ಹೊರಗಿನವರಿಂದ ಪ್ರಭಾವಿತರಾಗುವ ಬದಲು ಉತ್ತರಗಳನ್ನು ಪಡೆಯುತ್ತಾರೆ ಎಂದು ಪರಿಗಣಿಸಬೇಕು. ಕೆಲವು ಯುವಕರು ಪ್ರಭಾವುತರಾಗುತ್ತಾರೆ. ಅವರು ಮುಂದೆ ಹೇಳುತ್ತಾರೆ: ನಂತರ ಅಲ್ಲಾಹನು ನನಗೆ ಏನಾದರೂ ಚಿಹ್ನೆಯನ್ನು ತೋರಿಸಲಿ ಎಂದು ಪ್ರಾರ್ಥಿಸಲು ಪ್ರಾರಂಭಿಸಿದೆ. ಇದು ಮಾರ್ಗದರ್ಶನ ಮತ್ತು ಸರಿಯಾದ ಮಾರ್ಗವನ್ನು ಕಂಡುಕೊಳ್ಳುವ ಉತ್ತಮ ಮೂಲವಾಗಿದೆ.

ಅವರು ಹಳೆಯ ಅಹ್ಮದೀಯರಾಗಿರಲಿ ಅಥವಾ ಇಲ್ಲದಿರಲಿ, ನಮ್ಮ ನಂಬಿಕೆಯನ್ನು ದೃಢಗೊಳಿಸಲು ಮತ್ತು ನಮಗೆ ಚಿಹ್ನೆಗಳನ್ನು ತೋರಿಸಿ ಮತ್ತು ನಮಗೆ ಮಾರ್ಗದರ್ಶನ ನೀಡುವಂತೆ ನಾವು ಸರ್ವಶಕ್ತನಾದ ಅಲ್ಲಾಹನನ್ನು ಪ್ರಾರ್ಥಿಸಬೇಕು.

ಆದಾಗ್ಯೂ ಅವರು ಹೇಳುತ್ತಾರೆ: ಈ ಅವಧಿಯಲ್ಲಿ ನಾನು ಅನೇಕ ಕನಸುಗಳನ್ನು ಕಂಡಿದ್ದೇನೆ. ಕನಸಿನಲ್ಲಿ, ನಾನು ನದಿಯ ದಡದಲ್ಲಿದ್ದೇನೆ ಮತ್ತು ಇನ್ನೊಂದು ದಡದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಸಭಾಂಗಣದಲ್ಲಿ ನಡೆದುಕೊಂಡು ಹೋಗುತ್ತಿರುವುದನ್ನು ನಾನು ನೋಡಿದೆ. ನಾನು ನದಿಯನ್ನು ದಾಟಿ ಇನ್ನೊಂದು ಬದಿಗೆ ಹೀಗಲು ಬಯಸುತ್ತೇನೆ ಆದರೆ ನೀರಿನ ಹರಿವು ಬಹಳ ವೇಗವಾಗಿರುತ್ತದೆ. ಇದನ್ನು ಕಂಡು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಹೇಳುತ್ತಾರೆ, ದೇವರು ತನ್ನ ದಾಸನನ್ನು ಒಬ್ಬಂಟಿಯಾಗಿ ಎಂದಿಗೂ ಬಿಡುವುದಿಲ್ಲ. ಅದರೊಂದಿಗೆ, ನದಿ ಕೊನೆಗೊಳ್ಳುತ್ತದೆ ಮತ್ತು ನಾನು ಇನ್ನೊಂದು ದಡವನ್ನು ತಲುಪುತ್ತೇನೆ. ಅಂತೆಯೇ, ಕನಸಿನಲ್ಲಿ, ಅವರು ನನ್ನನ್ನು ಸಹ ನೋಡಿದರು ಮತ್ತು ನನ್ನನ್ನು ಬಹಳವಾಗಿ ಪ್ರಭಾವಿತೆಯಾದ ಸ್ಥಿತಿಯಲ್ಲಿ ನೋಡಿದರು. ಮತ್ತೊಂದು ಕನಸಿನಲ್ಲಿ, ಅವಳು ಹೇಳುತ್ತಾಳೆ, ನಾನು ನನ್ನ ಅಜ್ಜಿಯನ್ನು ನೋಡಿದೆ, ಅವಳು ನನಗೆ ಹೇಳುತ್ತಿದ್ದಳು, ನೀನು ಇಸ್ಲಾಮಾಬಾದ್‌ಗೆ ಹೋದಾಗ ನನ್ನನ್ನೂ ನೆನಪಿಸಿಕೊಳ್ಳಿ. ಈ ಎಲ್ಲಾ ಕನಸುಗಳು ನನಗೆ ಸ್ಪಷ್ಟ ಸಂಕೇತಗಳಾಗಿವೆ ಎಂದು ಹೇಳುತ್ತಾರೆ. ಆದ್ದರಿಂದ ನಾನು ಬೈಅತ್ ಮಾಡಿದೆ. ಈಗ ಬೆರಳನ್ನು ಹಿಡಿದು ಅಹ್ಮದೀಯತ್ ಕಡೆಗೆ ತರುವುದು ಮತ್ತು ಮನಸ್ಸಿನಲ್ಲಿ ದೃಢವಾದ ನಂಬಿಕೆಯನ್ನು ಸೃಷ್ಟಿಸುವುದು, ಇದು ಸರ್ವಶಕ್ತನಾದ ಅಲ್ಲಾಹನ ಅನುಮೋದನೆಯ ಸಂಕೇತವಲ್ಲವೇ!!

ಅದೇ ರೀತಿ ನೋಡಿ, ಆಫ್ರಿಕಾದಲ್ಲಿ ಒಂದು ದೇಶವಿದೆ, ಅದರ ಒಂದು ಹಳ್ಳಿಯಲ್ಲಿ, ಈ ವ್ಯಕ್ತಿಗೆ ಅಹ್ಮದೀಯತ್ ಅನ್ನು ಸ್ವೀಕರಿಸಲು ಅವಕಾಶ ಮಾಡಿಕೊಟ್ಟ ನಂತರ, ಅಲ್ಲಾಹನು ಹೇಗೆ ಆತನ ವಿಶ್ವಾಸದಲ್ಲಿ ಬಲ ನೀಡಿದನು.

ಬುರ್ಕಿನಾ ಫಾಸೋವಿನ ಡೋರಿ ಎಂಬ ಪ್ರದೇಶದಲ್ಲಿ ಟಾಕಾ ಜಮಾಅತ್‌ನ ಓರ್ವ ಅಹ್ಮದಿ ಯುವಕ ಜಾಬರ್ ಸಾಹಿಬ್ ಹೊಲದಲ್ಲಿ ಕೆಲಸ ಮಾಡುತ್ತಿದ್ದರು. ಭಯೋತ್ಪಾದಕರು ಅವರನ್ನು ಹಿಡಿದು ನಿನ್ನೆ ಮೆಹದಿಯಾಬಾದ್‌ನಲ್ಲಿ ನಾವು ಅಹ್ಮದೀಯರನ್ನು ಕೊಂದಂತೆ ನಿನ್ನನ್ನೂ ಕೊಲ್ಲುತ್ತೇವೆ ಎಂದು ಹೇಳಿದರು. ಅವರ ಮೊಬೈಲ್ ತೆಗೆದುಕೊಂಡು ಪರಿಶೀಲಿಸಿದಾಗ ಜಮಾಅತ್‌ನ ಪ್ರಚಾರಕರ ಭಾಷಣಗಳು ಕಂಡುಬಂದವು. ಭಾಷಣಗಳನ್ನು ಆಲಿಸಿದ ಅವರು, ರೇಡಿಯೊದಲ್ಲಿ ಅಹ್ಮದಿಯತ್‌ನ ಬಗ್ಗೆ ತಬ್ಲೀಗ್ ಮಾಡುತ್ತಿರುವುದರಿಂದ ಅವರೆಲ್ಲರನ್ನೂ ಹುಡುಕುತ್ತಿದ್ದೇವೆ ಎಂದರು. ಹೀಗಾಗಿ ಅಹ್ಮದಿ ಯುವಕನನ್ನು ಅವರ ತಂದೆಯ ವಿಳಾಸವನ್ನು ಕೇಳಿ ಹೇಳಿದರು ನಾಳೆ ನಾವು ನಿಮ್ಮ ಗ್ರಾಮಕ್ಕೆ ಬರುತ್ತೇವೆ. ಈ ವಿಷಯ ತಿಳಿದ ಜಾಬಿರ್ ಸಾಹಿಬ್ ಅವರು ತಮ್ಮ ಮನೆಗೆ ಬಂದು ಅದೇ ರಾತ್ರಿ ತನ್ನ ತಂದೆ ಮತ್ತು ಕುಟುಂಬವನ್ನು ಡೋರಿಯಲ್ಲಿರುವ ಮುಹಮ್ಮದಾಬಾದ್‌ಗೆ ಕರೆದೊಯ್ದರು ಮತ್ತು ಅಲ್ಲಿ ಜಮಾಅತ್‌ನ ಜನಸಂಖ್ಯೆ ಹೆಚ್ಚಾಗಿದೆ ಮತ್ತು ಈಗ ಅವರು ಮನೆ ಮತ್ತು ಸಾಮಾನುಗಳನ್ನು ಎಲ್ಲವನ್ನು ತ್ಯಜಿಸಿದರು. ಮರುದಿನ, ಭಯೋತ್ಪಾದಕರು ಅವರ ಗ್ರಾಮಕ್ಕೆ ಬಂದು ಒಬ್ಬ ವ್ಯಕ್ತಿಯಿಂದ ಬಲವಂತವಾಗಿ ಅವರ ಮನೆಯ ವಿಳಾಸವನ್ನು ಪಡೆದುಕೊಂಡು ಅಲ್ಲಿಗೆ ತಲುಪಿದರು. ಇಡೀ ಮನೆಯನ್ನು ಹುಡುಕಿದರು. ಅವರು ಸಾಮಾನುಗಳನ್ನು ಎತ್ತಿ ಹೊರಗೆ ಎಸೆಯುತ್ತಾ ಇಲ್ಲಿ ಯಾವುದೇ ಅಹ್ಮದಿ ಇದ್ದರೆ ಅವನ್ನು ಕೊಲ್ಲುತ್ತೇವೆ ಎಂದು ಹೇಳುತ್ತಿದ್ದರು. ಆದಾಗ್ಯೂ, ಅವರು ಅಲ್ಲಿಂದ ಬಂದು ಪ್ರಸ್ತುತ ಮೊಹಮ್ಮದಾಬಾದ್‌ನಲ್ಲಿ ಜಮಾಅತ್‌ನ ವ್ಯವಸ್ಥೆಯಲ್ಲಿ ವಾಸಿಸುತ್ತಿದ್ದಾರೆ.

ಬುರ್ಕಿನಾ ಫಾಸೊವಿನ ಹುತಾತ್ಮರು ತಮ್ಮ ಪ್ರಾಣವನ್ನು ನೀಡಿ ಅಲ್ಲಿನ ಅಹ್ಮದಿಯರ ವಿಶ್ವಾಸವನ್ನು ದುರ್ಬಲಗೊಳಿಸಲಿಲ್ಲ, ಬದಲಿಗೆ ಅವರ ನಂಬಿಕೆ ಪ್ರತಿದಿನ ಬಲಗೊಳ್ಳುತ್ತಿದೆ. ಈಗ ಈ ಬಡವರು ತಮ್ಮಲ್ಲಿರುವ ಎಲ್ಲ ಸರಕು ಸಾಮಾನುಗಳನ್ನು, ತಮ್ಮ ಮನೆಯಲ್ಲಿರುವ ಗೃಹೋಪಯೋಗಿ ವಸ್ತುಗಳು ಮತ್ತು ಅವರು ಅವಲಂಬಿಸಿರುವ ಜೀವನೋಪಾಯವನ್ನು ತ್ಯಜಿಸಿದರು, ಆದರೆ ಅವರು ತಮ್ಮ ನಂಬಿಕೆಯನ್ನು ಬಿಡಲಿಲ್ಲ. ಈ ಜನರು ಅಹ್ಮದಿಯತ್ ಅನ್ನು ಸ್ವೀಕರಿಸಿ ಕೆಲವು ವರ್ಷಗಳು ಕಳೆದಿವೆ ಅಷ್ಟೆ, ಆದರೆ ಅವರು ನಂಬಿಕೆಯುಲ್ಲಿ ಮುನ್ನಡೆಯುತ್ತಿದ್ದಾರೆ. ಹೀಗೆ ಸರ್ವಶಕ್ತನಾದ ಅಲ್ಲಾಹನ ಹೊರತು ಅವರ ನಂಬಿಕೆಯನ್ನು ದೃಢಗೊಳಿಸುತ್ತಿರುವ ಬೇರೆ ಯಾವ ಅಸ್ತಿತ್ವವೂ ಇಲ್ಲ.

ಒಂದೆಡೆ, ಅಹ್ಮದಿಯರ ವಿರೋಧದ ಹೊರತಾಗಿಯೂ ನಾವು ದೃಢವಿಶ್ವಾಸದ ದರ್ಶನಗಳನ್ನು ನೋಡುತ್ತಿದ್ದೇವೆ ಮತ್ತು ಮತ್ತೊಂದೆಡೆ, ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮೇಲೆ ವಿಶ್ವಾಸ ಹೊಂದಲು ಜನರ ಮನಸ್ಸುಗಳನ್ನು ಹೇಗೆ ತೆರೆಯುತ್ತಾನೆ ಎಂಬುದನ್ನು ನಾವು ಆಗಾಗ್ಗೆ ನೋಡುತ್ತೇವೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಇದು ಹುಡುಕಾಡುವ ಸಮಯವಾಗಿದೆ ಸರ್ವಶಕ್ತನಾದ ಅಲ್ಲಾಹನು ಸಹ ಇದಕ್ಕೆ ಸಹಾಯ ಮಾಡುತ್ತಾನೆ.

ಯಾಲೋಕೆ ಮಧ್ಯ ಆಫ್ರಿಕಾದ ಒಂದು ಸ್ಥಳವಾಗಿದೆ. ಅಲ್ಲಿ, ನಾವು ತಬ್ಲೀಗ್ ಮಾಡಲು ಹೋಗಿದ್ದೆವು ಎಂದು ಅಲ್ಲಿನ ಮುಅಲ್ಲಿಮ್ ಸಾಹಿಬರು ಹೇಳುತ್ತಾರೆ, ಆಗ ಅಲ್ಲಿ ಒಂದೂವರೆ ನೂರು ಜನರು ಉಪದೇಶವನ್ನು ಕೇಳಲು ನೆರೆದರು. ಅವರು ಹೇಳುತ್ತಾರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಆಗಮನದ ಸೂಚನೆಗಳ ಕುರಿತು ನಾನು ಭಾಷಣ ಮಾಡಿದ ನಂತರ ಪ್ರಶ್ನೆಗಳು ಮತ್ತು ಉತ್ತರಗಳು ಇದ್ದವು. ಅಲ್ಲಿನ ಕೇಂದ್ರ ಇಮಾಮ್ ಸಮಾಸಾ ಉಮರ್ ಸಾಹಿಬ್ ಮಾತನಾಡಲು ಅನುಮತಿ ಕೇಳಿದರು ಮತ್ತು ಆಯತ್‌ದೊಂದಿಗೆ ತಮ್ಮ ಭಾಷಣವನ್ನು ಪ್ರಾರಂಭಿಸಿದರು: **ಜಾಅಲ್ ಹಖ್ಖು ವಝಹಖಲ್‌ಬಾತಿಲ್ ಇನ್ನಲ್ ಬಾತಿಲ ಕಾನ ಝಹೂಖಾ** (ಬನೀ ಇಸ್ರಾಈಲ್: 82) ಸತ್ಯ ಆಗಮಿಸಿತು

ಮತ್ತು ಸುಳ್ಳು ಅಳಿದು ಹೋಯಿತು. ನೂವು ಹೇಳಿದ ಸಂದೇಶವನ್ನು ನಾವು ಎಂದಿಗೂ ಕೇಳಲಿಲ್ಲ ಮತ್ತು ಸಂಶೋಧನೆ ಮಾಡಿಲಿಲ್ಲ. ಅಲ್‌ಹಮ್‌ದುಲಿಲ್ಲಾಹ್ ಇಂದು ನಮ್ಮ ಗ್ರಾಮಕ್ಕೆ ಸತ್ಯ ಬಂದಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಇಮಾಮ್ ಮಹದಿ ಅಲೈಹಿಸ್ಸಲಾಮ್ ಆಗಮಿಸಿದಾಗ ಅವರನ್ನು ತಕ್ಷಣ ಸ್ವೀಕರಿಸಬೇಕು ಎಂದು ಹೇಳಿದ್ದರು ಆದ್ದರಿಂದ ಇಂದು ನಾನು ಸ್ವತಃ ಮತ್ತು ನನ್ನೊಂದಿಗೆ ನನ್ನ ನಲವತ್ತು ಸ್ನೇಹಿತರು ಅಹ್ಮದಿಯಾ ಮುಸ್ಲಿಮ್ ಜಮಾಅತ್‌ಗೆ ಸೇರುತ್ತೇವೆ. ಮುಂದೆ ಹೇಳುತ್ತಾರೆ ಅಲ್ಲಾಹನು ನಮಗೆ ಸಯ್ಯದ ಮೇಲೆ ನೆಲೆನಿಲ್ಲಲು ತೌಫೀಖ್ ನೀಡಲಿ. ಹೀಗೆ ಜನರು ಸೇರುತ್ತಿದ್ದಾರೆ.

ಮತ್ತೆ ಸರ್ವಶಕ್ತನಾದ ಅಲ್ಲಾಹನು ಹೇಗೆ ವಿರೋಧಿಗಳನ್ನು ಜಮಾಅತ್‌ನತ್ತ ಸೆಳೆಯುತ್ತಾನೆ ಎಂಬುದಕ್ಕೆ ಲೆಕ್ಕವಿಲ್ಲದಷ್ಟು ಘಟನೆಗಳಿವೆ.

ಮಾಲಿಯ ಕೋಲಿ–ಕೋರು ಪ್ರದೇಶವಿದೆ, ಅಲ್ಲಿ ನಮ್ಮನ್ನ ಎಂಬ ಸ್ಥಳವಿದೆ. ಈ ವರ್ಷ ಕೋಲಿ ಕುರು ಜಮಾಅತ್ ತನ್ನ ಪ್ರಾದೇಶಿಕ ಜಲ್ಸವನ್ನು ಅಲ್ಲಿ ನಡೆಸಿದೆ ಎಂದು ಹೇಳಲಾಗುತ್ತದೆ, ಅದಕ್ಕೂ ಮೊದಲು ರೇಡಿಯೊದಲ್ಲಿ ಘೋಷಣೆಗಳನ್ನು ಮಾಡಲಾಯಿತು. ಈ ಹಳ್ಳಿಯ ದೂರದ ಕಾರಣ, ಕೆಲವೊಮ್ಮೆ ಇಲ್ಲಿ ರೇಡಿಯೋ ಕೇಳುತ್ತದೆ ಮತ್ತು ಕೆಲವೊಮ್ಮೆ ಇಲ್ಲ, ಆದರೆ ಆ ದಿನಗಳಲ್ಲಿ ರೇಡಿಯೋ ಅಲ್ಲಿ ಕೇಳುತ್ತಿತ್ತು ಮತ್ತು ಅಹ್ಮದೀಯರಲ್ಲದ ಸ್ನೇಹಿತ ಸಿದ್ದೀಕ್ ಜಾರಾ ಸಾಹಿಬ್ ಅದನ್ನು ಕೇಳಿದ ನಂತರ ಜಲ್ಸಾದಲ್ಲಿ ಭಾಗವಹಿಸಲು ನಿರ್ಧರಿಸಿದರು. ಅವರೊಂದಿಗೆ ಇನ್ನೊಬ್ಬ ಸ್ನೇಹಿತನಿದ್ದನು, ಅವರು ಅಹ್ಮದೀಯರ ಬೋಧನೆಗಳನ್ನು ಕೇಳದಂತೆ ಮನವೊಲಿಸುತ್ತಿದ್ದನು. ಅಹ್ಮದೀಯರ ಮಾತನ್ನು ಕೇಳಬೇಡಿ, ಅವರು ನಾಸ್ತಿಕರು ಎಂದು ಹೇಳುತ್ತಿದ್ದನು, ಹೇಗಾದರೂ, ಅವರ ಒತ್ತಾಯದ ಮೇರೆಗೆ ಈ ಇಬ್ಬರು ಸ್ನೇಹಿತರು ಜಲ್ಸಾಗೆ ಎಂಭತ್ತು ಕಿಲೋಮೀಟರ್ ದೂರವನ್ನು ಕಷ್ಟಪಟ್ಟು ಆಗಮಿಸಿದರು. ರಸ್ತೆಗಳಂತು ಅಲ್ಲಿ ಇಲ್ಲ. ಆದರೆ, ಜಲ್ಸಾದ ಎರಡು ದಿನಗಳ ಮುಂಚಿತವಾಗಿ ಜಲ್ಸ ನಡೆಯುವ ಸ್ಥಳಕ್ಕೆ ಬಂದರು. ಸ್ಥಳೀಯ ಅಧ್ಯಕ್ಷರು ಹಾಗೂ ಜಮಾಅತ್‌ನ ಸ್ನೇಹಿತರು ಆತಿಥ್ಯ ನೀಡಿದರು. ಜಲ್ಸಾಗೆ ಮುಂಚೆಯೇ ಅಹ್ಮದಿಯತ್ ಬಗ್ಗೆ ಅವರನ್ನು ಪರಿಚಯಿಸಲಾಯಿತು. ಜಲ್ಸಾದ ದಿನಗಳಲ್ಲಿ ಭಾಷಣಗಳನ್ನು ಕೇಳುತ್ತಿದ್ದರು. ಜಮಾಅತ್ ವತಿಯಿಂದ ತಹಜ್ಜುದ್ ನಮಾಝ್ ಹಾಗೂ ಜಮಾಅತ್ ಸದಸ್ಯರ ಪ್ರೀತಿ, ಪ್ರಾಮಾಣಿಕತೆಯನ್ನು ಕಂಡು ಅವರು ತುಂಬಾ ಪ್ರಭಾವಿತರಾದರು. ಜಲ್ಸದ ಕೊನೆಯ ದಿನದಂದು, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವರನ್ನು ಅತಿಥಿಯಾಗಿ ಕರೆದಾಗ, ಅವರು ಇಡೀ ಘಟನೆಯನ್ನು ವಿವರಿಸಿದರು ಮತ್ತು ಅಹ್ಮದಿಯತ್ ಅನ್ನು ಸ್ವೀಕರಿಸುವುದಾಗಿ ಘೋಷಿಸಿದರು. ತದನಂತರ, ಅವರ ಸ್ನೇಹಿತರು ಏನೋ ಹೇಳಲು ಬಯಸಿದ್ದರು ಅವರು ಹೇಳಿದರು ವಾಸ್ತವವಾಗಿ ನಾನು ನನ್ನ ಸ್ನೇಹಿತನನ್ನು ಅಪನಂಬಿಸುವುದಕ್ಕೆ ಬಂದಿದ್ದೆ ಆದರೆ ಈಗ ನನಗೆ ಅಹ್ಮದಿಯತ್‌ನ ಬಗ್ಗೆ ಮನವರಿಕೆಯಾಯಿತು ಮತ್ತು ಅವರು ಸಹ ಅಹ್ಮದಿಯತ್ ಅನ್ನು ಒಪ್ಪಿಕೊಂಡರು.

ಕಾಂಗೋ ಬ್ರಜಾವಿಲ್ ಕೂಡ ಆಫ್ರಿಕಾದ ಒಂದು ದೇಶವಾಗಿದೆ. ಓರ್ವ ಯುವಕ ಸಿರಿಲ್ ಸಾಹಿಬ್ ತನ್ನ ಎಫ್.ಎ ವಿನ ಹೈಯರ್ ಸೆಕೆಂಡರಿ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿದನು ಮತ್ತು ಹಳ್ಳಿಯ ಕ್ಯಾಥೋಲಿಕ್ ಮಿಷನರಿಯಿಂದ ಕ್ರಿಶ್ಚಿಯನ್ ಧರ್ಮವನ್ನು ಕಲಿಯಲು ಪ್ರಾರಂಭಿಸಿದನು ಮತ್ತು ಈ ಮಿಷನರಿ ಶಿಕ್ಷಣದ ನಂತರ ಅವನು ಚರ್ಚ್ ಮೂಲಕ ವಿಶ್ವವಿದ್ಯಾಲಯಕ್ಕೆ ಹೋದನು. ಈ ಸಮಯದಲ್ಲಿ ಅವರು ನಮ್ಮ ಸ್ಥಳೀಯ ಮುಲ್ಲಿಗ್‌ರೊಂದಿಗೆ ಸಂಪರ್ಕಕ್ಕೆ ಬಂದರು. ಅವರು ಹೇಳುತ್ತಾರೆ ನಾವು ಅವನನ್ನು ಉಪದೇಶಿಸಲು ಪ್ರಾರಂಭಿಸಿದೆವು. ಅಹ್ಮದಿಯಾ ಜಮಾಅತ್‌ನ ವಾದಗಳಿಗೆ ಅವರ ಬಳಿಯಾಗಲಿ ಅಥವಾ ಅವರ ಶಿಕ್ಷಕ–ಮಿಷನರಿಯ ಬಳಿಯಾಗಲಿ ಯಾವುದೇ ಉತ್ತರವಿಲ್ಲ ಎಂದು ಅವರು ನೋಡಿದರು. ಹೀಗಾಗಿ, ಅವರು ಕ್ರಿಶ್ಚಿಯನ್ ಮಿಷನರಿಯಾಗದೆ, ಬೈಅತ್ ಮಾಡಿದರು ಮತ್ತು ಅಹ್ಮದೀಯ ಸಮುದಾಯವನ್ನು ಸೇರಿಕೊಂಡರು ಮತ್ತು ಈಗ ಅಹ್ಮದಿಯತ್ ಅನ್ನು ದಾಇಇಲಲ್ಲಾಹ್ ಆಗಿ ಬೋಧಿಸುತ್ತಿದ್ದಾರೆ.

ಸೆನೆಗಲ್‌ನ ಪ್ರದೇಶವು ತಂಬಾ–ಕೊಂಡ ಎಂದಾಗಿದೆ. ಅಲ್ಲಿನ ಒಂದು ಪ್ರದೇಶದಲ್ಲಿ ತಬ್ಲೀಗ್‌ನ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕೆಲವು ವರ್ಷಗಳ ಹಿಂದೆ ಒಬ್ಬ ವ್ಯಕ್ತಿ ತನ್ನ ಹೆಂಡತಿ ಮತ್ತು ಮಕ್ಕಳೊಂದಿಗೆ ಅಹ್ಮದಿಯತ್ ಅನ್ನು ಒಪ್ಪಿಕೊಂಡರು, ಆದರೆ ಗ್ರಾಮದ ಜನರು ಅವರನ್ನು ವಿರೋಧಿಸುತ್ತಿದ್ದರು. ಈ ವರ್ಷ, ಗ್ರಾಮದ ಮುಖ್ಯಸ್ಥ ಮತ್ತು ಇಮಾಮ್‌ರನ್ನು ಪದೇ ಪದೇ ಭೇಟಿ ಮಾಡಿ ತಬ್ಲೀಗ್‌ನ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸಾಮಾನ್ಯ ಜನರಿಗೆ ಸುತ್ತಮುತ್ತಲಿನ ಗ್ರಾಮಗಳ ಮುಖ್ಯಸ್ಥರು ಮತ್ತು ಇಮಾಮ್‌ಗಳನ್ನು ಸಹ ಆಹ್ವಾನಿಸಲಾಯಿತು. ಮಸೀಹ್ ಮೌಊದ್‌ನ ಆಗಮನ ಕುರಿತು ಮತ್ತು ಇಸ್ಲಾಂ ಧರ್ಮದ ಬೆಳವಣಿಗೆಯಲ್ಲಿ ಅಹ್ಮದೀಯ ಸಮುದಾಯದ ಪಾತ್ರದ ಕುರಿತು ಭಾಷಣಗಳನ್ನು ನೀಡಿದರು. ಬಳಿಕ ಪ್ರಶ್ನೋತ್ತರ ಕಾರ್ಯಕ್ರಮ ನಡೆಯಿತು. ನೆರೆಯ ಗ್ರಾಮದಿಂದ ಆಗಮಿಸಿದ ಜನರು ಹೇಳಿದರು ಗ್ಯಾಂಬಿಯಾದಲ್ಲಿ ಅಹ್ಮದಿಯಾ ಎಂಬ ಹೆಸರನ್ನು ಕೇಳಿದ್ದೇವೆ ಆದರೆ ಅವರ ನಂಬಿಕೆಗಳು ಇತ್ಯಾದಿಗಳ ಬಗ್ಗೆ ತಿಳಿದಿರಲಿಲ್ಲ. ಇಂದು, ಈ ಜಲ್ಸದಲ್ಲಿ ಜಮಾಅತ್ ನ ನಂಬಿಕೆಗಳ ಬಗ್ಗೆ ವಿವರಣೆಯನ್ನು ಕೇಳಿದ ನಂತರ, ಯಾವುದೇ ಪ್ರಶ್ನೆಯಿಲ್ಲದೆ, ಅವರು ಅಹ್ಮದಿಯತ್‌ಗೆ ಸೇರುವುದಾಗಿ ಘೋಷಿಸಿದರು. ನಂತರ ಗ್ರಾಮದ ಇಮಾಮ್ ಎದ್ದು ನಿಂತು ಅಹ್ಮದುಯ್ಯತ್‌ನ ಸತ್ಯವನ್ನು ಸಾರಿದರು. ಅವರ ಗ್ರಾಮದ ಮುಖ್ಯಸ್ಥರು ತಮ್ಮ ಕುಟುಂಬದೊಂದಿಗೆ ಅಹ್ಮದಿಯತ್‌ನಲ್ಲಿ ಸೇರಲು ಘೋಷಿಸಿದರು. ಮತ್ತು ಎಲ್ಲ ಹಾಜರಿದ್ದವರಲ್ಲಿ ಯಾರಿಗಾದರೂ ಸಂದೇಹವಿದ್ದರೆ ಅದನ್ನು ಇಲ್ಲಿ ಹೇಳಬೇಕು ಇಲ್ಲದಿದ್ದರೆ ನಂತರ ಯಾವ ನೆಪವಿರುವುದಿಲ್ಲ ಎಂದು ಃಏಳಿದರು. ತದನಂತರ ಅವರ ಕುಟುಂಬಗಳೊಂದಿಗೆ ಹಾಜರಿದ್ದವರೆಲ್ಲರೂ ಅಹ್ಮದಿಯಾ ಜಮಾಅತ್ ಅನ್ನು ಪ್ರವೇಶಿಸಲು ಘೋಷಿಸಿದರು. ಈ ರೀತಿಯಾಗಿ, ಸರ್ವಶಕ್ತನಾದ ಅಲ್ಲಾಹನು ಹಿಡಿದು ಹಿಡಿದು ಜನರನ್ನು ತರುತ್ತಾನೆ.

ಉಜ್ಬೇಕಿಸ್ತಾನ್ ರಷ್ಯಾದ ರಾಜ್ಯಗಳಲ್ಲಿ ಒಂದಾಗಿದೆ. ಅಲ್ಲಿ ಮುಸ್ಲಿಮೂ ಮನ್ಸೂರ್ ಸಾಹಿಬ್ ನವ ಅಹ್ಮದಿ ಇದ್ದಾರೆ. ಅವರು ಹೇಳುತ್ತಾರೆ: ನಾನು ಇಮಾಮ್ ಅಬು ಹನೀಫಾ ಅವರ ಧರ್ಮಕ್ಕೆ ಸೇರಿದ್ದೆ. ಒಂದು ದಿನ ನನ್ನ ಸ್ನೇಹಿತ ನನ್ನನ್ನು ಅರೇಬಿಕ್ ಕಲಿಯಲು ಅಹ್ಮದಿ ಮುಅಲ್ಲಿಮ್‌ರ ಬಳಿಗೆ ಕರೆದೊಯ್ದನು. ಅರೇಬಿಕ್ ಕಲಿಯುವುದರ ಜೊತೆಗೆ ನಾನು ನನ್ನ ಮುಅಲ್ಲಿಮ್ ಸಾಹಿಬರಿಗೆ ಇಸ್ಲಾಂ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿದ್ದೆ. ನನ್ನ ಮನಸ್ಸಿಗೆ ತೃಪ್ತಿಯಾಗುವಷ್ಟು ಒಳ್ಳೆಯ ಉತ್ತರಗಳನ್ನು ನಾನು ಪಡೆದುಕೊಂಡೆ.

ನಾವು ಸರಿಯಾದ ಉತ್ತರಗಳನ್ನು ಪಡೆಯಲು ಬಯಸಿದ್ದಲ್ಲಿ, ಮನಸ್ಸನ್ನು ಸ್ಪರ್ಶಿಸುವ ತಾರ್ಕಿಕ ಉತ್ತರಗಳಿವೆ ಮತ್ತು ವಾಸ್ತವವಿದ್ದರೂ ಅವು ಅಹ್ಮದಿಯಾ ಸಮುದಾಯದಲ್ಲಿ ಹೊರತುಪಡಿಸಿ ಬೇರೆಲ್ಲಿಯೂ ಕಂಡುಬರುವುದಿಲ್ಲ, ಏಕೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನಮಗೆ ಈ ಉತ್ತರಗಳನ್ನು ನೀಡಿದ್ದಾರೆ ಮತ್ತು ಅವುಗಳನ್ನು ವಿವರಿಸಿದ್ದಾರೆ.

ಅವರು ಹೇಳುತ್ತಾರೆ: ನಾನು ಅವರನ್ನು ಈ ಉತ್ತರಗಳ ಮೂಲ ಮೂಲಗಳು ಎಲ್ಲಿವೆ? ಈ ಕಾರಂಜಿ ಎಲ್ಲಿಗೆ ಸೇರಿದೆ? ಮೂಲ ಎಲ್ಲಿ ಸಿಗುತ್ತದೆ? ಎಂದು ಕೇಳಿದಾಗ ನಮ್ಮ ಶಿಕ್ಷಕರು ನಮಗೆ ಜಮಾಅತ್ ಅಹ್ಮದಿಯಾವನ್ನು ಪರಿಚಯಿಸಿದರು. ಅವರು ಹೇಳುತ್ತಾರೆ ನನ್ನ ಮನಸ್ಸು ಈಗಾಗಲೇ ತೃಪ್ತಿಗೊಂಡಿದೆ. ಆದ್ದರಿಂದ ನಾನು ಬೈಅತ್ ಮಾಡಿ ಜಮಾಅತ್‌ಗೆ ಸೇರಿಕೊಂಡೆ. ಅಲ್ಲಾಹನು ನನ್ನನ್ನು ಈ ಹಾದಿಯಲ್ಲಿ ದೃಢವಾಗಿರಿಸಲಿ ಎಂದು ನನಗಾಗಿ ಪ್ರಾರ್ಥಿಸಿರಿ.

ಸರ್ವಶಕ್ತನಾದ ಅಲ್ಲಾಹನು ಜನರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾವ್ ಅವರ ಸತ್ಯವನ್ನು ಸಾಬೀತುಪಡಿಸುವುದಲ್ಲದೆ, ಖಿಲಾಫತೆ ಅಹ್ಮದಿಯ್ಯತ್‌ನ ವ್ಯವಸ್ಥೆಯೊಂದಿಗೆ ತನ್ನ ಅನುಮೋದನೆಗಳ ದರ್ಶನಗಳನ್ನು ತೋರಿಸುತ್ತಾನೆ ಮತ್ತು ಕನಸಿನ ಮೂಲಕ ಮುಂಚಿತವಾಗಿ ಅವುಗಳನ್ನು ಬಲಪಡಿಸುತ್ತಾನೆ.

ಸೆನೆಗಲ್‌ನ ತಾಂಬಾ ಕೊಂಡ ಎಂಬ ಪ್ರದೇಶವಿದೆ. ಅಲ್ಲಿನ ಮುಅಲ್ಲಿಮ್ ಸಾಹೇಬರು ತಬ್ಲೀಗಿ (ಉಪದೇಶದ) ಪ್ರವಾಸಕ್ಕೆ ಹೋದರು. ಅವರು ಹೇಳುತ್ತಾರೆ: ಮುಅಲ್ಲಿಮೀನರು ಇಲ್ಲಿ ತಬ್ಲೀಗ್ ಮಾಡಲು ಪ್ರಾರಂಭಿಸಿದರು, ಅವರು ಜಮಾಅತ್ ಅನ್ನು ಪರಿಚಯಿಸಿದಾಗ, ಸ್ನೇಹಿತ ಮುಹಮ್ಮದ್ ಜಯಲೋ ಹೇಳಿದರು, ನೀವು ಅಹ್ಮದಿಯಾ ಜಮಾಅತ್‌ನವರೇ? ಅದಕ್ಕೆ ಮುಅಲ್ಲಿಮ್ ಸಾಹೇಬರು ಸಕಾರಾತ್ಮಕವಾಗಿ ಉತ್ತರಿಸಿದಾಗ, ಜಯಲೋ ಸಾಹಿಬ್ ಹೇಳಿದರು, ನಾನು ನಿನ್ನೆ ಕನಸಿನಲ್ಲಿ ಒಬ್ಬ ವ್ಯಕ್ತಿ ತನ್ನ ಬಳಿಗೆ ಬಂದು ಇಸ್ಲಾಂನ ಎಲ್ಲಾ ಪಂಗಡಗಳಲ್ಲಿ, ಅಹ್ಮದೀಯ ಪಂಥವು ನಿಜವಾದ ಪಂಥವಾಗಿದೆ ಮತ್ತು ಸರಿಯಾದ ಇಸ್ಲಾಂ ಧರ್ಮದ ಪ್ರತಿನಿಧಿಯಾಗಿದೆ ಆದ್ದರಿಂದ ನೀವು ಅದರಲ್ಲಿ ಸೇರಿಕೊಳ್ಳಿ ಎಂದು ಹೇಳಿದನೆಂದು ಹೇಳಿದರು. ಈಗ, ಮರುದಿನವೇ ನೀವು ಬಂದಿದ್ದೀರಿ, ಆದ್ದರಿಂದ ಹೇಗಾದರೂ ಅದರಲ್ಲಿ ಸ್ವಲ್ಪ ಸತ್ಯ ಇರಬೇಕು. ಮುಅಲ್ಲಿಮರು ತಮ್ಮ ಮೊಬೈಲ್ ಫೋನ್‌ನಿಂದ ಖಲೀಫರ ಚಿತ್ರಗಳನ್ನು ತೋರಿಸಿದರು. ನನ್ನ ಚಿತ್ರವನ್ನೂ ಸಹ ಅವರಿಗೆ ತೋರಿಸಿದರು ಅವರು ನನ್ನ ಚಿತ್ರವನ್ನು ನೋಡಿದ ನಂತರ ಇವರು ನನ್ನ ಕನಸಿನಲ್ಲಿ ಕಾಣಿಸಿಕೊಂಡ ವ್ಯಕ್ತಿಯಾಗಿದ್ದಾರೆ ಎಂದು ಹೇಳಿದರು ಮತ್ತು ನಾನು ಅಹ್ಮದಿಯಾ ಜಮಾಅತ್‌ನ ಖಲೀಫಾ ಆಗಿದ್ದಾರೆ ಎಂದು ಹೇಳಿದರು. ಈ ಘಟನೆಯನ್ನು ವಿವರಿಸಿದ ನಂತರ ಅವರ ಕಣ್ಣುಗಳು ತೇವಗೊಂಡವು ಮತ್ತು ಅಲ್ಲಿಯೇ ಅವರ ಕುಟುಂಬದೊಂದಿಗೆ, ಅವರು ತುಂಬಾ ಭಾವುಕರಾದರು ಮತ್ತು ಅಹ್ಮದಿಯತ್‌ಗೆ ಪ್ರವೇಶವನ್ನು ಘೋಷಿಸಿದರು. ಈಗ ಅವರೂ ಸಹ ತಬ್ಲೀಗ್ ಮಾಡುತ್ತಿದ್ದಾರೆ.

ನಂತರ ಕನಸಿನ ಮೂಲಕ ಅಹ್ಮದಿಯತ್ ಅನ್ನು ಸ್ವೀಕರಿಸುವ ಮತ್ತೊಂದು ಘಟನೆ ಇದೆ. ಕಾಂಗೋ ಕಿನ್ಶಾಸಾ ಸಂಪೂರ್ಣವಾಗಿ ವಿಭಿನ್ನ ದೇಶವಾಗಿದೆ ಮತ್ತು ನೂರಾರು ಮೈಲುಗಳಷ್ಟು ದೂರದಲ್ಲಿದೆ. ಬಾಸಿಂ ಮುನೀರ್ ಸಾಹಿಬ್ ಅಲ್ಲಿನ ಒಂದು ಜಾದಗ ಅಧ್ಯಕ್ಷರಾಗಿದ್ದಾರೆ. ಅವರು ಕ್ರಿಶ್ಚಿಯನ್ ಧರ್ಮದಿಂದ ಅಹ್ಮದಿಯಾಗಿದ್ದರು. ಅವರು ಹೇಳುತ್ತಾರೆ:·ಇಲ್ಲಿಗೆ ಜಮಾಅತ್ ನ ಪ್ರಚಾರಕರು ಧರ್ಮಪ್ರಚಾರ ಮಾಡಲು ಬಂದಾಗ ನಾನು ಇಸ್ಲಾಂ ಧರ್ಮವನ್ನು ಭಯೋತ್ಪಾದಕ ಧರ್ಮ ಎಂದು ಪರಿಗಣಿಸಿದ್ದೆ. ಇದು ಇಸ್ಲಾಂ ಧರ್ಮದ ಬಗ್ಗೆ ಮುಸ್ಲಿಮೇತರರ ಪ್ರಚಾರವೂ ಆಗಿದೆ. ಆದರೆ ಅಹ್ಮದಿ ಬೋಧಕರು ಮಾತನಾಡುತ್ತಿದ್ದ ಇಸ್ಲಾಂ ನನಗೆ ವಿಚಿತ್ರವಾಗಿತ್ತು ಮತ್ತು ನಾನು ಈಗಾಗಲೇ ಕ್ರಿಶ್ಚಿಯನ್ ಧರ್ಮದಿಂದ ಬೇಸತ್ತಿದ್ದೆ. ಇದನ್ನೆಲ್ಲಾ ನೋಡಿ ನನಗೆ ತುಂಬಾ ಚಿಂತೆಯಾಯಿತು. ಹಾಗಾಗಿ ನಾನು ಪ್ರಾರ್ಥಿಸಲು ಪ್ರಾರಂಭಿಸಿದೆ. ಅಷ್ಟರಲ್ಲಿ ಒಂದು ರಾತ್ರಿ ಕನಸಿನಲ್ಲಿ ಒಬ್ಬ ಮುದುಕ ವ್ಯಕ್ತಿ ಬಂದು ಇವರನ್ನು ಬಿಟ್ಟು ಈ ಕಡೆ ಬಾ ಎಂದು ಹೇಳಿದನು. ನೀವು ಕ್ರಿಶ್ಚಿಯನ್ ಧರ್ಮವನ್ನು ತ್ಯಜಿಸಿ ಅಹ್ಮದಿಯತ್‌ನ ಕಡೆಗೆ ಬನ್ನಿ ಎಂದು ಸರ್ವಶಕ್ತನಾದ ಅಲ್ಲಾಹನು ನನಗೆ ಸಂಕೇತಿಸಿದನು. ಹಾಗಾಗಿ ನಾನು ಬೈಅತ್ ಮಾಡಿ ಅಹ್ಮದಿಯತ್ ಜಮಾಅತ್ತಿನಲ್ಲಿ ಸೇರಿಕೊಂಡೆ.

ಚಾಡ್ ಆಫ್ರಿಕಾದ ಮತ್ತೊಂದು ದೇಶವಾಗಿದೆ ಮತ್ತು ಇಲ್ಲಿ ಮತ್ತೊಂದು ಘಟನೆಯಿದೆ. ಅರಬ್ ಬುಡಕಟ್ಟಿಗೆ ಸೇರಿದ ಅಬ್ದುಲ್ಲಾ ಮುಹಮ್ಮದ್ ಮೂಸಾ ಎಂಬವರಿದ್ದಾರೆ. ನಮ್ಮ ಇಲ್ಲಿನ ಮುಬಲ್ಲಿಗ್ ಇಂಚಾರ್ಜ್ ಸಾಹಿಬ್ ಬರೆಯುತ್ತಾರೆ, ಕೆಲವು ತಿಂಗಳ ಹಿಂದೆ ನಮ್ಮ ಸ್ಥಳೀಯ ಮುಅಲ್ಲಿಮರು ಅವರನ್ನು ಭೇಟಿಯಾದರು. ಹ್ಯುಮಾನಿಟಿ ಫಸ್ಟ್ ಕಾರ್ಯಕ್ಕೆ ಸಂಬಂಧಿಸಿದಂತೆ ಮುಅಲ್ಲಿಮ್ ಸಾಹಿಬ್ ಕೂಡ

ತಮ್ಮ ಪ್ರದೇಶಕ್ಕೆ ಹೋಗಿದ್ದರು. ಮುಅಲ್ಲಿಮರು ಎರಡನೇ ಬಾರಿಗೆ ಅವರ ಪ್ರದೇಶಕ್ಕೆ ಹೋದಾಗ, ಅವರು ಅರೇಬಿಕ್ ಭಾಷಾಂತರದಲ್ಲಿದ್ದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಇಸ್ಲಾಮ್ ಧರ್ಮದ ತತ್ವಜ್ಞಾನ ಎಂಬ ಪುಸ್ತಕವನ್ನು ನೀಡಿದರು. ಕೆಲವು ವಾರಗಳ ನಂತರ ಅಬ್ದುಲ್ಲಾ ಸಾಹಿಬ್ ರಾಜಧಾನಿ ಚಾಡ್‌ಗೆ ಬಂದು ಮುಅಲ್ಲಿಮ್‌ರನ್ನು ಸಂಪರ್ಕಿಸಿ ಕ್ರಿಸ್ತನ ಮರಣದ ಬಗ್ಗೆ ಪ್ರಶ್ನೆಗಳನ್ನು ಕೇಳಿದರು ಮತ್ತು ನಾನು ಕ್ರಿಸ್ತನ ಜೀವನದ ಬಗ್ಗೆ ಅನೇಕ ವಿದ್ವಾಂಸರನ್ನು ಕೇಳಿದ್ದೇನೆ ಆದರೆ ಯಾರೂ ತೃಪ್ತಿಕರ ಉತ್ತರವನ್ನು ನೀಡಲಿಲ್ಲ ಎಂದು ಹೇಳಿದರು. ರಾತ್ರಿ ಮುಅಲ್ಲಿಮ್ ಸಾಹಿಬರ ಜಾಗದಲ್ಲಿಯೇ ಅವರು ತಂಗಿದ್ದರು. ರಾತ್ರಿಯಿಡೀ, ಅವರು ಅಹ್ಮದೀಯ ಜಮಾಅತ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿದ್ದರು ಮತ್ತು ನನಗೆ ಮಾರ್ಗದರ್ಶನ ನೀಡುವಂತೆ ನಾನು ಸರ್ವಶಕ್ತನಾದ ಅಲ್ಲಾಹನನ್ನು ಪ್ರಾರ್ಥಿಸುತ್ತೇನೆ ಎಂದು ಹೇಳಿದರು. ಫಜ್ರ್ ನಮಾಝಿನ ನಂತರ ಸ್ವಲ್ಪ ಹೊತ್ತು ಮಲಗಿದ ಅವರು ಇದ್ದಕ್ಕಿದ್ದಂತೆ ಎಚ್ಚರಗೊಂಡು ಮುಅಲ್ಲಿಮ್ ಸಾಹಿಬರಿಗೆ ಹೇಳಿದರು, ನಾನು ಮಲಗಿರುವಾಗ ನನ್ನ ಕನಸಿನಲ್ಲಿ ಈ ಧ್ವನಿ ಕೇಳಿದೆ. **ಯಾತೀ ಮಿಮ್ ಬಅ್‌ದಿಸ್‌ಮುಹೂ ಅಹ್ಮದು** (ಅಸ್ಸಫ್: 7) ಅದಕ್ಕೆ ಮುಅಲ್ಲಿಮ್ ಸಾಹಿಬ್ ಅವರು ಈ ಆಯತ್ ಬಗ್ಗೆ ಇದರಲ್ಲಿ ಅಹ್ಮದಿಯಾ ಜಮಾಅತ್‌ನ ಸಂಸ್ಥಾಪಕನ ಸತ್ಯಾಸತ್ಯತೆಯ ಪುರಾವೆಯೂ ಆಗಿದೆ ಎಂದು ಹೇಳಿದಾಗ, ಅಬ್ದುಲ್ಲಾ ಸಾಹಿಬ್ ಹೇಳಿದರು, ಸರ್ವಶಕ್ತನಾದ ಅಲ್ಲಾಹನು ನನಗೆ ಮಾರ್ಗದರ್ಶನ ನೀಡಿದ್ದಾನೆ. ಅವರು ಅರೇಬಿಕ್ ಭಾಷೆ ಬಲ್ಲವರಾಗಿದ್ದರು. ಆದಾಗೊ, ಈ ಆಯತ್‌ಗೆ ಇನ್ನೊಂದು ಅರ್ಥವೂ ಇದೆ ಎಂದು ಹೇಳಿದಕ್ಕೆ ಅವರು ಅಹ್ಮದಿಯಾದರು.

ಮಾರ್ಷಲ್ ದ್ವೀಪಗಳು ಯುನೈಟೆಡ್ ಸ್ಟೇಟ್ಸ್ ಭೂಪ್ರದೇಶದಲ್ಲಿರುವ ಒಂದು ದ್ವೀಪವಾಗಿದೆ. ಅಲ್ಲಿನ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ: ಹರ್ಮನ್ ಲಾಜರ್ ಸಾಹಿಬ್ ಕಾಲೇಜೊಂದರಲ್ಲಿ ಬೋಧಕರಾಗಿದ್ದಾರೆ. ಪವಿತ್ರ ಖುರ್‌ಆನ್‌ನ ಒಂದು ಆಯತ್ ಅನ್ನು ಮಾರ್ಷಲೀಸ್ ಭಾಷೆಗೆ ಅನುವಾದಿಸಬೇಕಾಗಿತ್ತು, ಆದ್ದರಿಂದ ಬೋಧಕರು ಇದಕ್ಕಾಗಿ ಅವರನ್ನು ಸಂಪರ್ಕಿಸಿದರು. ಅವರು ಅನುವಾದಕ್ಕಾಗಿ ಅವರ ಬಳಿಗೆ ಹೋದಾಗ ಮತ್ತು ಅದು ಪವಿತ್ರ ಖುರ್‌ಆನ್‌ನ ಶ್ಲೋಕ ಎಂದು ತಿಳಿದಾಗ, ಅವರಿಗೆ ಇಸ್ಲಾಂ ಸಂಪೂರ್ಣವಾಗಿ ಹೊಸದು ಎಂದು ಅವರು ಹೆದರುತ್ತಿದ್ದರು. ಅವರು ಹೇಳಿದರು, ನಾನು ಧಾರ್ಮಿಕವಾದ ಯಾವುದನ್ನಾದರೂ ಭಾಷಾಂತರಿಸಲು ಹೆದರುತ್ತೇನೆ, ವಿಶೇಷವಾಗಿ ಬೈಬಲ್ ಮತ್ತು ಖುರ್‌ಆನ್ ನಡುವೆ ಬಲವಾದ ವ್ಯತ್ಯಾಸವಿದೆ. ಆದಾಗ್ಯೂ, ಅವರು ಅದನ್ನು ಅನುವಾದಿಸಿದರು. ಅವರು ಹೇಳುತ್ತಾರೆ ಕೆಲವು ತಿಂಗಳ ನಂತರ ನಾನು ಅವರಿಂದ ಮಾರ್ಷಿಯಲ್ ಭಾಷೆಯನ್ನು ಕಲಿಯಲು ಪ್ರಾರಂಭಿಸಿದೆ. ಭಾಷೆ ಕಲಿಸಲು ಮಸೀದಿಗೆ ಬರುತ್ತಲೇ ಇದ್ದರು. ಈ ವೇಳೆ ಹಲವು ಬಾರಿ ಇಸ್ಲಾಂ ಧರ್ಮದ ಬಗ್ಗೆ ಚರ್ಚೆ ನಡೆದಿದೆ. ಹಝ್ರತ್ ಪೈಗಂಬರ್(ಸ) ಅವರ ಬೋಧನೆಗಳನ್ನು ಪರಿಚಯಿಸಲಾಯಿತು ಹೀಗೆ ಅವರು ಇಸ್ಲಾಂ ಧರ್ಮದ ಬೋಧನೆಗಳೊಂದಿಗೆ ಚೆನ್ನಾಗಿ ಪರಿಚಿತರಾದರು. ನಾನು ಮಾರ್ಷಲ್ ಐಲ್ಯಾಂಡ್‌ನ ಮುಬಲ್ಲಿಗ್ ಸಾಹಿಬ್ ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ "ನಮ್ಮ ಬೋಧನೆಗಳು" ಪುಸ್ತಕವನ್ನು ಮಾರ್ಷಲೀಸ್ ಭಾಷೆಗೆ ಭಾಷಾಂತರಿಸಲು ಸಂದೇಶವನ್ನು ಕಳುಹಿಸಿದೆ. ಏಕೆಂದರೆ ಹೊಸ ಅಹ್ಮದೀಯರಿಗೆ ಹೆಚ್ಚಿನ ತರಬೇತಿಯ ಅಗತ್ಯವಿರುವುದರಿಂದ, ನಾನು ಈ ಬಗ್ಗೆ ಲಾಜರ್ ಸಾಹಿಬ್ ಅವರೊಂದಿಗೆ ಮಾತನಾಡಿದ್ದೆ ಅದಕ್ಕೆ ಅವರು ಸಹಾಯ ಮಾಡಲು ಒಪ್ಪಿಕೊಂಡರು. ಅವರು ಹೇಳಲುತ್ತಾರೆ: ಈಗ ಇಸ್ಲಾಂ ಬಗ್ಗೆ ಅವರ ಧೋರಣೆ ಸಂಪೂರ್ಣ ಬದಲಾಗಿದೆ. ಈ ವೇಳೆ ಅವರು ತಮ್ಮ ಉದ್ಯೋಗ ಸಮಸ್ಯೆ ಬಗ್ಗೆ ಪ್ರಸ್ತಾಪಿಸಿದರು. ಅದಕ್ಕೆ ನಾನು ಅವರಿಗೆ ಪ್ರಾರ್ಥಿಸಲು ಹೇಳಿದೆ ಆದರೆ ಯೇಸುವಿನ ಹೆಸರಿನೊಂದಿಗೆ ಅಲ್ಲ. ಅಲ್ಲಾಹನ ಮುಂದೆ ದುಆ ಮಾಡಬೇಕು. ಹೀಗೆ ಅವರು ಪ್ರಾರ್ಥಿಸುತ್ತಲೇ ಇದ್ದರು ಮತ್ತು ಕೆಲವು ವಾರಗಳ ನಂತರ ಸಂಸ್ಕೃತಿ ಸಚಿವಾಲಯವು ಹೊಸ ಇಲಾಖೆಯನ್ನು ತೆರೆದು ಅವರ ಕ್ಷೇತ್ರದಲ್ಲಿ ಅವರಿಗೆ ಕೆಲಸ ನೀಡಿತು. ಅವರು ಎಲ್ಲಿ ಅರ್ಜಿ ಸಲ್ಲಿಸಿದ್ದರೂ ಅವರಿಗೆ ತಕ್ಷಣ ಅಲ್ಲಿ ಕೆಲಸ ಲಭಿಸಿತು. ಅದಕ್ಕೆ ಅವರು ಹೇಳಿದರು ಈಗ ನಾನು ಪ್ರಾರ್ಥಿಸುವಾಗ, ನಾನು ಹಝ್ರತ್ ಈಸಾ(ಅ)ರ ಹೆಸರನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸುತ್ತೇನೆ ಮತ್ತು ಬದಲಿಗೆ ಸರ್ವಶಕ್ತನಾದ ಅಲ್ಲಾಹನಲ್ಲಿ ಪ್ರಾರ್ಥಿಸುತ್ತೇನೆ ಎಂದು ಅವರು ಹೇಳಿದರು. ಸ್ವಲ್ಪ ಸಮಯದ ನಂತರ, ಅವರು ಕೆಲಸದ ಅನುಮೋದನೆ ಪಡೆದರು. ಪ್ರಾರ್ಥನೆಯ ಅಂಗೀಕಾರದ ಈ ಚಿಹ್ನೆಯನ್ನು ನೋಡಿದ ಲಾಜರ್ ಸಾಹಿಬ್ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮಾತುಗಳನ್ನು ಓದಿ ಬೈಅತ್ ಮಾಡಿದರು ಮತ್ತು ಮಾರ್ಶಲೀಸ್ನಲ್ಲಿ "ನಮ್ಮ ಶಿಕ್ಷಣ" ಎಂಬ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪುಸ್ತಕದ ಅನುವಾದ ಸಹ ಪೂರ್ಣಗೊಂಡಿದೆ.

ಸರ್ವಶಕ್ತನಾದ ಅಲ್ಲಾಹನು ಹೇಗೆ ಜನರ ಹೃದಯಗಳನ್ನು ಇಸ್ಲಾಂ ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಕಡೆಗೆ ತಿರುಗಿಸಿರುವನು ಎಂದು ನೋಡಿರಿ. ಕ್ರೈಸ್ತರು ಲೋಕದಲ್ಲಿ ತಮ್ಮ ಬಾವುಟಗಳನ್ನು ಹಾರಿಸುವ ಮಾತುಗಳನ್ನಾಡುತ್ತಿದ್ದ ಒಂದು ಕಾಲವಿತ್ತು. ಈಗ ಕ್ರೈಸ್ತರು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತಾಕೆಯ ಕೆಳಗೆ ಬರುತ್ತಿದ್ದಾರೆ. ಇವೆಲ್ಲವನ್ನು ನೋಡಿಯೂ ಈ ನಾಮಧಾರಿ ಧರ್ಮರಕ್ಷಕರ ಕಣ್ಣುಗಳು ತೆರೆಯುತ್ತಿಲ್ಲವೆಂದಾದರೆ ಅವರ ವಿಷಯ ಅಲ್ಲಾಹನಿಗೆ ಬಿಟ್ಟಿದೆ.

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ
ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**

ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರ ಮೂಲಕ ಇಸ್ಲಾಮಿನ ಸಂದೇಶವನ್ನು ಲೋಕದ ಮೂಲೆ ಮೂಲೆಗೆ ತಲುಪಿಸುವ ಕೆಲಸವನ್ನು ಅಹ್ಮದಿಯಾ ಜಮಾಅತಿನ ಮೂಲಕ ಮಾಡುತ್ತಿದ್ದಾನೆ. ಅದು ಹರಡುವುದು, ಫಲ ನೀಡುವುದು ಮತ್ತು ಹೂ ಬಿಡುವುದು – ಇನ್‌ಶಾ ಅಲ್ಲಾಹ್. ಈ ದೈವಿಕ ಕೆಲಸವನ್ನು ತಡೆಯಲು ಯಾರಿಂದಲೂ ಸಾಧ್ಯವಲ್ಲ. ಆದರೆ ಹಝ್ರತ್ ಮಸೀಹ್ ಮೌಊದ್(ಅ)ರ ವಾದಗಳನ್ನು ನಂಬುವುದು ಮಾತ್ರ ಸಾಕಾಗುವುದಿಲ್ಲ ಎಂಬ ಸಂಗತಿಯನ್ನು ಪ್ರತಿಯೊಬ್ಬ ಅಹ್ಮದಿ ಅರಿತಿರಬೇಕು. ಬದಲಾಗಿ ನಾವು ನಮ್ಮೊಳಗೆ ಪರಿಶುದ್ಧವಾದ ಪರಿವರ್ತನೆಗಳನ್ನು ಉಂಟುಮಾಡಬೇಕಾಗಿದೆ. ಅಲ್ಲಾಹನು ಕಳುಹಿಸಿದ ಬೋಧನೆಗಳ ನೈಜ ಮಾದರಿಯಾಗಬೇಕಾಗಿದೆ. ಹಝ್ರತ್ ಪೈಗಂಬರ್(ಸ)ರ ಸುನ್ನತಿನ ಮೇಲೆ ನಡೆಯುವ ಕರ್ಮಪರವಾದ ರೂಪವಾಗಬೇಕಾಗಿದೆ. ಹಾಗೆ ಆದರೆ ಮಾತ್ರ ನಾವು ಅಲ್ಲಾಹನ ಅನುಗ್ರಹಗಳ ವಾರಸುದಾರರಾಗುವೆವು. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ.

ಪೆಲಸ್ತೀನಿಯರಿಗಾಗಿಯೂ ದುಆಗಳನ್ನು ಮಾಡುತ್ತಿರಿ. ಅವರ ಮೇಲೆ ಆಗುತ್ತಿರುವ ಈ ಪೀಡನೆಯಿಂದ ಅಲ್ಲಾಹನು ಅವರಿಗೆ ಮುಕ್ತಿ ನೀಡಲಿ. ಅಗತ್ಯ ವಸ್ತುಗಳು ತಲುಪಲಿಕ್ಕಾಗಿ ಈಗ ಕೆಲವು ದಿನಗಳಿಗೆ ಯುದ್ಧವನ್ನು ನಿಲ್ಲಿಸಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಅದರ ನಂತರ ಏನಾಗುವುದು? ಸಹಾಯ ತಲುಪಿಸಿ ಪುನಃ ಅವರನ್ನು ಕೊಲ್ಲುವರೇ? ಇಸ್ರೇಲ್ ಸರ್ಕಾರದ ಉದ್ದೇಶಗಳು ಅಪಾಯಕರವೆಂದು ತೋರುತ್ತಿವೆ. ಏಕೆಂದರೆ ಈ ಯುದ್ಧ ವಿರಾಮದ ನಂತರ ಬೇಗನೇ ಯುದ್ಧವನ್ನು ಪುನಃ ಆರಂಭಿಸದಿದ್ದರೆ ತಾನು ರಾಜಿನಾಮೆ ನೀಡುವೆನು ಎಂದು ಅವರ ಸರ್ಕಾರದ ಒಬ್ಬ ಪ್ರಧಾನ ಸಲಹೆಗಾರ ಮೊನ್ನೆ ಘೋಷಿಸಿದ್ದನು. ಅವರ ಯೋಚನೆಗಳು ಈ ರೀತಿಯದ್ದಾಗಿವೆ.

ದೊಡ್ಡ ಶಕ್ತಿಗಳು ಬಾಹ್ಯವಾಗಿ ಸಹಾನುಭೂತಿಯ ಮಾತುಗಳನ್ನಾಡುತ್ತಾರೆ. ಆದರೆ ನ್ಯಾಯಪಾಲನೆಯನ್ನು ಬಯಸುವುದಿಲ್ಲ ಮತ್ತು ಈ ವಿಷಯದಲ್ಲಿ ಅವರು ಗಂಭೀರವಾಗಿಯೇ ಇಲ್ಲ. ಅವರಿಗೆ ಅದರ ಅರಿವಿಲ್ಲ. ಈ ಯುದ್ಧ ಅಲ್ಲಿಗೇ ಸೀಮಿತವಾಗಿರುವುದು ಎಂದು ಅವರು ಭಾವಿಸುತ್ತಾರೆ. ಆದರೆ ಈ ಯುದ್ಧ ಆ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರದು; ಬದಲಾಗಿ ಹೊರಗೂ ಹರಡುವುದು ಮತ್ತು ಅವರ ದೇಶಗಳಿಗೂ ತಲುಪುವುದು ಎಂದು ಅವರಲ್ಲಿ ಬುದ್ಧಿವಂತರು ಹೇಳಲು ಆರಂಭಿಸಿದ್ದಾರೆ.

ಮುಸ್ಲಿಂ ಸರ್ಕಾರಗಳು ಕೂಡಾ ಸ್ವಲ್ಪ ಹೇಳಲು ತೊಡಗಿವೆ. ಉದಾಹರಣೆಗೆ, ಮುಸ್ಲಿಮರ ಒಂದು ಏಕ ಸ್ವರ ಇರಬೇಕು ಎಂದು ಸೌದಿ ರಾಜ ಕೂಡ ಹೇಳಿದ್ದಾಗಿ ಕೇಳಿದ್ದೇನೆ. ಆದ್ದರಿಂದ ಒಂದು ಸ್ವರ ಮಾಡಬೇಕಾಗುವುದು. ಅದಕ್ಕಾಗಿ ಶಕ್ತವಾದ ಪ್ರಯತ್ನ ಮಾಡಬೇಕಾಗುವುದು. ಅವರಿಗೆ ಈ ಅರಿವು ಉಂಟಾಗಿದ್ದರೆ, ಈ ಅರಿವನ್ನು ಕೃತ್ಯರೂಪಕ್ಕೆ ತರಲು ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಲಿ. ಹೇಗಿದ್ದರೂ ದುಆಗಳ ಕಡೆಗೆ ಬಹಳಷ್ಟು ಗಮನಹರಿಸಿರಿ.

ನಮಾಝಿನ ನಂತರ, ನಾನು ಕೆಲವು ನಮಾಝೆ ಜನಾಝ ಗ಼ಯಿಬ್ ಪಠಿಸುತ್ತೇನೆ. ಮೊದಲ ಉಲ್ಲೇಖವು ಅಬ್ದುಲ್ ಸಲಾಂ ಆರಿಫ್ ಸಾಹಿಬ್ ಮುರಬ್ಬಿ ಸಿಲ್‌ಸಿಲಾ ಅವರದ್ದಾಗಿದೆ. 94ನೇ ವಯಸ್ಸಿನಲ್ಲಿ ಇತ್ತೀಚೆಗೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿ ಆಗಿದ್ದರು. 1937 ರಲ್ಲಿ ದ್ವಿತೀಯ ಖಿಲಾಫತ್ತಿನ ಕಾಲಘಟ್ಟದಲ್ಲಿ ಅವರ ಮುತ್ತಜ್ಜ ಮಾನ್ಯ ಹಾಜಿ ಹಸನ್ ಖಾನ್ ಸಾಹಿಬ್ ಅವರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯತ್ ಬಂದಿತು. ಅವರ ಪತ್ನಿಯೂ ನಿಧನಹೊಂದಿದ್ದಾರೆ. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಇಬ್ಬರು ಪುತ್ರರನ್ನು ಅನುಗ್ರಹಿಸಿದನು ಮತ್ತು ಇಬ್ಬರೂ ಪವಿತ್ರ ಖುರ್‌ಆನ್‌ನ ಹಾಫಿಝ್ ಆಗಿದ್ದಾರೆ. ಒಬ್ಬರು ಮುರಬ್ಬಿ ಆಗಿದ್ದಾರೆ ಇನ್ನೊಬ್ಬರು ಬಹುಶಃ ವಾಖಿಫೆ ಝಿಂದಗಿಯಾಗಿದ್ದಾರೆ.

ಅವರ ಪುತ್ರ ಹಾಫಿಝ್ ಅಬ್ದುಲ್ ಮುನ್‌ಅಮ್ ಸಾಹಿಬ್ ಮುರಬ್ಬಿ ಸಿಲ್ಸಿಲಾ ಹೇಳುತ್ತಾರೆ: ಅವರು ತುಂಬಾ ಪ್ರೀತಿಯಿಂದ ವರ್ತಿಸುತ್ತಿದ್ದರು. ಪ್ರೀತಿಯಿಂದ ತರಬೇತಿ ನಿಡುತ್ತಿದ್ದರು. ಅವರು ತಮ್ಮ ಮಕ್ಕಳನ್ನು ಪ್ರೀತಿಸುವುದು ಮಾತ್ರವಲ್ಲದೆ ಸಮುದಾಯದ ಬಗ್ಗೆ ಹೆಚ್ಚಿನ ದಯೆ ಮತ್ತು ಪ್ರೀತಿಯನ್ನು ಹೊಂದಿದ್ದರು. ಅವರು ಜನರನ್ನೂ ತುಂಬಾ ಪ್ರೀತಿಸುತ್ತಿದ್ದರು. ಇದೇ ಕಾರಣಕ್ಕೆ ಅವರ ಸಂತಾಪಕ್ಕೆ ಹಲವರು ಬಂದು ತಮ್ಮ ಸಂಬಂಧವನ್ನು ಪ್ರಸ್ತಾಪಿಸಿದ್ದಾರೆ. ಅಲ್ಲಾಹ್ ಮತ್ತು ಅವನ ಸಂದೇಶವಾಹಕ, ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಖಿಲಾಫತ್‌ನ ಪ್ರೀತಿಯು ನಮ್ಮ ಹೃದಯದಲ್ಲಿ ಎಷ್ಟು ಪ್ರಬಲವಾಗಿ ಇರಿಸಿದ್ದಾರೆ ಎಂದರೆ ಅದು ಇನ್ನು ಮುಂದೆ ನಮ್ಮ ಹೃದಯವನ್ನು ಬಿಡಲು ಸಾಧ್ಯವಿಲ್ಲ. ನಮ್ಮ ತಾಯಿ

"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))

ದುಆವಿನ ಆಕಾಂಕ್ಷಿ:
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.05, Thursday, 04, 11 January 2024, Issue No. 01-02

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ನಿಧನಗೊಂಡಾಗ ತುಂಬಾ ತಾಳ್ಮೆ ವಹಿಸಿ ನಮಗೂ ತಾಳ್ಮೆಯಿಂದ ಇರುವಂತೆ ಸಲಹೆ ನೀಡಿದ್ದರು.

ಅವರ ಓರ್ವ ಮುರಬ್ಬಿ ಸ್ನೇಹಿತರು ರಾಜಾ ಮುಬಾರಕ್ ಸಾಹಿಬ್ ಹೇಳುತ್ತಾರೆ: ನಾನು ಅವರ ಸಹಪಾಠಿ ಮತ್ತು ಜಾಮಿಯಾದಲ್ಲಿ ಮತ್ತು ಕ್ಷೇತ್ರದಲ್ಲಿ ಅವರೊಂದಿಗೆ ಹೆಚ್ಚಿನ ಸಮಯವನ್ನು ಕಳೆದಿದ್ದೇನೆ ಮತ್ತು ಅವರು ದೇವದೂತ ವ್ಯಕ್ತಿಯಾಗಿದ್ದರು. ಆರಾಧನೆಯಲ್ಲಿಯೂ ಉನ್ನತ ಸ್ಥಾನ, ಹಿರಿತನದಲ್ಲಿ ಉನ್ನತ ಸ್ಥಾನ ಪಡೆದಿದ್ದರು. ಅವರಿಂದ ನಾನು ಸಾಕಷ್ಟು ಕಲಿತಿದ್ದೇನೆ. ತುಂಬಾ ಸಭ್ಯ ಭಾಷೆ ಬಳಸುತ್ತಿದ್ದರು. ಸಾಕ್ಷ್ಯಾಧಾರದಿಂದ ಮಾತನಾಡುತ್ತಿದ್ದರು, ಯಾರೊಂದಿಗೂ ಜಗಳವಾಡಲಿಲ್ಲ. ಜನರು ಅವರೊಂದಿಗೆ ಜಗಳವಾಡುತ್ತಿದ್ದರು, ನಿಂದಿಸುತ್ತಿದ್ದರು, ಆದರೆ ಅವರು ಯಾವಾಗಲೂ ನಗುವಿನೊಂದಿಗೆ ಭೇಟಿಯಾಗುತ್ತಿದ್ದರು. ಎಂದಿಗೂ ಅವಮಾನಿಸಲು ಪ್ರಯತ್ನಿಸಲಿಲ್ಲ ಮತ್ತು ಎಲ್ಲರನ್ನೂ ಉತ್ತಮವಾಗಿ ನೋಡಿಕೊಂಡರು ಮತ್ತು ವಾಸ್ತವವಾಗಿ ಇದು ನಿಜವಾದ ಮುಬಲ್ಲಿಗ್‌ನ ಲಕ್ಷಣವಾಗಿದೆ. ಮತ್ತು ಅವರು ಹೇಳುತ್ತಾರೆ: ಅವರು ವಾಸಿಸುತ್ತಿದ್ದಲ್ಲೆಲ್ಲಾ ನೂರಾರು ಜನರ ಮನಸ್ಸಿನಲ್ಲಿ ಖಿಲಾಫತ್‌ನೊಂದಿಗೆ ಪ್ರೀತಿಯನ್ನು ತುಂಬಿದ್ದರು. ಅವರು ಎಷ್ಟು ಆಳವಾಗಿ ಹೋಗಿ ತರಬೇತಿಯನ್ನು ನೀಡಿದ್ದಾರೆ ಎಂದರೆ ಅವರ ಮರಣದ ನಂತರ ಅವರು ವಾಸಿಸುತ್ತಿದ್ದಲ್ಲೆಲ್ಲಾ ಜನರು ಬಂದು ಮುರಬ್ಬಿ ಸಾಹಿಬ್ ಅವರನ್ನು ಉಲ್ಲೇಖಿಸಿ ನಮ್ಮ ಸಮುದಾಯವು ಇಂದು ಅನಾಥವಾಗಿದೆ ಎಂದು ಕೂಗಿ ಕೂಗಿ ಅಳಲು ತೋಡಿಕೊಂಡರು. ಅವರು ಕಾಲ್ನಡಿಗೆಯಲ್ಲಿ ಅನೇಕ ಮೈಲುಗಳಷ್ಟು ಪ್ರಯಾಣಿಸುತ್ತಿದ್ದರು. 5 ರಿಂದ 10 ಕಿಲೋಮೀಟರ್ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರು ಮತ್ತು ಜಮಾಅತ್‌ನ ಸೌಲಭ್ಯಗಳನ್ನು ನೀಡುತ್ತದೆ, ರಿಕ್ಷಾ ಬಾಡಿಗೆ ಇತ್ಯಾದಿಗಳನ್ನು ಹೇಳಿದಾಗ ಅವರು "ನಾನು ಜಮಾತ್ಗೆ ಹಣವನ್ನು ಉಳಿಸಿದರೆ, ನಿಮಗೆ ಏನು ತೊಂದರೆ?" ಎಂದು ಹೇಳುತ್ತಿದ್ದರು ಮತ್ತು ಅವರು ಕಾಲ್ನಡಿಗೆಯಲ್ಲಿ ಪ್ರಯಾಣಿಸುತ್ತಿದ್ದರು, ಅವರು ಮೈಲುಗಳಷ್ಟು ಪ್ರಯಾಣಿಸುತ್ತಿದ್ದರು. ಅಲ್ಲಾಹನು ಅವರ ಉನ್ನತ ಪದವಿಯನ್ನು ಹೆಚ್ಚಿಸಲಿ ಮತ್ತು ಅಲ್ಲಾಹನು ಜಮಾಅತ್‌ಗೆ ಇಂತಹ ನಿಷ್ಠಾವಂತ ಮತ್ತು ಕಠಿಣ ಪರಿಶ್ರಮಿ ಮುರಬ್ಬಿಯರನ್ನು ನೀಡಲಿ ಮತ್ತು ಅವರ ಉತ್ತಮ ಕಾರ್ಯಗಳನ್ನು ಮುಂದುವರಿಸಲು ಮಕ್ಕಳಿಗೆ ಅವಕಾಶವನ್ನು ನೀಡಲಿ.

ಎರಡನೆಯ ಉಲ್ಲೇಖವೆಂದರೆ ಇತ್ತೀಚಿನ ದಿನಗಳಲ್ಲಿ ಕೆನಡಾದಲ್ಲಿದ್ದ ಮುಹಮ್ಮದ್ ಖಾಸಿಮ್ ಖಾನ್ ಸಾಹಿಬ್. ಅವರು ಬೈತುಲ್–ಮಾಲ್ ನ ಮಾಜಿ ಉಪ ನಾಝಿರ್ ಆಗಿದ್ದರು. ಅವರು ನಿವೃತ್ತರಾಗಿದ್ದರು. ಅವರು ತಮ್ಮ ಎಂಬತ್ತಮೂರನೇ ವಯಸ್ಸಿನಲ್ಲಿ ನಿಧನರಾದರು, **ಇನ್ನಾ ಲಿಲ್ಲಹಿ ವ ಇನ್ನಾ ಇಲೈಹಿ ರಾಜಿಊನ್** ಅವರು ನಝೀರ್ ಅಹ್ಮದ್ ಖಾನ್ ಸಾಹಿಬ್ ಅವರ ಪುತ್ರ ಮತ್ತು ಖಾಜಿ ಮೊಹಮ್ಮದ್ ನಝೀರ್ ಲಾಲ್ಪುರಿ ಸಾಹಿಬ್ ಅವರ ಅಳಿಯ ಆಗಿದ್ದರು. ಅವರ ಪುತ್ರ ಮುಹಮ್ಮದ್ ಖಾಲಿದ್ ಖಾನ್ ಹೇಳುತ್ತಾರೆ ಅವರಿಗೆ ಖಿಲಾಫತ್ ನ ನಾಲ್ಕು ಅವಧಿಗಳನ್ನು ನೋಡುವ ಅವಕಾಶ ಲಭಿಸಿತು. ತೃತೀಯ ಖಿಲಾಫತ್ತಿನ ಕಾಲಘಟ್ಟದಲ್ಲಿ ಅವರಿಗೆ ಸಂಪೂರ್ಣ ಅವಧಿಯಲ್ಲಿ ಪ್ರೈವೇಟ್ ಸೆಕ್ರೇಟರಿಯ ಕಚೇರಿಯಲ್ಲಿ ಸೇವೆ ಸಲ್ಲಿಸಲು ಅವರಿಗೆ ಲಭಿಸಿತ್ತು. ಮುಜಾಹಿದ್ ಫೋರ್ಸ್‌ನಲ್ಲಿ ನಾಯಕನಾಗಿ ದೇಶ ಮತ್ತು ಜಮಾಅತ್ತಿಗೆ ಸೇವೆ ಸಲ್ಲಿಸುವ ಅವಕಾಶವನ್ನು ಪಡೆದರು. ಯುದ್ಧದ ದಿನಗಳಲ್ಲಿ ಫುರ್ಕಾನ್ ಫೋರ್ಸ್ ಕೂಡ ರಚನೆಯಾಯಿತು ಮತ್ತು ಅದರಲ್ಲಿ ಇವರು ಇದ್ದರು. ಐದು ಹೊತ್ತಿನ ನಮಾಝ್ ಅನ್ನು ನಿಯಮಿತವಾಗಿ ಪಠಿಸುತ್ತಿದ್ದರು, ಪವಿತ್ರ ಖುರ್‌ಆನ್‌ನ ಪಠಣ ಬಹಳ ಮುಖ್ಯವಾಗಿತ್ತು. ಅವರ ಮಕ್ಕಳಿಗೂ ಸಲಹೆ ನೀಡುತ್ತಿದ್ದರು. ಅವರು ಸರಳತೆ ಮತ್ತು ಪ್ರಾಮಾಣಿಕತೆಯ ಪ್ರತಿರೂಪವಾಗಿದ್ದರು. ಅವರು ಮಕ್ಕಳನ್ನು ಖಿಲಾಫತ್ತಿನೊಂದಿಗೆ ಸಂಬಂಧ ಇರಿಸಲು ಒತ್ತು ನೀಡುತ್ತಿದ್ದರು. ಅಲ್ಲಾಹನು ಅವರ ಮಗ್‌ಫಿರತ್ ಹಾಗೂ ಕರುಣೆಯನ್ನು ನೀಡಲಿ ಮತ್ತು ಅವರ ಒಳ್ಳೆಯ ಕಾರ್ಯಗಳನ್ನು ಅವರ ಮಕ್ಕಳನ್ನು ಮುಂದುವರಿಸಲು ಅವಕಾಶ ನೀಡಲಿ.

ನಮ್ಮ ಜಮಾಅತ್ ನ ಖ್ಯಾತ ಕವಿ ಅಬ್ದುಲ್ ಕರೀಂ ಖುದ್ಸಿ ಸಾಹಿಬ್ ಇತ್ತೀಚೆಗೆ ನಿಧನರಾದರು. ಅವರ ಬಗ್ಗೆ ಒಂದು ಉಲ್ಲೇಖವಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರ ಕುಟುಂಬದಲ್ಲಿ ಅಹ್ಮದೀಯತ್ ಅವರ ತಂದೆ ಮಿಯಾಂ ಅಲ್ಲಾಹ್ ದಿತ್ತ ಸಾಹಿಬ್ ಮೂಲಕ ಪ್ರವೇಶಿಸಿತು, ಅವರು 1934 ರಲ್ಲಿ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಕೈ ಮೇಲೆ ಬೈಅತ್ ಮಾಡಿದರು. ನಂತರ ಅಹ್ಮದಿಯಾದ ನಂತರ, ಅವರು ತಮ್ಮ ಇಡೀ ಜೀವನವನ್ನು ವಕ್ಫ್ ಆಗಿ ಕಳೆದರು. ಯಾವಾಗಲೂ ತಬ್ಲೀಗ್ ಮಾಡುತ್ತಿದ್ದರು. ಅನೇಕ ಕುಟುಂಬಗಳನ್ನು ಅವರು ಅಹ್ಮದಿಯತ್ತಿಗೆ ಸೇಡಿಸಿದರು ಮತ್ತು ತಮ್ಮ ಜೀವನದುದ್ದಕ್ಕೂ ವಕ್ಫ್‌ನ ಮನೋಭಾವದಿಂದ ಜಮಾತ್‌ಗೆ ಸೇವೆ ಸಲ್ಲಿಸಿದರು.

ಅವರ ಪತ್ನಿ ಬುಶ್ರಾ ಕರೀಮ್ ಸಾಹಿಬಾ, ಅವರ ನಿಕಾಹ್‌ವನ್ನು ಹಝ್ರತ್ ಖಲೀಫತುಲ್ ಮಾಸಿಹ್ ಸಾಲಿಸ್(ರಹ್)ರವರು ನಿರ್ವಹಿಸಿದ್ದರು. ಮತ್ತು ಅವರಿಗೆ ನಾಲ್ಕು ಮಕ್ಕಳಿದ್ದಾರೆ, ಒಬ್ಬ ಮಗ, ಅಬ್ದುಲ್ ಕಬೀರ್ ಖಮರ್ ಸಾಹಿಬ್, ಮುರಬ್ಬಿ ಸಿಲ್ಸಿಲ ಮತ್ತು ಈಗ ಅವರು ಜಾಮಿಯಾ ಅಹ್ಮದಿಯಾ ರಬ್ವಾದಲ್ಲಿ ಶಿಕ್ಷಕರಾಗಿದ್ದಾರೆ. ಸ್ವತಃ ಖುದ್ಸಿ ಸಾಹೇಬರು ಕೂಡ ಜಮಾಅತ್‌ನ ಸೇವೆಯನ್ನು ಮುಂದುವರೆಸಿದರು. 30 ವರ್ಷಗಳ ಕಾಲ ಅವರು ಲಾಹೋರ್‌ನ ಅಹ್ಮದೀಯ ರಚನಾ ಟೌನ್ ಜಿಲ್ಲೆಯ ಕಾರ್ಯದರ್ಶಿಯಾಗಿದ್ದರು. ಅಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಅವರ ಕವನ ಚೆನ್ನಾಗಿತ್ತು. ತುಂಬಾ ಕವನ ಹೇಳುತ್ತಿದ್ದರು. ಸಂಗ್ರಹವೂ ಇದೆ. ಅವರ ಪದಗಳ ಸಂಗ್ರಹವನ್ನು ಮುದ್ರಿಸಲಾಗಿದೆ. ಖಸೀದಾ **ಯಾ ಐನ ಫೈಝಿಲ್ಲಾಹಿ ವಲ್ ಇರ್ಫಾನಿ** ಅವರ ಉರ್ದು ಭಾಷಾಂತರ ಮತ್ತು ಪಂಜಾಬಿ ಭಾಷಾಂತರವು ಅವರಿಗೆ ಸೇರಿರುವ ಒಂದು ಅಸಾಮಾನ್ಯ ಕೃತಿಯಾಗಿದೆ. ಇದಲ್ಲದೆ, ಅವರು ಸುರ್ರೆ ಸಮೀನ್‌ನ ಮುನ್ನೂರ ಹದಿಮೂರು ಕವಿತೆಗಳನ್ನು ಪಂಜಾಬಿ ಬಾಷೆಗೆ ಅನುವಾದಿಸಿದ್ದಾರೆ.

ಒಂದು ಕಾಲದಲ್ಲಿ ಅವರು ಜಮಾತ್‌ನಿಂದ ಸ್ವಲ್ಪ ಸ್ವತಂತ್ರರಾಗಬೇಕು ಎಂಬ ಗೀಳನ್ನು ಹೊಂದಿದ್ದರು ಎಂದು ಹೇಳಲಾಗುತ್ತದೆ, ಆದ್ದರಿಂದ ಅವರೇ 1968 ರಲ್ಲಿ ತಮ್ಮ ಗ್ರಾಮವಾದ ಕರ್ತು ಪಂಡೋರಿಯಿಂದ ಲಾಹೋರ್‌ಗೆ ಕೆಲಸದ ನಿಮಿತ್ತ ಬಂದರು ಇಲ್ಲಿಗೆ ಬಂದ ನಂತರ ಜಾತ್ಯತೀತ ಚಿಂತನೆಗಳು ಬರಲು ಪ್ರಾರಂಭಿಸಿದವು. ಅವರು ನಮಾಝ್ ನಿರ್ವಹಿಸುತ್ತಿದ್ದರು. ಮಸೀದಿಯು ದೂರ ಇದ್ದಿದ್ದರಿಂದ ಕೆಲವೊಮ್ಮೆ ಮಸೀದಿಗೆ ಹೋಗುತ್ತಿದ್ದರು ಕೆಲವೊಮ್ಮೆ ಮಸೀದಿ ಹೊಗುತ್ತಿರಲಿಲ್ಲ. ಜುಮುಅ ಯಾವಾಗಾದರು ಪಠಿಸುತ್ತಿದ್ದೆ ಇಲ್ಲದಿದ್ದರೆ ಇಲ್ಲ. ಅವರು ಹೇಳುತ್ತಾರೆ: ಒಮ್ಮೆ ಜುಮುಅದಂದು ಸ್ನೇಹಿತರೊಬ್ಬರ ಮನೆಯಲ್ಲಿ ಔತಣವಿತ್ತು. ಪಕ್ಕದ ಮಸೀದಿಯು ಅಹಮದಿಯೇತರರಿಗೆ ಸೇರಿತ್ತು. ಜುಮುಅವನ್ನು ಪಠಿಸಲು ಅಲ್ಲಿಗೆ ಹೋಗಿದ್ದೆ. ಅಲ್ಲಿ ಹೇಳಿದ ಮೌಲ್ವಿಗಳ ಪರಿಸ್ಥಿತಿ ಇಂದಿಗೂ ಹಾಗೆಯೇ ಇದೆ. ಹಾಗಾಗಿ ಮೌಲ್ವಿ ಸಾಹಿಬ್ ಶಿಜಾನ್ ವಿರುದ್ಧ ಅರ್ಧ ಖುತ್ಬವನ್ನು ನೀಡಿದರು. ಶಿಜಾನ್ ಅಹ್ಮದೀಯರಿಗೆ ಸೇರಿತ್ತು. ಒಂದು ಪಾನೀಯವಾಗಿದೆ. ಅಹ್ಮದಿ ಕಾರ್ಖಾನೆಗಳಲ್ಲಿ ತಯಾರಿಸಲಾಗುತ್ತದೆ. ಆದಾಗ್ಯೂ, ಅವರು ಹೇಳುತ್ತಾರೆ, ಇತರ ವಿಷಯಗಳ ಹೊರತಾಗಿ, ಆ ಜನರು ಅದರಲ್ಲಿ ರಬ್ವಾಹ್‌ದ ಮಣ್ಣನ್ನು ಬೆರೆಸುತ್ತಾರೆ, ಅಂದರೆ, ಅವರು ರಬ್ವಾಹ್‌ದ ಮಣ್ಣನ್ನು ಶಿಜಾನ್‌ನಲ್ಲಿ ಬೆರೆಸುತ್ತಾರೆ, ಆದ್ದರಿಂದ ಅದನ್ನು ಕುಡಿಯಬಾರದು. ನಾನು ಅವರ ಖುತ್‌ಬವನ್ನು ಕೇಳಿದೆ ಆದರೆ ನಮಾಝ್ ನಿರ್ವಹಿಸದೆ ಓಡಿಹೋದೆ ಎಂದು ಅವರು ಹೇಳುತ್ತಾರೆ. ಏನಾಯಿತು ಎಂದು ಸ್ನೇಹಿತ ಹೇಳಿದನು? ನೀನು ಮೌಲ್ವಿಯ ಅವ್ಯವಹಾರಕ್ಕೆ ಕಿವಿಗೊಡಲಿಲ್ಲವೇ ಎಂದು ನಾನು ಹೇಳಿದೆ. ಅದಕ್ಕೆ ನಿಲ್ಲ ಅವರು ಈ ಕೆಲಸಗಳನ್ನು ಮಾಡುತ್ತಲೇ ಇರುತ್ತಾರೆ ಎಂದರು. ಹೇಗಿದ್ದರೂ ಊಟ ಮುಗಿಸಿ ಹೊರಗೆ ಹೋದಾಗ ಅಂಗಡಿಯೊಂದರಲ್ಲಿ ಆ ಮೌಲ್ವಿ ಸಾಹಿಬ್ ನಿಂತುಕೊಂಡು ಶಿಜಾನ್ ಕುಡಿಯುತ್ತಿರುವುದು ಕಂಡಿತು. ಅದಕ್ಕೆ ನಾನು ಮೌಲ್ವಿ ಸಾಹೇಬರನ್ನು ಕೇಳಿದೆ, ನೀವು ಶಿಜಾನ ವಿರುದ್ಧ ಸಾಕಷ್ಟು ಮಾತನಾಡಿದ್ದೀರಿ, ಈಗ ನೀವೇ ಕುಡಿಯುತ್ತಿದ್ದೀರಿ? ಅದಕ್ಕೆ ಆ ಮೌಲವಿ ಹೀಗೆ ಉತ್ತರಿಸಿದನು ಸ್ಕ್ರೀನ್ ಇರುವ ಯಾವುದೇ ಪಾನೀಯವನ್ನು ಕುಡಿಯಬೇಡಿ ಎಂದು ನನಗೆ ವೈದ್ಯರು ಹೇಳಿದ್ದಾರೆ. ಶಿಜಾನ್‌ಗೆ ಕುಡಿಯಲು ಸೂಚಿಸಲಾಗಿದೆ. ಇದು ಶುದ್ಧವಾಗಿದೆ, ಆದ್ದರಿಂದ ನಾನು ಅದನ್ನು ಔಷಧಿಯಾಗಿ ಕುಡಿಯುತ್ತಿದ್ದೇನೆ ಎಂದನು. ಹಾಗಾದರೆ, ರಬ್ವಾಹ್‌ದ ಮಣ್ಣನ್ನು ಬೆರೆಸುವ ವಿಷಯ ಏನಾಯಿತು? ಆದುದರಿಂದ ಮೌಲ್ವಿ ಸಾಹೇಬರು ನಗುತ್ತಾ ಹೇಳಿದರು ನಾವು ನಮ್ಮ ಭಾಷಣದಲ್ಲಿ ಅಂತಹ ಮಾತುಗಳನ್ನು ಹೇಳದಿದ್ದರೆ 'ನೀನು ಇಷ್ಟು ಗಲಾಟೆ ಮಾಡದಿದ್ದರೆ ನಮ್ಮ ಅಂಗಡಿ ಹೇಗೆ ನಡೆಯುತ್ತೆ'. ಅಂಗಡಿಕಾರರ ಆರೋಪ ನಮ್ಮ ಮೇಲಿದ್ದು, ನಮ್ಮ ಅಂಗಡಿಗಳನ್ನು ನಡೆಸಿಕೊಂಡು ಬಂದಿದ್ದೇವೆ. ಆದಾಗ್ಯೂ, ಅವರು ಅಂತಹ ಅನೇಕ ಪ್ರಕರಣಗಳನ್ನು ಹೊಂದಿದ್ದಾರೆ. ಅವರು ಖಿಲಾಫತ್‌ನೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ನಂತರ ಅವರು ಈ ಸಂಬಂಧವನ್ನು ತಮ್ಮ ಮಕ್ಕಳಿಗೆ ಮತ್ತು ಅವರ ಪೀಳಿಗೆಗೆ ವರ್ಗಾಯಿಸಲು ಪ್ರಯತ್ನಿಸಿದರು ಮತ್ತು ನಾನು ಹೇಳಿದಂತೆ, ಅವರು ಜಮಾಅತ್‌ನ ಪ್ರಸಿದ್ಧ ಕವಿ ಮತ್ತು ಇದನ್ನು ದೊಡ್ಡ ಗೌರವವೆಂದು ಪರಿಗಣಿಸಿದರು. ಜಮಾಅತ್ ಮುಶೈರಾಗಳಲ್ಲಿ ಓದುತ್ತಿದ್ದ ಅವರು ಜಮಾಅತ್ ಬಗ್ಗೆ ಹಲವಾರು ಕವನಗಳನ್ನು ಬರೆಯುವ ಅವಕಾಶವನ್ನು ಪಡೆದರು. ಅಲ್ಲಾಹನು ಅವರಿಗೆ ಕ್ಷಮೆ ಮತ್ತು ಕರುಣೆಯನ್ನು ನೀಡಲಿ.

(ಮುಂದುವರಿಯುವುದು)

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.